# ಕರ್ನಾಟಕದ ತೀರ್ಥಕ್ಷೇತ್ರಗಳು

**ಡಾ.ಕೆ.ಅನಂತರಾಮು**

ಕರ್ನಾಟಕವು ಹಲವು ತೀರ್ಥಕ್ಷೇತ್ರಗಳಿಂದ ಕೂಡಿರುವ ಪವಿತ್ರಭೂಮಿ. ಇತಿಹಾಸ ಪ್ರಸಿದ್ಧವಾದ ಹಲವು ದೇಗುಲಗಳು, ಸಾಧು-ಸಂತರಿಂದ ಪೂತವಾದ ಆಶ್ರಮಗಳು, ಪುರಾಣೇತಿಹಾಸಗಳಲ್ಲಿ ವರ್ಣಿತವಾದ ಕ್ಷೇತ್ರಗಳು ಇಲ್ಲಿವೆ. ಈ ಕುರಿತು ವಿಸ್ತೃತವಾಗಿ ಇಲ್ಲಿ ಬರೆದಿರುವ ಲೇಖಕರು ಕನ್ನಡದ ಪ್ರಸಿದ್ಧ ಬರಹಗಾರರು. ನಿವೃತ್ತ ಪ್ರಾಧ್ಯಾಪಕರಾಗಿರುವ ಅವರು ತಮ್ಮ ಅನೇಕ ಗ್ರಂಥಗಳು ಹಾಗೂ ಲೇಖನಗಳಿಂದ ಈಗಾಗಲೇ ಕನ್ನಡ ಓದುಗರಿಗೆ ಚಿರಪರಿಚಿತರಾಗಿದ್ದಾರೆ. ಉತ್ತಮ ಭಾಷಣಕಾರರೂ ಆಗಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನೂ, ಸರಣಿ ಲೇಖನಗಳನ್ನೂ ಬರೆದಿದ್ದಾರೆ.

ತೀರ್ಥ ಎಂದರೆ ಪುಣ್ಯಜಲವೆಂದರ್ಥ. ನದಿ, ಕೆರೆ, ತೊರೆ, ಸರೋವರ, ಪುಷ್ಕರಿಣಿ, ಕಲ್ಯಾಣಿ ಜಲಕುಂಡಿಕೆ ಮೊದಲಾದವುಗಳ ಪರಿಸರದಲ್ಲಿ ನಿರ್ಮಿಸಿದ ದೇವಮಂದಿರಗಳನ್ನು ತೀರ್ಥಕ್ಷೇತ್ರಗಳೆಂದು ಕರೆಯಬಹುದು. ತೀರ್ಥಕ್ಷೇತ್ರಗಳನ್ನು ದೇವ ತೀರ್ಥಗಳು ಮತ್ತು ಸಂತ ತೀರ್ಥಗಳು ಎಂದು ಎರಡಾಗಿ ವಿಂಗಡಿಸಬಹುದು. ಶಿವ, ರಂಗನಾಥ, ನರಸಿಂಹ ದುರ್ಗಾ, ಗಣಪತಿ, ಸೂರ್ಯ ನಾರಾಯಣ, ಆಂಜನೇಯ ಮೊದಲಾದ ಪೌರಾಣಿಕ ದೇವದೇವಿಯರಿಗೆ ಸಂಬಂಧಿಸಿದ ತೀರ್ಥಗಳನ್ನು ದೇವತೀರ್ಥಗಳೆನ್ನಬಹುದು. ಸಾಧು ಸಂತರು, ಜ್ಞಾನಿಗಳು, ಜೀವನ ಮುಕ್ತರು, ಲೋಕಹಿತ ಸಾಧಕರು ಮೊದಲಾದವರು ತೀರ್ಥ ಸ್ವರೂಪರೆನಿಸುತ್ತಾರೆ. ಅವರಿಗೆ ಸಂಬಂಧಿಸಿದ ತೀರ್ಥಗಳನ್ನು ಸಂತ ತೀರ್ಥಗಳೆನ್ನಬಹುದು. ಮಾದೇಶ್ವರ, ಮಂಟೇಸ್ವಾಮಿ, ಕೈವಾರ ತಾತಯ್ಯ, ಸಿದ್ಧಾರೂಢರು, ಬಸವಣ್ಣ ಮೊದಲಾದವರ ಕ್ಷೇತ್ರಗಳು ಸಂತ ತೀರ್ಥಗಳೆನಿಸುತ್ತವೆ.

"ತೀರ್ಥಯತೇ ಅನೇನ ಇತಿ ತೀರ್ಥಂ" - ದಡಮುಟ್ಟಿಸಬಲ್ಲದು ಯಾವುದೋ ಅದು ತೀರ್ಥವೆನಿಸುತ್ತದೆ. "ತರತಿ ಪಾಪಾದಿಕಂ ಯಸ್ಮಾತ್"- ಯಾವುದರಿಂದ ಮನುಷ್ಯನು ಪಾಪಮುಕ್ತನಾಗುತ್ತಾನೋ ಅದು ತೀರ್ಥವೆನಿಸುತ್ತದೆ. "ಸಂಸಾರ ಸಾಗರ ತರಣೋಪಾಯ ಭೂತಂ" ಸಂಸಾರಸಾಗರವನ್ನು ದಾಟಿಸಲು ಇರುವ ಉಪಾಯದಿಂದ ಕೂಡಿರುವಂಥದೇ ತೀರ್ಥ-ಮುಂತಾದ ನಿರೂಪಣೆಗಳೆಲ್ಲವೂ ತೀರ್ಥಗಳ ಮಹಿಮೆಯನ್ನು ಎತ್ತಿಹಿಡಿದಿವೆ. ತೀರ್ಥಯಾತ್ರೆಯು ಸನಾತನ ಹಿಂದೂಧರ್ಮದ ಅವಿಭಾಜ್ಯ ಅಂಗವಾಗಿದೆ. ತೀರ್ಥಯಾತ್ರೆಯಿಂದ ಚಿತ್ತಶುದ್ಧಿಯಾಗುತ್ತದೆ, ಪಾಪನಾಶವಾಗುತ್ತದೆ, ಪುಣ್ಯಸಂಪಾದನೆಯಾಗುತ್ತದೆ. ತೀರ್ಥಯಾತ್ರೆ ಮಾಡಿದವರು ತಮ್ಮ ಹಿಂದಿನ ಮತ್ತು ಮುಂದಿನ ಏಳೇಳು ಪೀಳಿಗೆಗಳನ್ನು ಉದ್ಧಾರ ಮಾಡುತ್ತಾರೆಂದು ಸ್ಮೃತಿಗಳು ತಿಳಿಸಿಕೊಟ್ಟಿವೆ.

ಚತುರ್ವಿಧ ಫಲಪುರುಷಾರ್ಥಗಳಲ್ಲಿ ಎರಡನೆಯದಾದ ಅರ್ಥವನ್ನು ಖರ್ಚುಮಾಡಿ, ಮಿಕ್ಕ ಪುರುಷಾರ್ಥಗಳಾದ ಧರ್ಮಸಂಪಾದನೆ, ಇಷ್ಟಾರ್ಥಗಳ ಸಂಪಾದನೆ, ಮತ್ತು ಮೋಕ್ಷಸಂಪಾದನೆಗಳನ್ನು ತೀರ್ಥಯಾತ್ರೆಯಿಂದ ಗಳಿಸಿಕೊಳ್ಳಬಹುದು. ಅಗ್ನಿಷ್ಟೋಮ ಮುಂತಾದ ಬಹುದೊಡ್ಡ ಯಾಗಗಳನ್ನು ಅಪಾರವಾದ ದ್ರವ್ಯಬಲದಿಂದ ಮಾತ್ರವೇ ಸಂಪನ್ನಗೊಳಿಸುವುದು ಸಾಧ್ಯ. ಆದರೆ ತೀರ್ಥಯಾತ್ರೆಯು ಅಗ್ನಿಷ್ಟೋಮಾದಿ ಮಹಾಯಾಗಗಳ ಫಲವನ್ನೇ ತಂದುಕೊಡುತ್ತದೆಯೆಂದು ಜ್ಞಾನಿಗಳು ತಿಳಿಸಿಕೊಟ್ಟಿದ್ದಾರೆ. ಮಹಾಭಾರತದಲ್ಲಿ ಮತ್ತು ಅಷ್ಟಾದಶಪುರಾಣಗಳಲ್ಲಿ ಬೇಕಾದಷ್ಟು ತೀರ್ಥಕ್ಷೇತ್ರಗಳ ಮಹಿಮಾನುವರ್ಣನೆಯಿದೆ. ಅವುಗಳ ಪೈಕಿ 'ಸ್ಕಾಂದಪುರಾಣ'ವಂತೂ ತೀರ್ಥಗಳ ಭಂಡಾರವೇ ಆಗಿದೆ. ಅಲ್ಲಿ ವರ್ಣಿತವಾಗಿರುವ ಅನೇಕ ತೀರ್ಥಗಳನ್ನು ಈಗ ನಮ್ಮ ಭಾರತಭೂಮಿಯಲ್ಲಿರುವ ಯಾವ ತೀರ್ಥಕ್ಷೇತ್ರಗಳೊಡನೆ ಹೊಂದಿಸುವುದು ಎಂಬುದು ದುಸ್ಸಾಧ್ಯವಾದ ಕಾರ್ಯವಾಗಿದೆ.

ತೀರ್ಥಯಾತ್ರಾಕಾಲದಲ್ಲಿ ಬಹಳ ಎಚ್ಚರದಿಂದಿರಬೇಕು. ಅನ್ಯಕ್ಷೇತ್ರಗಳಲ್ಲಿ ಮಾಡಿದ ಪಾಪಗಳು ಪುಣ್ಯಕ್ಷೇತ್ರಗಳಲ್ಲಿ ನಾಶವಾಗುತ್ತವೆ. ಆದರೆ ಪುಣ್ಯಕ್ಷೇತ್ರಗಳಲ್ಲಿಯೇ ಪಾಪಕಾರ್ಯಗಳನ್ನು ಮಾಡಿಬಿಟ್ಟವಾದರೆ, ಅವು ವಜ್ರಲೇಪನದಂತೆ ಅಭೇದ್ಯವಾಗಿ ಅಂಟಿಕೊಂಡುಬಿಡುತ್ತದೆ ಎಂದು ಹೇಳುವ ಸುಭಾಷಿತವೊಂದಿದೆ.

**ಅನ್ಯಕ್ಷೇತ್ರೇ ಕೃತಂ ಪಾಪಂ। ಪುಣ್ಯಕ್ಷೇತ್ರೇ ವಿನಶ್ಯತಿ ॥**
**ಪುಣ್ಯಕ್ಷೇತ್ರೇ ಕೃತಂ ಪಾಪಂ । ವಜ್ರಲೇಪೋ ಭವಿಷ್ಯತಿ ॥**

ತೀರ್ಥಯಾತ್ರೆಯ ಕಾಲದಲ್ಲಿ ಸಾತ್ವಿಕ ಆಹಾರಸೇವನೆ, ಸಾತ್ವಿಕ ವೇಷಭೂಷಣಗಳು, ಸಹನಶೀಲತೆ, ಪರಿಮಿತ ಸೌಕರ್ಯಾಭಿಲಾಷೆ, ಜಪತಪಧ್ಯಾನಕೀರ್ತನತತ್ಪರತೆ, ಸತ್ಸಂಗ, ಸದ್ವಿಚಾರಚಿಂತನೆ, ವೈರಾಗ್ಯ ಚಿಂತನೆ, ದಾನಪ್ರದಾನ, ಇಂದ್ರಿಯ ಸಂಯಮ, ಅರಿಷಡ್ವರ್ಗ ನಿಯಂತ್ರಣ - ಮೊದಲಾದ ಸದ್ಗುಣಗಳನ್ನು ನಮ್ಮದಾಗಿಸಿಕೊಳ್ಳಬೇಕು. ಹಿಂದಿನ ಕಾಲದಲ್ಲಿ ಕೆಲವು ಸುಗಮ ತೀರ್ಥಗಳಾದರೆ ಮತ್ತೆ ಕೆಲವು ದುರ್ಗಮತೀರ್ಥಗಳಾಗಿರುತ್ತಿದ್ದವು. ಆಧುನಿಕ ಯುಗದಲ್ಲಿ ಹೆಚ್ಚುಕಡಿಮೆ ಎಲ್ಲ ತೀರ್ಥಗಳೂ ಸುಗಮ ತೀರ್ಥಗಳೇ ಆಗಿವೆ; ಸುಲಭವಾಗಿ ದರ್ಶನಮಾಡಿಕೊಂಡು ಬರುವಂಥವೇ ಆಗಿವೆ.

ತೀರ್ಥಯಾತ್ರೆಗೆ ಹೋದಾಗ, ಪೂರ್ಣಫಲವನ್ನು ಪಡೆಯಬೇಕಾದರೆ ಅಲ್ಲಿನ ನೀತಿನಿಯಮಗಳನ್ನು ಕೇಳಿ ತಿಳಿದುಕೊಳ್ಳಬೇಕು. ತೀರ್ಥಸ್ನಾನ, ತೀರ್ಥವಿಧಿ ಮುಂತಾದವುಗಳನ್ನು ತಿಳಿಸಿಕೊಡಲು ಕ್ಷೇತ್ರಪುರೋಹಿತರೆಂಬ ಉಪಾಧಿವಂತರೇ ಇರುತ್ತಾರೆ. ಅವರು ಹೇಳಿಕೊಟ್ಟಂತೆ ನಡೆದುಕೊಳ್ಳಬೇಕು. ಸಾಧ್ಯವಾದರೆ ಸ್ಥಳಪುರಾಣವನ್ನು ಕೇಳಿತಿಳಿದುಕೊಳ್ಳಬೇಕು. ತೀರ್ಥಯಾತ್ರೆಯ ಪ್ರಭಾವ ಅದೆಷ್ಟಿದೆಯೆಂದರೆ ಯಾತ್ರೆ ಮಾಡುವ ಬಲವಿಲ್ಲದವರು, ತೀರ್ಥಯಾತ್ರೆಗೆ ಹೋಗುವವರನ್ನು ಕುರಿತು "ನನ್ನ ಪರವಾಗಿಯೂ ಒಂದು ಸ್ನಾನ ಮಾಡಪ್ಪಾ, ನನ್ನ ಪರವಾಗಿಯೂ ಒಂದು ಪೂಜೆ ಮಾಡಿಸಪ್ಪಾ" ಎಂದು ಕೋರಿಕೊಂಡು ನೆರವೇರಿಸಿದರೂ ತಕ್ಕಷ್ಟು ಪುಣ್ಯಫಲಕ್ಕೆ ಭಾಗಿಗಳಾಗುತ್ತಾರೆಂದು ಜ್ಞಾನಿಗಳು ಅಪ್ಪಣೆಕೊಡಿಸಿದ್ದಾರೆ.

ಭಾರತಯಾತ್ರೆಯ ತನುಜಾತೆಯಾದ ಕನ್ನಡಮಾತೆಯ ಒಡಲಿನಲ್ಲಿಯೂ ಅನೇಕಾನೇಕ ತೀರ್ಥಕ್ಷೇತ್ರಗಳಿವೆ. ಅವುಗಳಲ್ಲಿ ಅತ್ಯಂತ

ಪ್ರಧಾನವಾದಂಥವನ್ನು ಮಾತ್ರವೇ ಭಕ್ತಿಪುರಸ್ಸರವಾಗಿ ಸ್ಮರಿಸುವುದು ಈ ಲೇಖನದ ಉದ್ದೇಶವಾಗಿದೆ.

## ಕೊಡಗು

**ತಲಕಾವೇರಿ :** ಋಗ್ವೇದದಲ್ಲಿ ಕೀರ್ತಿತವಾಗಿರುವ ಸಪ್ತನದಿಗಳಲ್ಲಿ ಒಂದಾದ ಕಾವೇರಿಯ ಉಗಮಸ್ಥಾನವು ತಲಕಾವೇರಿ ಎಂಬ ಹೆಸರಿನಲ್ಲಿ ಅತ್ಯಂತ ಪುರಾತನ ಪುಣ್ಯಕ್ಷೇತ್ರವಾಗಿದೆ. ಮಡಿಕೇರಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೪೮ ಕಿ.ಮೀ.ಗಳ ದೂರದಲ್ಲಿದೆ. ಬ್ರಹ್ಮಗಿರಿ ಎಂಬ ಪರ್ವತದ ತಪ್ಪಲಿನ ಕಾವೇರಿಯ ಉಗಮ ಬಿಂದುವಿನಲ್ಲಿ ಚೌಕಾಕಾರವಾದ 'ಬ್ರಹ್ಮಕುಂಡಿಕೆ'ಯೊಂದನ್ನು ನಿರ್ಮಿಸಿದ್ದಾರೆ. ಅದರಲ್ಲಿ ಸದಾಕಾಲ ನೀರು ಉಕ್ಕುತ್ತಲೇ ಇರುತ್ತದೆ. ಬ್ರಹ್ಮಕುಂಡಿಕೆಯಿಂದ ಆ ಜಲವು ದೊಡ್ಡದಾದ ಬೇರೊಂದು ಕಲ್ಯಾಣಿಯೊಳಕ್ಕೆ ಇಳಿದುಬರುವಂತೆ ಮಾಡಿದ್ದಾರೆ. ಆ ಪರಿಸರದಲ್ಲಿಯೇ ಅಗಸ್ತ್ಯಮುನಿಗಳಿಂದ ಸ್ಥಾಪನೆಗೊಂಡ ಅಗಸ್ತ್ಯೇಶ್ವರ ಮತ್ತು ಮಹಾಗಣಪತಿಯ ಗುಡಿಗಳಿವೆ. ಭಕ್ತರು ಕಲ್ಯಾಣಿಗಿಳಿದು ಪುಣ್ಯಸ್ನಾನ ಮಾಡಿಕೊಳ್ಳುವ ವ್ಯವಸ್ಥೆಯಿದೆ. ತಲಕಾವೇರಿಯ ವಲಯದಲ್ಲಿ ಗ್ರಾಮವಿಲ್ಲ, ಜನವಸತಿಯಿಲ್ಲ. ರಾತ್ರಿಯಲ್ಲಿ ಯಾರೂ ಅಲ್ಲಿ ತಂಗುವಂತಿಲ್ಲ.

ವಾರ್ಷಿಕವಾಗಿ ತಲಕಾವೇರಿಯಲ್ಲಿ ತುಲಾಮಾಸದಲ್ಲಿ 'ತುಲಾಸಂಕ್ರಮಣ' ಅಥವಾ 'ಕಾವೇರಿ ತೀರ್ಥೋದ್ಭವ' ಎಂಬ ದೊಡ್ಡದೊಂದು ಜಾತ್ರೆಯೇ ನಡೆಯುತ್ತದೆ. ಆಗ ಕಾವೇರಿಯು ಆ ಕುಂಡಿಕೆಯಲ್ಲಿ ತನ್ನ ಮೃದುಗತಿಯನ್ನು ಬಿಟ್ಟು ಕೆಲವು ನಿಮಿಷಗಳ ಮಟ್ಟಿಗೆ ರಭಸದಿಂದ ಉಕ್ಕಿಬಿಡುತ್ತದೆ. ಹಗಲಿನಲ್ಲೋ, ರಾತ್ರಿಯಲ್ಲೋ ಯಾವ ಹೊತ್ತಿಗೆ ಅದು ನೆರವೇರುತ್ತದೆ ಎಂಬುದನ್ನು ಪಂಚಾಗಕರ್ತರು ಮೊದಲೇ ನಿರ್ಣಯಿಸುವಷ್ಟರ ಮಟ್ಟಿಗೆ ಆ ಉಕ್ಕುವಿಕೆಯು ನಿಯತವಾಗಿ ನಡೆಯುತ್ತದೆ. ಆ ಉಕ್ಕುವಿಕೆಯನ್ನೇ ತುದಿಗಾಲಿನಲ್ಲಿ ನಿಂತು ನಿರೀಕ್ಷಿಸುವ ಭಕ್ತರು ಅದು ನೆರವೇರುತ್ತಿದ್ದಂತೆಯೇ ಕಲ್ಯಾಣಿಯೊಳಕ್ಕಿಳಿದು ಪುಣ್ಯಸ್ನಾನ ಮಾಡುತ್ತಾರೆ. ಆಮೇಲೆ ಒಂದು ತಿಂಗಳು ಪೂರ್ತಿ ಪುಣ್ಯಸ್ನಾನವು ಮುಂದುವರಿಯುತ್ತದೆ. ಆ ಒಂದು ತಿಂಗಳ ಕಾಲ ಕಾಶಿಯಿಂದ ಗಂಗಾದೇವಿಯೇ ಬಂದು ಆ ಬ್ರಹ್ಮಕುಂಡಿಕೆಯೊಳಗೆ ನೆಲೆಸಿ, ಭಕ್ತರಿಂದ ತನಗೆ ಅಂಟಿದ ಪಾಪಭಾರವನ್ನು ಹಗುರಗೊಳಿಸಿಕೊಂಡು ಹೋಗುತ್ತಾಳೆಂದು ಸ್ಥಳಪುರಾಣದಲ್ಲಿ ಹೇಳಿದೆ. ಕೊಡಗಿನ ನಿವಾಸಿಗಳಾದ ಕೊಡವರು, ಕಾವೇರಿಯನ್ನು ತಮ್ಮ ಕುಲದೇವತೆಯೆಂದು ಆರಾಧಿಸುವುದರಿಂದ ಆ ಜಾತ್ರೆಗೆ ಹೆಚ್ಚಿನ ತೇಜಸ್ಸು ಕೂಡಿಕೊಳ್ಳುತ್ತದೆ.

**ಭಾಗಮಂಡಲ:** ಕಾವೇರಿಯು ತಲಕಾವೇರಿಯಿಂದ ಕೆಳಕ್ಕೆ ಹರಿದುಬರುವ ದಾರಿಯಲ್ಲಿರುವ ಭಾಗಮಂಡಲ ಎಂಬ ಗ್ರಾಮವು ಕೂಡ ಬಹು ದೊಡ್ಡ ಪುಣ್ಯತೀರ್ಥವಾಗಿದೆ. ಬ್ರಹ್ಮಗಿರಿಯಿಂದಲೇ ಉದಿಸಿ ಬರುವ ಕನ್ನಿಕಾ ಮತ್ತು ಸುಜ್ಯೋತಿ ಎಂಬ ಉಪನದಿಗಳು ಭಾಗಮಂಡಲದಲ್ಲಿ ಕಾವೇರಿಯನ್ನು ಕೂಡಿಕೊಂಡು ಭಾಗಮಂಡಲವೊಂದು ತ್ರಿವೇಣಿಸಂಗಮವಾಗಿದೆ. ಸುಜ್ಯೋತಿಯು ಗುಪ್ತಗಾಮಿನಿಯಾಗಿದೆ.

ಭಾಗಮಂಡಲದಲ್ಲಿ ಭಗಂಡಮುನಿಗಳಿಂದ ಸ್ಥಾಪನೆಗೊಂಡ ಭಗಂಡೇಶ್ವರನ ವಿಶಾಲವಾದ ದೇವಾಲಯವಿದೆ. ಭಾಗಮಂಡಲವು ಪಿಂಡಪ್ರಧಾನವೇ ಮೊದಲಾದ ಪಿತೃಕಾರ್ಯಗಳಿಗೆ ಹೇಳಿ ಮಾಡಿಸಿದ ಕ್ಷೇತ್ರವಾಗಿದೆ. ತೀರ್ಥೋದ್ಭವದ ಬಳಿಕ ಭಾಗಮಂಡಲದಲ್ಲಿಯೂ ದೊಡ್ಡದಾದ ಜಾತ್ರೆಯು ನಡೆಯುತ್ತದೆ.

ಕಾವೇರಿ ಮಹಾತ್ಮೆಯನ್ನು ಕುರಿತಂತೆ ವಿಪುಲವಾದ ಸಾಹಿತ್ಯವು ಸೃಷ್ಟಿಯಾಗಿದೆ. ಒಂದಿಷ್ಟು ಸಾಹಿತ್ಯವು ಕೊಡವರ ಕೊಡವ ಭಾಷೆಯಲ್ಲಿಯೂ ಇದೆ. ಕಾವೇರಿಯಲ್ಲಿ ಮಿಂದರೆ ಪಾಪಗಳು ನಾಶವಾಗಿ, ಇಷ್ಟಾರ್ಥಗಳು ಕೈಗೂಡಿ, ಕೊನೆಗೆ ಮೋಕ್ಷಪ್ರಾಪ್ತಿ ಯಾಗುತ್ತದೆಂದು ಹೇಳಿದೆ:

ಕಾ ಕಾರೋ ಕಲುಷಂ ಹಂತಿ । ವೇ ಕಾರೋ ವಾಂಛಿತಪ್ರದಃ ।
ರೀ ಕಾರೋ ಮೋಕ್ಷದೋ ನೃಣಾಂ । ಕಾವೇರೀತ್ಯವಿಧಾರಯ ॥

## ಚಾಮರಾಜನಗರ

**ಮಾದೇಶ್ವರಬೆಟ್ಟ:** ಕೊಳ್ಳೇಗಾಲ ತಾಲ್ಲೂಕಿನ ಈ ಪುಣ್ಯಕ್ಷೇತ್ರವು ಅಲ್ಲಿಂದ ೮೦ ಕಿ.ಮೀ.ಗಳ ದೂರದಲ್ಲಿದೆ. ಆನುಮಲೆ, ಜೇನುಮಲೆ, ಕಾನುಮಲೆ, ಪಚ್ಚೆಮಲೆ, ಎಂಬಂತೆ ೭೭ ಶಿಖರಗಳಿಂದಲೂ ಅರಣ್ಯಗಳಿಂದಲೂ, ಅಲ್ಲಲ್ಲಿ ತೀರ್ಥಗಳಿಂದಲೂ ಕೂಡಿದ ಪರ್ವತಶ್ರೇಣಿಯ 'ನಡುಮಲೆಯ'ಯಲ್ಲಿ ಮಾದೇಶ್ವರನೆಂಬ ವಿಭೂತಿಪುರುಷನ ಶಿವಲಿಂಗಸಹಿತವಾದ ವಿಶಾಲವಾದ ಗದ್ದುಗೆಯ ಗುಡಿಯಿದೆ. ಸು. ೧೬ನೆಯ ಶತಮಾನದಲ್ಲಿ ಶ್ರೀಶೈಲದತ್ತಣಿಂದ ಆ ಮಹಾತ್ಮನು, ಕಣ್ಣುಕೋರೈಸುವ ಪವಾಡಗಳನ್ನು ಮೆರೆದು ತನ್ನ ಭಕ್ತರನ್ನು ಕಾಪಾಡಿದನು. ಅವನನ್ನು ಕುರಿತ ಜನಪದಮಹಾಕಾವ್ಯವೊಂದು ಪ್ರಕಟವಾಗಿದೆ. ಮಾದೇಶ್ವರನು ಮಾದಿಗ ಕುಲಕ್ಕೆ ಸೇರಿದವನಾಗಿದ್ದು, ಆ ಸಮುದಾಯದ ಮತ್ತು ಇನ್ನಿತರ ಹಿಂದುಳಿದ ವರ್ಗಗಳ ಭಕ್ತರು ಪಾದಯಾತ್ರೆಯಲ್ಲಿ ಹೋಗಿ ಅವನಿಗೆ ಮುಡಿಕೊಟ್ಟು ಪೂಜಿಸಿಬರುತ್ತಾರೆ. ಬೇಡಗಂಪಣ ಎಂಬ ಜನಾಂಗಕ್ಕೆ ಸೇರಿದ 'ತಮ್ಮಡಿ'ಗಳು ಎಂಬ ಸಾತ್ವಿಕರು ಅಲ್ಲಿಗೆ ಅರ್ಚಕರು. ಪ್ರತಿ ಅಮಾವಾಸ್ಯೆಯ 'ಎಣ್ಣೆಮಜ್ಜನ'ಕ್ಕೆ ಅಲ್ಲಿ ಸಾವಿರಾರು ಭಕ್ತರು ನೆರೆಯುತ್ತಾರೆ. ಶಿವರಾತ್ರಿ, ಯುಗಾದಿ, ನವರಾತ್ರಿ, ದೀಪಾವಳಿ ಪರ್ವಗಳು ಲಕ್ಷಾಂತರ ಭಕ್ತರನ್ನು ಸೆಳೆಯುತ್ತವೆ. ಬೆಟ್ಟದಲ್ಲಿಯೇ ಇರುವ 'ಸಾಲೂರು ಮಠ'ದ ಗುರುಗಳು ಅಲ್ಲಿನ ಉತ್ಸವಾದಿಗಳನ್ನು ನಿರ್ದೇಶಿಸುತ್ತಾರೆ. ಮಾದೇಶ್ವರನ ಶಿಷ್ಯನಾದ ಶೇಷಣ್ಣೊಡೆಯ ಎಂಬಾತನ ಜಾತ್ರೆಯು ಮಹೋನ್ನತವಾಗಿದ್ದು, ಅದು ೧೨ ವರ್ಷಗಳಿಗೊಮ್ಮೆ ಜರುಗುತ್ತದೆ. ನಾಡಿನ ನೂರಾರು ಗ್ರಾಮಗಳಲ್ಲಿ ಮಾದೇಶ್ವರನ ಗುಡಿಗಳಿವೆ. ಅಲ್ಲಿ ಅವನನ್ನು ತ್ರಿಶೂಲವನ್ನು ಹಿಡಿದು ಹುಲಿಯ ಮೇಲೆ ಕುಳಿತಿರುವ ಶೈಲಿಯಲ್ಲಿರುವ ಫೋಟೋವನ್ನಿಟ್ಟು ಪೂಜಿಸುತ್ತಾರೆ.

ಮಾದೇಶ್ವರನ ಶಿಷ್ಯರಾಗಿ ದೀಕ್ಷೆ ಸ್ವೀಕರಿಸಿದವರು 'ಕಂಸಾಳೆ ಗುಡ್ಡರು', ಎಂದೆನಿಸಿ ಅವನ ಲೀಲಾವಿಲಾಸಗಳನ್ನು ಕಂಸಾಳೆ ನುಡಿಸುತ್ತಾ ಉಚ್ಚಕಂಠದಲ್ಲಿ ಗಾಯನ ಮಾಡುತ್ತಾರೆ. ಅವರು ಮಾಡುವ ಗಾಯನ-ನರ್ತನ-ವಾದನಸಹಿತವಾದ ಕಂಸಾಳೆ ಕುಣಿತವು ರೋಮಾಂಚನವನ್ನುಂಟು ಮಾಡುತ್ತದೆ. ಆ ಕ್ಷೇತ್ರವು ಮುಜರಾಯಿಗೆ ಸೇರಿದ್ದು ಕೋಟಿಗಟ್ಟಲೆ ದ್ರವ್ಯವನ್ನು ರಾಜ್ಯದ ಬೊಕ್ಕಸಕ್ಕೆ ತುಂಬಿಸುವಲ್ಲಿ ಅಗ್ರಸ್ಥಾನದಲ್ಲಿದೆ.

**ಚಿಕ್ಕಲ್ಲೂರು:** ಕೊಳ್ಳೇಗಾಲದಿಂದ ೨೬ ಕಿ.ಮೀ. ದೂರದಲ್ಲಿರುವ ಚಿಕ್ಕಲ್ಲೂರು ಗ್ರಾಮವು ಮಾದೇಶ್ವರನ ಸಮಕಾಲೀನನಾದ ಮಂಟೇಸ್ವಾಮಿಯೆಂಬ ಮಹಾನುಭಾವನ ಲೀಲಾಭೂಮಿಯಾಗಿದೆ. ಅದಕ್ಕೆ ಸಮೀಪದಲ್ಲಿ ಕಾವೇರಿ ನದಿ ಹರಿಯುತ್ತದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನ ಪುರವು ಅವನ ಐಕ್ಯಭೂಮಿಯಾಗಿ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಮಂಟೇಸ್ವಾಮಿಯು ಉತ್ತರ ಕರ್ನಾಟಕದ ಕೊಂಡೇಕಲ್ಲುಬಸವಣ್ಣ ಎಂಬ ಮಹಾತ್ಮನ ಶಿಷ್ಯತ್ವದಿಂದ ಸಿದ್ಧಪುರುಷನಾಗಿ ಚಿಕ್ಕಲ್ಲೂರಿನ ಕಡೆಗೆ ಬಂದನೆಂದು ತಿಳಿಯಲಾಗಿದೆ. ಸಿದ್ಧಪ್ಪಾಜಿ ಮತ್ತು ರಾಚಪ್ಪಾಜಿ ಎಂಬುವವರು ಅವನ ಶಿಷ್ಯರಾಗಿ ಪವಾಡಪುರುಷರಾಗಿ ಪೂಜಿತರಾಗುತ್ತಿದ್ದಾರೆ. ಕೊಳ್ಳೇಗಾಲಕ್ಕೆ ಸಮೀಪದ ಕುರುಬನ ಕಟ್ಟೆ ಎಂಬಲ್ಲಿ ಸಿದ್ಧಪ್ಪಾಜಿಯ ದೊಡ್ಡದಾದ ಗುಡಿಯಿದೆ. ದೊಡ್ಡಮ್ಮತಾಯಿ, ಚೆನ್ನಾಜಮ್ಮ ಅವರುಗಳು ಕೂಡ ಮಂಟೇಸ್ವಾಮಿಯ ಶಿಷ್ಯೆಯರಾಗಿ ಪೂಜೆಗೆ ಪಾತ್ರರಾಗಿದ್ದಾರೆ. ಈ ಐವರೂ ಒಟ್ಟಿಗೇ ಇರುವ ಪಟಗಳು ತಮ್ಮ ನಾಡಿನ ಮಂಟೇಸ್ವಾಮಿಯ ಮತ್ತು ಸಿದ್ಧಪ್ಪಾಜಿ-ರಾಚಪ್ಪಾಜಿಯ ಗುಡಿಗಳಲ್ಲಿ ಪೂಜೆಗೊಳ್ಳುತ್ತಿವೆ. ಮಂಟೇಸ್ವಾಮಿಯ ಶಿಷ್ಯರಾಗಿ ದೀಕ್ಷೆ ಸ್ವೀಕರಿಸಿದವರು 'ನೀಲಗಾರರು' ಎಂದೆನಿಸಿ, ತಂಬೂರಿಯನ್ನು ನುಡಿಸುತ್ತಾ ಮಂಟೇಸ್ವಾಮಿಯ ಜನಪದಕಾವ್ಯವನ್ನು ಹಾಡುತ್ತಾರೆ. ಮಂಟೇಸ್ವಾಮಿ ಮತ್ತು ಅವನ ಶಿಷ್ಯರ ೫ ದಿನಗಳ ಚಿಕ್ಕಲ್ಲೂರು ಜಾತ್ರೆಯು ಅತ್ಯಂತ ವರ್ಣಮಯವಾಗಿ ನಡೆಯುತ್ತದೆ. ಲಕ್ಷಾಂತರ ಭಕ್ತರು ಪಾಲ್ಗೊಳ್ಳುತ್ತಾರೆ. ಮಂಟೇಸ್ವಾಮಿಯು ಆದಿಕರ್ನಾಟಕ ಜನಾಂಗಕ್ಕೆ ಸೇರಿದವನಾಗಿದ್ದು ಆ ವರ್ಗದ ಮತ್ತು ಇನ್ನಿತರ ಹಿಂದುಳಿದ ವರ್ಗದವರು ಅವನ ಹೆಚ್ಚಿನ ಸಂಖ್ಯೆಯ ಭಕ್ತರಾಗಿದ್ದಾರೆ. ಇಂಗ್ಲಿಷಿನಲ್ಲಿ ಕಲ್ಟ್ ಎಂದು ಹೇಳುವ ಒಂದೊಂದು 'ಆರಾಧನಾ ಪಂಥ'ಕ್ಕೆ ಮಹದೇಶ್ವರನೂ, ಮಂಟೇಸ್ವಾಮಿಯೂ ಮೂಲಪುರುಷರಾಗಿದ್ದಾರೆ.

**ಬಿಳಿಗಿರಿರಂಗನ ಬೆಟ್ಟ:** ಯಳಂದೂರು ತಾಲ್ಲೂಕಿಗೆ ಸೇರುವ ಬಿಳಿಗಿರಿರಂಗನಬೆಟ್ಟವು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ.ಗಳ ದೂರದಲ್ಲಿರುವ ಪುರಾಣಪ್ರಸಿದ್ಧವಾದ ಕ್ಷೇತ್ರವಾಗಿದೆ. 'ಬ್ರಹ್ಮಾಂಡ ಪುರಾಣ'ದಲ್ಲಿ ಶ್ವೇತಾದ್ರಿಯೆಂದು ವರ್ಣಿತವಾಗಿರುವ ಪವಿತ್ರತಾಣವಾಗಿದೆ. ಬೆಟ್ಟದ ಮೇಲೆಯೇ ಗ್ರಾಮವಿದ್ದು ಅಲ್ಲಿ ವಸಿಷ್ಠಮುನಿಗಳಿಂದ ಸ್ಥಾಪನೆಗೊಂಡ ಮಹಾವಿಷ್ಣುವು, ರಂಗನಾಥಸ್ವಾಮಿಯೆಂದು ಪ್ರಸಿದ್ಧನಾಗಿದ್ದಾನೆ. ಬೆಟ್ಟದ ತಪ್ಪಲಿನಲ್ಲಿ ಹೊನ್ನುಹೊಳೆ ಅಥವಾ ಸುವರ್ಣಾವತಿಯೆಂಬ ತೊರೆಯು ಹರಿದುಹೋಗಿದ್ದು, ಆ ಕ್ಷೇತ್ರವೊಂದು ತೀರ್ಥಕ್ಷೇತ್ರವಾಗಿದೆ. ರಂಗನಾಥಸ್ವಾಮಿಯ ದೇವಾಲಯದಲ್ಲಿ ವೈಖಾನಸಾಗಮ ರೀತಿಯಲ್ಲಿ ಪೂಜೆಗಳೂ, ಜಾತ್ರೆಗಳೂ ಜರಗುತ್ತವೆ. ಗುಡಿಯೊಳಗೆ ಅಲರ್‌ಮೇಲ್‌ಮಂಗೈ ಅಥವಾ ಅಲಮೇಲಮ್ಮ ಎಂದು ಕರೆಯಲಾಗುವ ಅಮ್ಮನವರ ಸನ್ನಿಧಿಯಿದೆ. ವಾರ್ಷಿಕವಾಗಿ ಚಿಕ್ಕಜಾತ್ರೆ ಮತ್ತು ದೊಡ್ಡಜಾತ್ರೆ ಎಂಬ ಎರಡು ಜಾತ್ರೆಗಳು ವಿಧ್ಯುಕ್ತವಾಗಿ ಸಂಪನ್ನಗೊಳ್ಳುತ್ತವೆ.

ಬೆಟ್ಟದ ಸುತ್ತಮುತ್ತ 'ಸೋಲಿಗರು' ಎಂಬ ಬುಡಕಟ್ಟು ಜನಾಂಗದವರಿದ್ದಾರೆ. ಜಾನಪದ ಐತಿಹ್ಯಗಳ ಪ್ರಕಾರ ರಂಗನಾಥಸ್ವಾಮಿಯು ಆ ಜನಾಂಗಕ್ಕೆ ಸೇರಿದ ಕುಸುಮಾಲೆ ಎಂಬ ಚೆಲುವೆಯನ್ನು ಪ್ರೀತಿಸಿ ವಿವಾಹವಾದನು. ಅದೇ ಕಾರಣವಾಗಿ ಸೋಲಿಗರು ಆ ಸ್ವಾಮಿಯನ್ನು 'ರಂಗಭಾವ'ನೆಂಬ ಆತ್ಮೀಯತೆಯಿಂದ, ಅವನ ಸೇವೆ ಮಾಡುತ್ತಾರೆ. ''ನಮ್ಮ ಸ್ವಾಮಿಯು ಮೆಟ್ಟಿಕೊಂಡು ಅಡ್ಡಾಡಲಿ'' ಎಂಬ ಭಕ್ತಿಭಾವದಿಂದ ೨ ವರ್ಷಗಳಿಗೊಮ್ಮೆ ಸನಿಹದ ಬೂದಿತಿಟ್ಟು ಎಂಬ ಗ್ರಾಮದ ಮಾದಿಗಭಕ್ತರು ಸುಮಾರು ೨ ಅಡಿ ಉದ್ದದ ಚರ್ಮದ ಪಾದರಕ್ಷೆಗಳನ್ನು ದೇವಾಲಯಕ್ಕೆ ತಂದೊಪ್ಪಿಸುತ್ತಾರೆ. ಅದೊಂದು ಪೂಜ್ಯ ವಸ್ತುವಾಗಿದ್ದು, ಬಯಸಿದ ಭಕ್ತರ ತಲೆಗೆ ಅರ್ಚಕರು ಅದರಿಂದ ಮೃದುವಾಗಿ ಒಂದು ಏಟುಕೊಟ್ಟು, ಅವರ ಪಾಪಗಳನ್ನೆಲ್ಲಾ ಪರಿಹರಿಸುತ್ತಾರೆ. ಬೆಟ್ಟದ ಮೇಲೆಯೇ ಗಂಗಾಧರೇಶ್ವರನೆಂಬ ಶಿವ ಗುಡಿಯೂ ಇದೆ.

ಬೆಟ್ಟದ ಮೇಲೆಯೇ ಇರುವ 'ದೊಡ್ಡಸಂಪಿಗೆ' ಎಂಬಲ್ಲಿ ಅತ್ಯಂತ ಪುರಾತನವಾದ ಸಂಪಿಗೆ ಮರವೊಂದಿದೆ. ಕಾಂಡದಿಂದ ಮೇಲಕ್ಕೆ ಅದು ಭಾರಿಯಾದ ಮೂರು ಕೊಂಬೆಗಳಾಗಿ ವಿಭಕ್ತಗೊಂಡು, ಭಕ್ತರು ಅದು ತ್ರಿಮೂರ್ತಿಗಳ ನೆಲೆಯೆಂದು ಪೂಜಿಸುತ್ತಾರೆ. ಅಲ್ಲಿಯೇ ಭಾರ್ಗವಿಯೆಂಬ ತೊರೆಯು ನಯನಮನೋಹರವಾದ ಕಣಿವೆಯಲ್ಲಿ ಹರಿದು ಕಾವೇರಿಯನ್ನು ಸೇರುತ್ತದೆ. ಅಂತಾಗಿ ಅದೂ ಅಲ್ಲಿನ ಒಂದು ಉಪತೀರ್ಥವಾಗಿದೆ.

**ಮಲೆಯೂರು:** ಚಾಮರಾಜನಗರ ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ.ಗಳ ಅಂತರದಲ್ಲಿರುವ ಮಲೆಯೂರಿನ ಕನಕಗಿರಿ ಬೆಟ್ಟದಮೇಲೆ ನಾಡಿನ ಬಹುದೊಡ್ಡ ಜೈನತೀರ್ಥವಿದೆ. ಭಟ್ಟಾರಕ ಪರಂಪರೆಗೆ ಸೇರಿದ, ಸಮಾಜಮುಖಿಯಾಗಿರುವ ಒಂದು ಜೈನ ಮಠವೂ ಅಲ್ಲಿದೆ.

**ಹಿಮವದ್ ಗೋಪಾಲಸ್ವಾಮಿ ಬೆಟ್ಟ:** ಪುರಾಣಗಳಲ್ಲಿ ಕಮಲಾಚಲವೆಂಬ ಕೀರ್ತಿತವಾಗಿರುವ ಗೋಪಾಲಸ್ವಾಮಿ ಬೆಟ್ಟವು ಸದಾಕಾಲ ಹಿಮದಿಂದ ಆವೃತವಾಗಿರುವುದರಿಂದ ಆ ಹೆಸರಿಗೆ ಅನ್ವರ್ಥವಾಗಿದೆ. ತಾಲ್ಲೂಕು ಕೇಂದ್ರವಾಗಿರುವ ಗುಂಡ್ಲುಪೇಟೆಯಿಂದ ೧೫ ಕಿ.ಮೀ. ದೂರದಲ್ಲಿದೆ. ಅಲ್ಲಿರುವ ದೇವಾಲಯದಲ್ಲಿ ವೇಣುಗೋಪಾಲ ಸ್ವಾಮಿಯು ರುಕ್ಮಿಣಿ ಮತ್ತು ಸತ್ಯಭಾಮಾಸಹಿತನಾಗಿ ನೆಲೆಸಿದ್ದಾನೆ. ಅಗಸ್ತ್ಯ ಮುನಿಗಳು ಆ ಕ್ಷೇತ್ರದಲ್ಲಿ ತಪಸ್ಸು ಮಾಡಿ ಆ ದೇವರುಗಳನ್ನು ಒಲಿಸಿಕೊಂಡು, ಅಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದರೆಂದು 'ಭವಿಷ್ಯೋತ್ತರಪುರಾಣ'ದಲ್ಲಿ ವರ್ಣಿಸಲಾಗಿದೆ. ಕೌಂಡಿನ್ಯ ಅಥವಾ ಗುಂಡ್ಲುಹೊಳೆ ಎಂಬ ತೊರೆಯು ಈ ಬೆಟ್ಟದಲ್ಲಿ ಹುಟ್ಟಿ ಗುಂಡ್ಲುಪೇಟೆಯತ್ತ ಸಾಗುತ್ತದೆ. ಹಂಸತೀರ್ಥವೇ ಮೊದಲಾದ ಅಷ್ಟ ತೀರ್ಥಗಳು ಬೆಟ್ಟದ ಸುತ್ತಲೂ ಇವೆ. ಬೆಟ್ಟದಮೇಲೆ ಗ್ರಾಮವಿಲ್ಲ. ಅತ್ಯಂತ ನಯನ ಮನೋಹರವಾದ ದೃಶ್ಯಾವಳಿಗಳನ್ನು ಬೆಟ್ಟದ ಮೇಲಿಂದ ಕಾಣಬಹುದು. ಪಾಂಚರಾತ್ರಾಗಮಾನುಸಾರಿಯಾಗಿ ನಿತ್ಯಪೂಜಾದಿಗಳು ಮತ್ತು ವಾರ್ಷಿಕ ರಥೋತ್ಸವಾದಿಗಳು ಸಂಪನ್ನಗೊಳ್ಳುತ್ತವೆ. 'ಭವಿಷ್ಯೋತ್ತರಪುರಾಣ'ವನ್ನು ಅನುಸರಿಸಿ ಚಿಕ್ಕುಪಾಧ್ಯಾಯನೆಂಬ (೧೬೫೦) ಕವಿಯು 'ಕಮಲಾಚಲ ಮಹಾತ್ಮ್ಯ' ಎಂಬ ಚಂಪೂಗ್ರಂಥವೊಂದನ್ನು ರಚಿಸಿದ್ದಾನೆ. ಚಾಮರಾಜನಗರ ಜಿಲ್ಲೆಯ ಈ ಪ್ರಸಿದ್ಧ ತೀರ್ಥಕ್ಷೇತ್ರಗಳೆಲ್ಲವೂ ಪರ್ವತಾಗ್ರದಲ್ಲಿಯೇ ನೆಲೆಸಿರುವುದು ಒಂದು ವಿಶೇಷವೆಂದು ಪರಿಗಣಿಸಬಹುದು.

# ಮೈಸೂರು

**ಮೈಸೂರುನಗರ:** ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನೆಲೆಸಿರುವ ಚಾಮುಂಡೇಶ್ವರಿಯು ಇಡೀ ನಾಡಿಗೇ ತನ್ನ ಕೃಪಾಕಟಾಕ್ಷವನ್ನು ಬೀರುತ್ತಿದ್ದಾಳೆ. ದೇವಿಯ ಪತಿಯಾಗಿ ಶಿವನು ಮಹಾಬಲೇಶ್ವರನಾಗಿ ಅಲ್ಲಿ ಸ್ಥಾಪನೆಗೊಂಡಿದ್ದಾನೆ. ನಿತ್ಯವೂ ಅಲ್ಲಿಗೆ ಭಕ್ತರ ಪ್ರವಾಹವೇ ಹರಿದುಬರುತ್ತದೆ. ಬೆಟ್ಟದ ಮೇಲೆಯೇ ದೊಡ್ಡದಾದ ಸ್ವಯಂಪೂರ್ಣವಾದ ಗ್ರಾಮವಿದೆ. ಒಂದು ತೀರ್ಥವೂ ಇದೆ. ರಥೋತ್ಸವ ತೆಪ್ಪೋತ್ಸವಾದಿಗಳು ವಿಜೃಂಭಣೆಯಿಂದ ಜರಗುತ್ತವೆ. ಆ ದೇವಿಯ ನವರಾತ್ರಿಕಾಲದ ಜಂಬೂಸವಾರಿಯೆಂಬ ಭವ್ಯವಾದ ಮೆರವಣಿಗೆಯಂತೂ ವಿಶ್ವವಿಖ್ಯಾತವಾಗಿದೆ.

**ನಂಜನಗೂಡು:** ಕಪಿಲಮುನಿಗಳ ಆಶೀರ್ವಾದಕ್ಕೆ ಪಾತ್ರವಾಗಿ ಕೇರಳದ ವೈನಾಡಿನಲ್ಲಿ ಹುಟ್ಟಿ ಕನ್ನಡನಾಡಿಗೆ ಇಳಿದುಬರುವ ಕಪಿಲಾ ನದಿಯ ತೀರದಲ್ಲಿರುವ ಯಾತ್ರಾಸ್ಥಳಗಳಲ್ಲಿ ಗರಳಪುರಿ ಎಂಬ ಪೌರಾಣಿಕ ನಾಮದ ನಂಜನಗೂಡು ಪಟ್ಟಣಕ್ಕೆ ಮಹೋನ್ನತವಾದ ಸ್ಥಾನವಿದೆ. ಅದು ತಾಲ್ಲೂಕು ಕೇಂದ್ರವಾಗಿದೆ. ಅಲ್ಲಿರುವ ನಂಜುಂಡೇಶ್ವರ ಅಥವಾ ಶ್ರೀಕಂಠೇಶ್ವರ ದೇವಾಲಯವು ದೇಶೋವಿಶಾಲವಾಗಿದ್ದು, ವಿಸ್ತಾರದ ಲೆಕ್ಕದಲ್ಲಿ ಕರ್ನಾಟಕದಲ್ಲಿಯೇ ಅತಿ ದೊಡ್ಡ ದೇವಾಲಯವೆಂಬ ಕೀರ್ತಿಗೆ ಪಾತ್ರವಾಗಿದೆ. ಅದರ ಮಹಾದ್ವಾರದ



ಮೇಲೆ ಏಳು ಅಂತಸ್ತುಗಳಿಂದ ಕೂಡಿದ ಬೃಹದಾಕಾರವಾದ ರಾಜಗೋಪುರವಿದೆ. ಗರ್ಭಗೃಹದಲ್ಲಿ ಗೌತಮಮುನಿಗಳಿಂದ ಸ್ಥಾಪನೆಗೊಂಡ ನಂಜುಂಡೇಶ್ವರ ಲಿಂಗಕ್ಕೆ ಪೂಜೆ ಸಲ್ಲುತ್ತದೆ. ಪಾರ್ವತಮ್ಮನವರ ಪ್ರತ್ಯೇಕ ಗುಡಿಯಿದೆ.

ದೇವಾಲಯದೊಳಗೆ ೨೦೦ಕ್ಕೂ ಹೆಚ್ಚು ದೇವರುಗಳು ಸ್ಥಾಪನೆಗೊಂಡಿರುವುದು ಕೂಡ ಅದ್ಭುತವಾದ ವಿಚಾರವಾಗಿದೆ. ಬೃಹತ್ತಾದ ನಂದಿ, ನಾರಾಯಣದೇವರು, ತಾಂಡವೇಶ್ವರ, ದಕ್ಷಿಣಾಮೂರ್ತಿ, ಚಂಡಿಕೇಶ್ವರ, ಸುಬ್ರಹ್ಮಣ್ಯ, ನೃತ್ಯಗಣಪತಿ, ಉಚ್ಛಿಷ್ಟ ಗಣಪತಿ ಮೊದಲಾದ ದೇವರುಗಳು ಕಲಾತ್ಮಕ ಮೂರ್ತಿಗಳಿವೆ. ಪುರಾತನ ಕಾಲದ ಶಿವಭಕ್ತರು ಎಂದು ಹೇಳುವ ಅವರ ಆಳೆತ್ತರದ ೬೬ ಪ್ರತಿಮೆಗಳಿವೆ. ಶಿವನು ಮೆರೆದ ಪಂಚವಿಂಶತಿ ಲೀಲೆಗಳ ೨೫ ಸುಂದರಮೂರ್ತಿಗಳಿವೆ.

ಪ್ರತಿ ಪೂರ್ಣಿಮೆಗೆ ಅಲ್ಲಿ ರಥವೆಳೆಯುತ್ತಾರೆ. ವಾರ್ಷಿಕವಾಗಿ ಚಿಕ್ಕಜಾತ್ರೆ ಮತ್ತು ದೊಡ್ಡಜಾತ್ರೆ ಎಂಬ ಮಹೋತ್ಸವಗಳು ಜರಗುತ್ತವೆ. ಚಿಕ್ಕಜಾತ್ರೆಯಲ್ಲಿ ೩ ತೇರುಗಳನ್ನು ಎಳೆದರೆ ದೊಡ್ಡಜಾತ್ರೆಯಲ್ಲಿ ೫ ತೇರುಗಳನ್ನು ಎಳೆಯುತ್ತಾರೆ. ಭಕ್ತರು ತಕ್ಕಡಿಯ ಒಂದು ತಟ್ಟೆಯಲ್ಲಿ ಕುಳಿತು, ತಮ್ಮ ಶರೀರದಷ್ಟು ತೂಕದ ಬೆಲ್ಲ , ಸಕ್ಕರೆ, ಅಕ್ಕಿ ಮುಂತಾದ ಯಾವುದಾದರೂ ವಸ್ತುವನ್ನು ತೂಗಿಸಿ ದೇವರಿಗೆ ಸಮರ್ಪಿಸುವ 'ತುಲಾಭಾರ ಸೇವೆ' ಅಲ್ಲಿನ ವಿಶಿಷ್ಟ ಹರಕೆಯಾಗಿದೆ.

**ಸುತ್ತೂರು:** ಪ್ರದಕ್ಷಿಣಪುರವೆಂದು ಕರೆಯಲ್ಪಟ್ಟ ಸುತ್ತೂರು ಕ್ಷೇತ್ರವು ತಾಲ್ಲೂಕು ಕೇಂದ್ರವಾದ ನಂಜನಗೂಡಿಗೆ ಸೇರಿದ್ದು, ಅಲ್ಲಿಂದ ೧೮ ಕಿ.ಮೀ.ಗಳ ದೂರದಲ್ಲಿ ಕಪಿಲಾನದಿಯ ತೀರದಲ್ಲಿದೆ. ಶಿವರಾತ್ರೀಶ್ವರನೆಂಬ ಮಹಾಮಹಿಮರಿಂದ ಸಾವಿರವರ್ಷಗಳ ಹಿಂದೆಯೇ ಸ್ಥಾಪನೆಗೊಂಡ ವೀರಸಿಂಹಾಸನ ಪರಂಪರೆಯ 'ಸುತ್ತೂರು ಮಠ'ದಿಂದಾಗಿ ಆ ಕ್ಷೇತ್ರವು ಜಗದ್ವಂದ್ಯವಾಗಿದೆ. ಶಿವರಾತ್ರೀಶ್ವರರ ಗದ್ದುಗೆ ಗುಡಿಯು ಅಲ್ಲಿನ ಪ್ರಮುಖ ಶ್ರದ್ಧಾಕೇಂದ್ರವಾಗಿದೆ. ಭವ್ಯವೂ ನಯನ ಮನೋಹರವೂ ಆದ ವಿದ್ಯಾಪೀಠವಿದೆ. ಬಹುಪರಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಸಹಿತವಾಗಿ ನಡೆಯುವ ವಾರ್ಷಿಕ ಸುತ್ತೂರು ಜಾತ್ರೆ ಲಕ್ಷಾಂತರ ಜನರನ್ನು ಆಕರ್ಷಿಸುತ್ತದೆ. ಸೋಮೇಶ್ವರ, ವೀರೇಶ್ವರ ನಾರಾಯಣ ದೇವರು ಮುಂತಾದವರ ಪ್ರಾಚೀನವಾದ ದೇವಮಂದಿರಗಳೂ ಸುತ್ತೂರಿನಲ್ಲಿವೆ. ಶಿವರಾತ್ರೀಶ್ವರ ಶಾಖಾಮಠವು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಪಾವನ ಪರಿಸರದಲ್ಲಿದೆ.

**ತಿರುಮಕೂಡಲು ನರಸೀಪುರ:** ತಿ.ನರಸೀಪುರವು ತಾಲ್ಲೂಕು ಕೇಂದ್ರವಾಗಿದೆ. ಕಾವೇರಿ, ಕಪಿಲಾ ಮತ್ತು ಗುಪ್ತಗಾಮಿನಿ ಸ್ಫಟಿಕ ಸರೋವರಗಳ ತ್ರಿವೇಣಿಸಂಗಮದ ದಂಡೆಯಲ್ಲಿದ್ದು ದಕ್ಷಿಣ ಕಾಶಿಯೆಂಬ ಘನತೆಗೆ ಪಾತ್ರವಾಗಿದೆ. ಅಗಸ್ತ್ಯಮುನಿಗಳಿಂದ ಸ್ಥಾಪನೆಗೊಂಡ ಅಗಸ್ತ್ಯೇಶ್ವರನ ದೇವಾಲಯವೇ ಅಲ್ಲಿನ ಪ್ರಮುಖ ಆರಾಧನಾಕೇಂದ್ರವಾಗಿದೆ.

ಆ ಕ್ಷೇತ್ರದಲ್ಲಿ ತಪಸ್ಸನ್ನಾಚರಿಸುತ್ತಿದ್ದ ಅಗಸ್ತ್ಯಮುನಿಗಳು ಒಮ್ಮೆ ಹನುಮಂತ ದೇವರನ್ನು ಉದ್ದೇಶಿಸಿ ''ಈ ಕ್ಷೇತ್ತದಲ್ಲಿ ಸ್ಥಾಪಿಸಲು ಒಂದು ಲಿಂಗವನ್ನು ಕಾಶೀಪಟ್ಟಣದಿಂದ ತಂದುಕೊಡಪ್ಪಾ'' ಎಂದು ಬೇಡಿಕೊಂಡು, ಸ್ಥಾಪನೆಗೊಂದು ಮುಹೂರ್ತವನ್ನೂ ನಿಶ್ಚಯಿಸಿಕೊಂಡರು. ಹನುಮಂತದೇವರು ಸಕಾಲಕ್ಕೆ ಬರಲಿಲ್ಲ. ಮುಹೂರ್ತವು ಮೀರಿಹೋಗುವ ಸಮಯ ಬಂದಾಗ ಮರಳಿನಿಂದಲೇ ಒಂದು ಲಿಂಗವನ್ನು ಗಟ್ಟಿಗೊಳಿಸಿ, ಸ್ಥಾಪಿಸಿ ಪೂಜಿಸಿದರು. ಅಷ್ಟಾಗುವ ಹೊತ್ತಿಗೆ ಹನುಮಂತದೇವರು ದೊಡ್ಡದಾದ ಲಿಂಗವನ್ನು ಹೊತ್ತು ತಂದನು. ಅದನ್ನು ಕಂಡ ಅಗಸ್ತ್ಯರು, ಹನುಮಂತನ ಪ್ರೀತ್ಯರ್ಥವಾಗಿ ಆ ಲಿಂಗವನ್ನು ಅಲ್ಲಿಯೇ ಬೇರೊಂದು ಗುಡಿಯಲ್ಲಿ ಸ್ಥಾಪಿಸಿ ಹನುಮಂತೇಶ್ವರನೆಂದು ಕರೆದರು.

ಅಗಸ್ತ್ಯೇಶ್ವರ ಲಿಂಗವನ್ನು ಕುರಿತಂತೆ ಪರಮಾಶ್ಚರ್ಯಕರವಾದ ಪವಾಡವೊಂದಿದೆ. ಆ ಲಿಂಗದ ನೆತ್ತಿಯ ಮೇಲೆ ಚಿಕ್ಕದೊಂದು ಕುಳಿಯಿದೆ. ಅದು ಹೇಗೋ ಏನೋ, ಆ ಕುಳಿಯಲ್ಲಿ ಪುಣ್ಯಜಲವು ಹೊರಕ್ಕೆ ಹರಿಯದಂತೆ ಸಂಗ್ರಹವಾಗುತ್ತಿದೆ. ಅರ್ಚಕರು ಅದನ್ನು ತೀರ್ಥದ ಬಟ್ಟಲಿಗೆ ತೋಡಿಕೊಂಡು ಭಕ್ತರಿಗೆ ನೀಡುತ್ತಾರೆ. ತೋಡಿಕೊಂಡತೆಲ್ಲಾ ಸಂಗ್ರಹಗೊಳ್ಳುವುದು ಒಂದು ಅದ್ಭುತವೇ ಸರಿ.

ರುದ್ರಪಾದ, ಅಕ್ಷಯವಟ ಎಂಬ ಪವಿತ್ರತಾಣಗಳೂ ಅಲ್ಲಿವೆ. ಅಗಸ್ತ್ಯೇಶ್ವರನಲ್ಲದೆ ಗುಂಜಾನರಸಿಂಹನೆಂಬ ವಿಷ್ಣುವಿನ ದೇವಾಲಯವೂ ಅಲ್ಲಿದೆ. ಗುಂಜಾ ಎಂದರೆ ಗುಲಗಂಜಿಯೆಂದರ್ಥ. ಕಾಶಿಗಿಂತ ಒಂದು ಗುಲಗಂಜಿ ತೂಕ ಹೆಚ್ಚು ಮಹಿಮೆ ತಿರುಮಕೂಡಲಿಗಿದೆ ಎಂಬುದನ್ನು ಅವನು ಸಾರುತ್ತಿದ್ದಾನೆ. ಅದರ ಕುರುಹಾಗಿ ಆ ಸ್ವಾಮಿಯ ಬಲಗೈ ಹೆಬ್ಬೆರಳು ಮತ್ತು ತೋರ್ಬೆರಳುಗಳ ನಡುವೆ ಗುಲಗಂಜಿ ಸಸ್ಯದ ಕಾಂಡವೊಂದನ್ನು ಬಿಡಿಸಿದ್ದಾರೆ. ಅಲ್ಲಿಯೇ ಪೂರ್ಣಮಂಗಳ ಕಾಮಾಕ್ಷಿಯ ಸನ್ನಿಧಾನವಿದೆ. ಮೂಲಸ್ಥಾನೇಶ್ವರ, ಆನಂದೇಶ್ವರ, ಭಿಕ್ಷೇಶ್ವರ ಎಂಬ ದೇವಾಲಯಗಳು ಅಲ್ಲಿದೆ. 'ದಕ್ಷಿಣದ ಕುಂಭಮೇಳ'ವೆಂಬ ತೀರ್ಥಸ್ನಾನಕ್ಕೆ ತಿ. ನರಸೀಪುರವೊಂದು ಕೇಂದ್ರವಾಗಿದೆ.

**ತಲಕಾಡು:** ತಿ. ನರಸೀಪುರ ತಾಲ್ಲೂಕಿಗೆ ಸೇರುವ, ಅಲ್ಲಿಂದ ೧೫ ಕಿ.ಮೀ.ಗಳ ಅಂತರದಲ್ಲಿರುವ ಗಜಾರಣ್ಯವೆಂದು ಕರೆಯಲ್ಪಟ್ಟಿರುವ ತಲಕಾಡು ಅತ್ಯಂತ ವಿಸ್ಮಯಕಾರಿಯಾದ ತೀರ್ಥಕ್ಷೇತ್ರವಾಗಿದೆ. ಕಾವೇರಿಯು ಅಲ್ಲಿ ತುಂಬಾ ವಿಶಾಲವಾಗಿ, ಮರಳು ಭೂಮಿಯ ಪಾತ್ರದಲ್ಲಿ ಹರಿದುಹೋಗಿದೆ. ವೈದ್ಯನಾಥೇಶ್ವರ ಮತ್ತು ಮನೋನ್ಮಣಿ ಅಮ್ಮನವರ ದೇವಾಲಯವೇ ತಲಕಾಡಿನ ಕೇಂದ್ರಬಿಂದುವಾಗಿದೆ. ಅದರ ಜೊತೆಗೆ ಮಹಾವಿಷ್ಣುವಿನ ಕೀರ್ತಿನಾರಾಯಣ ಆಲಯವು ಶಿಲ್ಪಕಲಾ ಕೌಶಲದಿಂದ ಕೂಡಿದ್ದು ಹೆಚ್ಚು ಜನಪ್ರಿಯವಾಗಿದೆ. ಭಾಗವತಸಂಪ್ರದಾಯದ 'ಬಾಲಕೃಷ್ಣಾನಂದ ಮಠ'ವೂ ಅಲ್ಲಿದೆ.

ಪರಶಿವನು ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ, ಈಶಾನ ಎಂಬ ಪಂಚಮುಖಗಳಿಂದ ಪರಿಶೋಭಿತನಾಗಿದ್ದಾನೆ. ಈ ಐದು ಮುಖಗಳಿಗೆ ಪ್ರತ್ಯೇಕವಾಗಿ ಅವನು ತಲಕಾಡಿನಲ್ಲಿ ಕ್ರಮವಾಗಿ ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ (ಸೈಕತೇಶ್ವರ), ಮಲ್ಲಿಕಾರ್ಜುನ ಮತ್ತು ವೈದ್ಯನಾಥೇಶ್ವರ ಎಂಬ ನಾಮದಿಂದ ನೆಲೆಸಿದ್ದಾನೆ. ೪ ರಿಂದ ೧೪ ವರ್ಷಗಳ ಕಾಲಾವಧಿಯಲ್ಲಿ ಜರಗುವ 'ಪಂಚಲಿಂಗ ದರ್ಶನ' ವೆಂಬ ಮಹಾಪರ್ವದಂದು, ಒಂದೇ ದಿನದಲ್ಲಿ ಆ ಐದೂಲಿಂಗಗಳನ್ನು ದರ್ಶನಮಾಡಿ ಪುಣ್ಯಭಾಜನರಾಗುವ ಪರಂಪರೆಯೊಂದು ನಡೆದು ಬಂದಿದೆ. ಆ ಪಂಚಲಿಂಗಗಳ ಪೈಕಿ ಅರ್ಕೇಶ್ವರಲಿಂಗವು ತಲಕಾಡಿನಿಂದ ೫ ಕಿ.ಮೀ.ಗಳ ದೂರದಲ್ಲಿದ್ದರೆ, ಮಲ್ಲಿಕಾರ್ಜುನಲಿಂಗವು ೮ ಕಿ.ಮೀ. ದೂರದ ಮುಡುಕುತೊರೆ ಎಂಬ ಊರಿನಲ್ಲಿದೆ. ಮಿಕ್ಕ ಮೂರು ಲಿಂಗಗಳು ತಲಕಾಡಿನಲ್ಲಿಯೇ ಇವೆ.

ತಲಕಾಡಿನಲ್ಲಿ ಹಲವಾರು ಮೈಲಿಗಳ ವಿಸ್ತೀರ್ಣಕ್ಕೆ ಮರಳುಗಾಡನ್ನು ನೆನಪಿಸುವಂತೆ ಮರಳ ರಾಶಿಯು ಹಬ್ಬಿಕೊಂಡಿರುವುದು ಭಗವಂತನು ಸೃಷ್ಟಿಸಿರುವ ವಿಸ್ಮಯವಲ್ಲದೆ ಬೇರೆಯಲ್ಲ. ಆ ದೇವಾಲಯಗಳೂ ಮರಳಿನ ಮಧ್ಯದಲ್ಲಿಯೇ ಇವೆ. ತಲಕಾಡು ಮರಳಿನಿಂದ ತುಂಬಿಹೋಗಲು ಇತಿಹಾಸದಲ್ಲೊಂದು ಕಥೆಯಿದೆ. ವಿಜಯನಗರದ ಆಶ್ರಿತರಾಗಿದ್ದ ಯದುಕುಲದ ಮೈಸೂರರಸರು, ರಾಜ ಒಡೆಯರ ಕಾಲದಲ್ಲಿ (೧೬೧೦) ತಾವೇ ಪ್ರಬಲರಾಗಿ ಶ್ರೀರಂಗಪಟ್ಟಣದಲ್ಲಿ ಸಿಂಹಾಸನವನ್ನೇರಿದರು. ಆ ಹೊತ್ತಿನಲ್ಲಿ ಅಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿಯಾಗಿ ಶ್ರೀರಂಗರಾಯನೆಂಬಾತನು ಆಳ್ವಿಕೆ ನಡೆಸುತ್ತಿದ್ದನು. ಅವನ ಮಡದಿ ಅಲಮೇಲಮ್ಮಳ ಅಮೂಲ್ಯ ಆಭರಣಗಳಿದ್ದು, ವಿಶೇಷದಿನಗಳಲ್ಲಿ ಅವುಗಳನ್ನು ಅಲ್ಲಿನ ರಂಗನಾಥ ಸ್ವಾಮಿ ದೇವಾಲಯದ ರಂಗನಾಯಕಿದೇವಿಯ ಸನ್ನಿಧಿಗೆ ಅಲಂಕರಿಸಲು ಕೊಡುತ್ತಿದ್ದಳು. ರಾಜ ಒಡೆಯರು ಅಲ್ಲಿಗೆ ರಾಜರಾದ ಮೇಲೆ, ಶ್ರೀರಂಗರಾಯನು ಮಡದಿ ಸಹಿತನಾಗಿ ತಲಕಾಡಿಗೆ ಸಮೀಪದ ಕಾವೇರಿ ತೀರದ ತಡಿಮಾಲಂಗಿ ಎಂಬ ಗ್ರಾಮದಲ್ಲಿ ನೆಲೆಸಿ, ಅಲ್ಲಿಯೇ ಕಾಲವಾದನು. ಹೀಗೆಯೇ ಇರುವಲ್ಲಿ ರಾಜ ಒಡೆಯರು ಅಲಮೇಲಮ್ಮನನ್ನು ಕುರಿತು "ನಿನ್ನ ಬಳಿಯಿರುವ ಆಭರಣಗಳನ್ನೆಲ್ಲಾ ನನ್ನ ವಶಕ್ಕೆ ಒಪ್ಪಿಸಬೇಕು" ಎಂದು ಆಜ್ಞೆಮಾಡಿ ಸೈನಿಕರನ್ನು ತಡಿಮಾಲಂಗಿಗೆ ಅಟ್ಟಿದರು. ಅದರಿಂದ ಕುಪಿತಳಾದ ಅಲಮೇಲಮ್ಮನು ಆ ಅಭರಣಗಳನ್ನೆಲ್ಲಾ ಗಂಟುಕಟ್ಟಿಕೊಂಡು, ಸೈನಿಕರಿಗೆ ದಕ್ಕದೆ, ತಡಿಮಾಲಂಗಿಯ ತೀರದ ಕಾವೇರಿಗೆ ಬಿದ್ದು ಪ್ರಾಣನೀಗಿದಳು. ಹಾಗೆ ಬೀಳುವಾಗ "ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ದೊರೆಗಳಿಗೆ ಮಕ್ಕಳಾಗದಿರಲಿ" ಎಂದು ಶಪಿಸಿದಳು. ಅದೇ ಕಾರಣವಾಗಿ ತಲಕಾಡಿನಲ್ಲಿ ಮರಳು ಆವರಿಸಿತು. ತಡಿಮಾಲಂಗಿಯ ಕಾವೇರಿಯ ಆ ತಾಣದಲ್ಲಿ ಅತ್ಯಂತ ಆಳವಾದ ಮಡುವು ರೂಪು ತಳೆಯಿತು. ಮೈಸೂರು ಅರಸು ಮನೆತನದಲ್ಲಿ ದತ್ತು ಮಗನಿಗೆ ಪುತ್ರ ಸಂತಾನವಾಗುತ್ತದೆ, ಮತ್ತೆ ಆ ಪುತ್ರನು ಉತ್ತರಾಧಿಕಾರಿಪಟ್ಟಕ್ಕೆ ದತ್ತು ಸ್ವೀಕಾರ ಮಾಡಬೇಕಾಗುತ್ತದೆ. ಈಗ ಇರುವ ಅರಮನೆಯ ಪ್ರಭುಗಳು ಈ ಹಿಂದಿನ ಪ್ರಭುಗಳಾಗಿದ್ದ ಶ್ರೀಕಂಠದತ್ತ ನರಸಿಂಹರಾಜ - ಪ್ರಮೋದಾದೇವಿಯವರಿಗೆ ದತ್ತುಪುತ್ರರು. ಈ ದತ್ತುಪುತ್ರರೀಗ ಪುತ್ರವಂತರಾಗಿದ್ದಾರೆ.

ಶಾಪನಿವಾರಣೆಗಾಗಿ ರಾಜ ಒಡೆಯರ ಕಾಲದಿಂದಲೂ ಅಲಮೇಲಮ್ಮನನ್ನು ವಿಗ್ರಹ ರೂಪದಲ್ಲಿ ಪೂಜಿಸುವ ಕ್ರಮವು ರೂಢಿಗೆ ಬಂದಿದೆ. ೨೦೦೬ರಲ್ಲಿ ಶ್ರೀಕಂಠದತ್ತ ದಂಪತಿಗಳು ತಡಿಮಾಲಂಗಿಗೆ ಹೋಗಿ ಗ್ರಾಮಸ್ಥರೊಡಗೂಡಿ ಮಡುವಿಗೆ ಬಾಗಿನವನ್ನರ್ಪಿಸಿ ಅಲಮೇಲಮ್ಮನನ್ನು ಪ್ರಾರ್ಥಿಸಿದ್ದಾರೆ. ಈಗ ತಡಿಮಾಲಂಗಿಯಲ್ಲಿ ಅಲಮೇಲಮ್ಮನ ಒಂದು ಗುಡಿಯೇ ನಿರ್ಮಾಣವಾಗಿ ನಿತ್ಯಪೂಜೆ ಸಲ್ಲುತ್ತಿದೆ. ದೈವಕೃಪೆ ಹೇಗಿದೆಯೋ ಯಾರುಬಲ್ಲರು!

**ಮುಡುಕುತೊರೆ:** ಪಂಚಲಿಂಗಗಳಲ್ಲಿ ಒಂದಾದ ಮಲ್ಲಿಕಾರ್ಜುನ ಲಿಂಗವು ಮುಡುಕುತೊರೆ ಗ್ರಾಮದ ಕಾವೇರಿ ತೀರದ ಅತ್ಯಂತ ನಯನಾಭಿರಾಮವಾದ ಒಂದು ಗುಡ್ಡದ ಮೇಲಿರುವ ಗುಡಿಯಲ್ಲಿ ಸ್ಥಾಪನೆಗೊಂಡಿದೆ. ಆ ಸ್ವಾಮಿಯು ಭ್ರಮರಾಂಬೆಯೊಡನೆ ಇದ್ದಾನೆ. ಆಂಧ್ರದ ಶ್ರೀಶೈಲದ ಮಲ್ಲಿಕಾರ್ಜುನನಿಗೂ ಈ ದೇವಾಲಯಕ್ಕೂ ಘನಿಷ್ಠವಾದ ಸಂಬಂಧವು ಬೆಳೆದುಬಂದಿದೆ. ದೇವಾಲಯದ ಕಡೆಯಿಂದ ಅಧಿಕಾರಿ ಪುರುಷರು ಅಲ್ಲಿನ ಬಸವನನ್ನು ಮುಂದುಮಾಡಿಕೊಂಡು ಪಾದಯಾತ್ರೆಯಲ್ಲಿ ಉಡುಗೊರೆಗಳ ಸಹಿತವಾಗಿ ಶ್ರೀಶೈಲವನ್ನು ತಲುಪುವ, ಆ ಉಡುಗೊರೆಗಳನ್ನು ಭ್ರಮರಾಂಬಾ-ಮಲ್ಲಿಕಾರ್ಜುನರ ಸನ್ನಿಧಿಗೆ ಸಮರ್ಪಿಸುವ, ತಾವೂ ಸತ್ಕೃತರಾಗಿ ಮರಳಿ ಬರುವ ಆಚರಣೆಯೊಂದು ಅನನ್ಯವಾಗಿದೆ. ಮುಡುಕುತೊರೆಯ ವಾರ್ಷಿಕ ಜಾತ್ರೆಯ ಹೊತ್ತಿನಲ್ಲಿ ನಡೆಯುವ, ಪಳಗಿಸಿದ ಗೂಳಿಗಳ ಸ್ಪರ್ಧಾತ್ಮಕ ಓಟವು ಗ್ರಾಮೀಣರಲ್ಲಿ ನವೋಲ್ಲಾಸವನ್ನು ತುಂಬುತ್ತದೆ.

**ಹಳೆ ಯಡತೊರೆ:** ಕೆ.ಆರ್. ನಗರ ತಾಲ್ಲೂಕಿಗೆ (ಕೃಷ್ಣರಾಜ ನಗರ) ಸೇರುವ ಹಳೆ ಯಡತೊರೆಯು ಅಲ್ಲಿಂದ ೩ ಕಿ.ಮೀ.ಗಳ ದೂರದಲ್ಲಿ, ಕಾವೇರಿ ನದಿಯಂಚಿನಲ್ಲಿ ವಿರಾಜಮಾನವಾಗಿದೆ. ಅರ್ಕೇಶ್ವರ -ಮೀನಾಕ್ಷಿಯವರ ಪುರಾತನ ದೇವಾಲಯವೊಂದು ಅಲ್ಲಿದೆ. ಸೂರ್ಯನು ತನ್ನ ಪುತ್ರಿ ಯಮುನೆಯನ್ನು ಮೋಹದ ಕಣ್ಣುಗಳಿಂದ ನೋಡಿದ್ದೇ ಕಾರಣವಾಗಿ ಪಾಪಕ್ಕೆ ಗುರಿಯಾದನು. ಅದರ ಪರಿಹಾರ್ಥವಾಗಿ ಸೂರ್ಯನು ಈ ಕ್ಷೇತ್ರಕ್ಕೆ ಬಂದು, ಶಿವನನ್ನು ಆರಾಧಿಸಿ, ಅರ್ಕೇಶ್ವರನೆಂಬ ಹೆಸರಿನಿಂದ ಅವನನ್ನು ಪ್ರತಿಷ್ಠಾಪಿಸಿ ಪೂಜಿಸಿ ಪಾಪಮುಕ್ತನಾದನು. ದೇವಾಲಯವು ಅತ್ಯಂತ ವಿಶಾಲವಾಗಿದೆ. ಪ್ರಾಕಾರದ ಒಳಜಗಲಿಯ ಸುತ್ತಲೂ ಬಿಡಿಬಿಡಿಯಾದ ತೆರೆದ ಗುಡಿಗಳಲ್ಲಿ ಬೇಕಾದಷ್ಟು ಲಿಂಗಗಳನ್ನು ಸ್ಥಾಪಿಸಿದ್ದಾರೆ. ೯ ದಿನಗಳ ವಾರ್ಷಿಕ ರಥೋತ್ಸವವು ಅತ್ಯಂತ ಅದ್ದೂರಿಯಿಂದ ನಡೆದು ಕೊನೆಯಲ್ಲಿ ಕಾವೇರಿಯ 'ಅರ್ಕಪುಷ್ಕರಿಣಿ'ಯಲ್ಲಿ ಸಾಗುವ ತೆಪ್ಪೋತ್ಸವವಂತೂ ವರ್ಣಮಯವಾಗಿರುತ್ತದೆ. ಶಿವರಾತ್ರಿಯ ಮರುದಿನ ಸೂರ್ಯೋದಯಕ್ಕೆ ಸರಿಯಾಗಿ, ಸೂರ್ಯನ ಕಿರಣಗಳು, ವಿಶಾಲವಾದ ಗುಡಿಯೊಳಗಿರುವ ಇಕ್ಕಟಾದ ಗರ್ಭಗೃಹದಲ್ಲಿರುವ ಲಿಂಗದ ಮೇಲೆ ಒಂದೆರಡು ನಿಮಿಷ ಬೀಳುವುದೊಂದು ವಿಸ್ಮಯವೇ ಸರಿ. ದೇವಾಲಯದ ಮಗ್ಗುಲಲ್ಲಿಯೇ ಶಾಂಕರ ಪರಂಪರೆಯ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠವಿದೆ.

**ಕಪ್ಪಡಿಕ್ಷೇತ್ರ :** ಕೆ.ಆರ್. ನಗರ ತಾಲ್ಲೂಕಿಗೆ ಸೇರುವ, ಅಲ್ಲಿಂದ ೧೨ ಕಿ.ಮೀ. ದೂರದಲ್ಲಿ ಕಾವೇರಿಯ ತೀರದಲ್ಲಿ ಕಪ್ಪಡಿಯೆಂಬ ನಯನಭಿರಾಮವಾದ ಪುಣ್ಯಕ್ಷೇತ್ರವಿದೆ. ಅದು ನಾವು ಈ ಮೊದಲೇ ನೋಡಿದ ಮಂಟೇಸ್ವಾಮಿಯ ಪ್ರಮುಖ ಶಿಷ್ಯನಾದ ರಾಚಪ್ಪಾಜಿಯ ತಪೋಭೂಮಿಯೂ ಐಕ್ಯಭೂಮಿಯೂ ಆಗಿದೆ. ಅಲ್ಲಿ ರಾಚಪ್ಪಾಜಿ ಮತ್ತು ಸೋದರಿ ಚೆನ್ನಾಜಮ್ಮನ ಗದ್ದುಗೆಗಳಿವೆ. ಶಿವರಾತ್ರಿಯಿಂದ ಮೊದಲ್ಗೊಂಡು ಯುಗಾದಿಯವರೆಗೆ ನಡೆಯುವ ಅಲ್ಲಿನ ಜಾತ್ರೆಯು ಕನ್ನಡನಾಡಿನ ದೀರ್ಘಾವಧಿಯ ಜಾತ್ರೆಗಳಲ್ಲೊಂದಾಗಿದೆ.

**ಚುಂಚನಕಟ್ಟೆ:** ಸಾಲಿಗ್ರಾಮ ತಾಲ್ಲೂಕಿಗೆ ಸೇರುವ, ಅಲ್ಲಿಂದ ೭ ಕಿ.ಮೀ.ಗಳ ದೂರದಲ್ಲಿರುವ ಚುಂಚನಕಟ್ಟೆಯು ಕಾವೇರಿಯ ತೀರದ ಅತ್ಯಧಿಕ ಜನಪ್ರಿಯವಾದ ರಾಮಕ್ಷೇತ್ರವಾಗಿದೆ. ಅಲ್ಲಿ ಕಾವೇರಿಯು ಚಿಕ್ಕದೊಂದು ಜಲಪಾತವಾಗಿ ಧುಮ್ಮಿಕ್ಕಿ ನಯನಮನೋಹಾರಿಯಾದ ದೃಶ್ಯಾವಳಿಗಳನ್ನು ಸೃಷ್ಟಿಸಿದೆ. ರಾಮಸೀತಾಲಕ್ಷ್ಮಣರು ಆ ಮಾರ್ಗವಾಗಿ ನಡೆದುಹೋದರೆಂದು ಸ್ಥಳಪುರಾಣದಲ್ಲಿದೆ. ನದಿಯ ದಂಡೆಯ ಮೇಲಿರುವ ದೇವಾಲಯದಲ್ಲಿ ರಾಮಸೀತಾಲಕ್ಷ್ಮಣರು ಪಾಂಚರಾತ್ರಾಗಮ ರೀತ್ಯಾ ನಿತ್ಯಪೂಜೆ ಮತ್ತು ರಥೋತ್ಸವಾದಿಗಳನ್ನು ಸ್ವೀಕರಿಸುತ್ತಿದ್ದಾರೆ. ಸಾಮಾನ್ಯವಾಗಿ ರಾಮನ ಎಡಭಾಗದಲ್ಲಿ ಸೀತಾದೇವಿಯು ಇರುವುದು ವಾಡಿಕೆಯಾದರೆ, ಈ ಗುಡಿಯಲ್ಲಿ ಮಾತ್ರ ಬಲಭಾಗದಲ್ಲಿ ಸೀತಾದೇವಿಯಿರುವುದು ಒಂದು ವೈಶಿಷ್ಟ್ಯವೆಂದು ಹೇಳಬಹುದು. ಮಕರಸಂಕ್ರಾಂತಿಯಂದು ನಡೆಯುವ ರಥೋತ್ಸವ ಕಾಲದಲ್ಲಿ ೧೫ ದಿನಗಳ ಅವಧಿಯ ದನಗಳ ಜಾತ್ರೆಗೆ ಉತ್ತರ ಕರ್ನಾಟಕದಿಂದಲೂ ರೈತರು ಬರುತ್ತಾರೆ. ಉತ್ತಮ ರಾಸುಗಳ ಪ್ರದರ್ಶನ ನಡೆದು ಬಹುಮಾನಗಳನ್ನೂ ಕೊಡುತ್ತಾರೆ. ಚುಂಚ ಚುಂಚಿಯರೆಂಬ ಬೇಡ ದಂಪತಿಗಳು ಅಲ್ಲಿ ತಪಸ್ಸು ಮಾಡಿ ರಾಮದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡು, ಅಲ್ಲಿಯೇ ನೆಲೆ ನಿಲ್ಲುವಂತೆ ಬೇಡಿಕೊಂಡಿದ್ದರಿಂದ ಅದು ಚುಂಚನಕಟ್ಟೆಯೆನಿಸಿತು. ಅದರ ಕುರುಹಾಗಿ ಚುಂಚಚುಂಚಿಯರು ಒಟ್ಟಿಗೇ ಇರುವ ಒಂದು ಶಿಲ್ಪವೂ ಗುಡಿಯಲ್ಲಿದೆ.

**ಜಪದ ಕಟ್ಟೆ:** ಸ್ಕಂದ ಪುರಾಣದಲ್ಲಿ ಜಪೇಶ್ವರ ಎಂದು ಉಲ್ಲೇಖಗೊಂಡಿರುವ ಜಪದಕಟ್ಟೆ ಕ್ಷೇತ್ರವು ಸಾಲಿಗ್ರಾಮ ತಾಲ್ಲೂಕಿಗೇ ಸೇರಿದ್ದು, ಅಲ್ಲಿಂದ ೧೦ ಕಿ.ಮೀಗಳ ದೂರದಲ್ಲಿ , ಕಾವೇರಿ ನದಿಯು ದಕ್ಷಿಣ ವಾಹಿನಿಯಾಗಿ ಹರಿಯುವ ತೀರದಲ್ಲಿ ನೆಲೆಗೊಂಡಿದೆ. ಅದು ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಶಾಖೆಯಾಗಿದ್ದು, ಮಠದ ಭವನಗಳಲ್ಲದೆ, ಭವ್ಯವಾದ ಜಪೇಶ್ವರ ದೇವಾಲಯವೂ ಅಲ್ಲಿ ಎದ್ದು ನಿಂತಿದೆ.

## ಮಂಡ್ಯ

**ಶ್ರೀರಂಗಪಟ್ಟಣ:** ತಾಲ್ಲೂಕು ಕೇಂದ್ರವಾಗಿರುವ ಶ್ರೀರಂಗಪಟ್ಟಣವನ್ನು ಕಾವೇರಿ ನದಿಯು ಸುಂದರವಾದೊಂದು ದ್ವೀಪವಾಗಿಸಿದೆ. ಮೈಸೂರರಸರ ರಾಜಧಾನಿಯಾಗಿ ಮೆರದ ಆ ಪಟ್ಟಣಕ್ಕೆ ಇನ್ನಿಲ್ಲದ ಐತಿಹಾಸಿಕ ಮಹತ್ವವೂ ಇದೆ. ಆ ದ್ವೀಪದೊಳಗೆ ಗೌತಮ ಮುನಿಸಂಪೂಜಿತನಾದ 'ಆದಿರಂಗ'ನೆಂದು ಖ್ಯಾತನಾದ ರಂಗನಾಥಸ್ವಾಮಿಯು ನೆಲೆಸಿ, ಅದನ್ನೊಂದು ಶ್ರೇಷ್ಠ ಯಾತ್ರಾತೀರ್ಥವನ್ನಾಗಿಸಿದ್ದಾನೆ. ದೇಶೋವಿಶಾಲವಾದ ಆ ದೇವಾಲಯದ ಗರ್ಭಗೃಹವನ್ನು ಪೂರ್ಣವಾಗಿ ತುಂಬಿಕೊಂಡಿರುವ ಸ್ವಾಮಿಯು ಶೇಷಶಯನನಾಗಿದ್ದಾನೆ. ಆದಿಶೇಷನ ೭ ಹೆಡೆಗಳ ನೆರಳಿನಲ್ಲಿ ತನ್ನ ಕುತ್ತಿಗೆಯನ್ನು ಸ್ವಲ್ಪ ಮೇಲೆತ್ತಿ, ಬಲಮಗ್ಗುಲಾಗಿ, ಬಲಗೈ ಮೇಲೆ ತನ್ನ ಕಿರೀಟ ಮಂಡಿತ ತಲೆಯನ್ನೂರಿ ಪವಡಿಸಿದ ಅಪೂರ್ವ ಭಂಗಿಯಲ್ಲಿದ್ದಾನೆ. ಪಾದಮೂಲದಲ್ಲಿ ಲಕ್ಷ್ಮೀದೇವಿಯೂ, ಗೌತಮರೂ ಇದ್ದಾರೆ. ೧೦ ಅಡಿಗಳಷ್ಟು ಉದ್ದವಿರುವ ಈ ಪರಿಯ ಭುವನ ಮೋಹನ ಮೂರ್ತಿಯು ಭರತಖಂಡದಲ್ಲಿ ಮತ್ತೆಲ್ಲಿಯೂ ಇಲ್ಲ. ರಂಗನಾಯಕಿ ಅಮ್ಮನವರ ಪ್ರತ್ಯೇಕ ಸನ್ನಿಧಿಯಿದೆ.

ಗುಡಿಯೊಳಗೆ ಗರುಡದೇವರು, ಸೂರ್ಯನಾರಾಯಣ, ಲಕ್ಷ್ಮೀನರಸಿಂಹಸ್ವಾಮಿ, ಗಜೇಂದ್ರವರದ ಸ್ವಾಮಿ, ವೆಂಕಟರಮಣಸ್ವಾಮಿ, ಹನುಮಂತದೇವರು-ಮೊದಲಾದ ದೇವರ ಬಹುದೊಡ್ಡ ಮೂರ್ತಿಗಳಿಂದ ಕೂಡಿದ ಗುಡಿಗಳಿವೆ. ಶ್ರೀವೈಷ್ಣವ ಆಚಾರ್ಯರು ಮತ್ತು ಆಳ್ವಾರ್‌ಭಕ್ತರ ಸನ್ನಿಧಿಗಳೂ ಇವೆ. ವಾರ್ಷಿಕವಾಗಿ ರಥೋತ್ಸವ, ತೀರ್ಥೋತ್ಸವ, ಮೈಸೂರಿನಂತೆಯೇ ನವರಾತ್ರಿಯ ಜಂಬೂಸವಾರಿ ಉತ್ಸವ ಮುಂತಾದವು ಭರ್ಜರಿಯಾಗಿ ಸಂಪನ್ನಗೊಳ್ಳುತ್ತವೆ.

ಪಟ್ಟಣದೊಳಗೆ ರಂಗನಾಥನಲ್ಲದೆ ಲಕ್ಷ್ಮೀನರಸಿಂಹ, ಗಂಗಾಧರೇಶ್ವರ, ಮತ್ತು ಜ್ಯೋತಿರ್ಮಹೇಶ್ವರರ ದೊಡ್ಡ ದೊಡ್ಡದೇವಾಲಯಗಳಿವೆ. ಕೋದಂಡರಾಮ, ಶತಕೋಟಿ ರಾಮಮಂದಿರ ಮುಂತಾದ ೩೦ಕ್ಕೂ ಹೆಚ್ಚು ಮಂದಿರಗಳಿವೆ. ಆ ಪೈಕಿ ಕೋದಂಡ ರಾಮ ದೇವಾಲಯದ ಹಿನ್ನೆಲೆಯಲ್ಲಿ ನಾವು ಮೆಲುಕು ಹಾಕಲೇಬೇಕಾದ ಭಕ್ತಿರಸಭರಿತವಾದ ವೃತ್ತಾಂತವೊಂದನ್ನು ಇಲ್ಲಿ ಬರೆಯುತ್ತೇನೆ: ಈ ಹಿಂದೆ ಇಲ್ಲಿ ಆಳುತ್ತಿದ್ದ ಯದುಕುಲದ ಮಹಾರಾಜರೊಬ್ಬರ ಕಾಲದಲ್ಲಿ ಅವರ ಅರಮನೆಯ ಕೆಲಸಿಗನು ಒಂದು ದಿನ

ದೊರೆಗಳಿಗೆ ಕ್ಷೌರಮಾಡಲು ತೊಡಗಿದ. ಸುಖಾಸನದಲ್ಲಿ ಕುಳಿತ ದೊರೆಗಳಿಗೆ ಮಂಪರು ಕವಿದು ಹಾಗೆಯೇ ಒರಗಿ ನಿದ್ರೆಹೋದರು. ದಣಿಗಳು ಏನೋ ಗಹನವಾದ ಆಲೋಚನೆಯಲ್ಲಿ ಮುಳುಗಿರಬೇಕೆಂದು ಬಗೆದ ಕ್ಷೌರಿಕನು, ತನ್ನ ಸೇವೆಯನ್ನು ಪೂರ್ಣಗೊಳಿಸಿ, ಅವರ ಮುಂದೆ ಕೈಕಟ್ಟಿ ನಿಂತನು. ಒಂದೆರಡು ಕ್ಷಣಗಳಲ್ಲಿ ದೊರೆಗೆ ಎಚ್ಚರವಾಯಿತು. ಮೈಮರೆತು ಬಿಟ್ಟೆನಲ್ಲಾ ಎಂದುಕೊಳ್ಳುತ್ತಲೇ ಪ್ರಭುಗಳು ''ಬಾರಯ್ಯ, ನಿನ್ನ ಕೆಲಸ ಆಗಿಹೋಗಲಿ'' ಎಂದರು. ಅವನು ಕನ್ನಡಿಯನ್ನೊರಸಿ, ದೊರೆಗಳ ಕೈಗಿತ್ತು ''ಮಹಾಸ್ವಾಮಿಯವರು ಪರಾಂಬರಿಸಬೇಕು'' ಎಂದನು. ದೊರೆಗಳು ನೋಡುತ್ತಾರೆ, ಬಹಳ ನುಣ್ಣಗೆ ಲಕ್ಷಣವಾಗಿ ಮಾಡಿದ್ದಾನೆ! ''ನಾನು ನಿದ್ರೆಯಲ್ಲಿದ್ದರೂ ಇಷ್ಟು ಶುಭ್ರವಾಗಿ, ಅದೂ ನನಗೆ ಗೊತ್ತಾಗದ ಹಾಗೆ ಮಾಡಿದ್ದಾನಲ್ಲಾ'' ಎಂದು ಅವರಿಗೆ ಮಹದಾನಂದವಾಯಿತು. ಅದೇ ಕ್ಷಣದಲ್ಲಿ ಅವರು ''ನಿನ್ನ ಕೆಲಸವನ್ನು ಮೆಚ್ಚಿದ್ದೇನೆ, ನಿನಗೇನು ಬೇಕೋ ಅದನ್ನು ಕೇಳಿಕೋ'' ಎಂದು ಪ್ರಾಂಜಲರಾಗಿ ಹೇಳಿದರು. ರಾಮಭಕ್ತನಾಗಿದ್ದ ಆ ಕ್ಷೌರಿಕನು ಏಕಚಿತ್ತದಿಂದ ''ಈ ದಿವ್ಯಕ್ಷೇತ್ರದಲ್ಲಿ ಮಹಾಸ್ವಾಮಿಯವರು ನನಗೊಂದು ರಾಮದೇವರ ಗುಡಿಯನ್ನು ಅಪ್ಪಣೆಕೊಡಿಸಿದರೆ ನಾನು ಧನ್ಯನಾಗುತ್ತೇನೆ'' ಎಂದು ಬೇಡಿಕೊಂಡನು. ಅವನ ಬೇಡಿಕೆ ಈಡೇರಿದುದರ ಫಲವಾಗಿ ಕೋದಂಡ ರಾಮದೇವರ ಗುಡಿ ಎದ್ದುನಿಂತಿತು. ಈಗಲೂ ಆ ಗುಡಿಯು ಪಟ್ಟಣದ ಸವಿತಾಸಮಾಜದವರ ಆರೈಕೆಯಲ್ಲಿಯೇ ಇದ್ದು, ಬ್ರಾಹ್ಮಣರೇ ಅರ್ಚಕರು. ಸವಿತಾ ಸಮಾಜದವರು ವಾರ್ಷಿಕವಾಗಿ ತ್ಯಾಗರಾಜರ ಆರಾಧನಾ ಮಹೋತ್ಸವವನ್ನು ಪಟ್ಟಣದ ಎಲ್ಲಾ ಜನಾಂಗದವರನ್ನೂ ಕೂಡಿಸಿಕೊಂಡು ಅನ್ನಸಂತರ್ಪಣೆಯ ಸಹಿತವಾಗಿ ಅತಿಶಯವಾದ ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಾರೆ. ದೈವಭಕ್ತಿಯೆಂದರೆ ಹೀಗಲ್ಲವೇ!

**ಪಶ್ಚಿಮವಾಹಿನಿ:** ಶ್ರೀರಂಗಪಟ್ಟಣಕ್ಕೆ ೨ ಕಿ.ಮೀ. ಅಂತರದಲ್ಲಿ ಕಾವೇರಿಯ ಒಂದು ಕವಲು ಪಶ್ಚಿಮಾಭಿಮುಖವಾಗಿ ಹರಿದು, ಅದನ್ನೊಂದು ತೀರ್ಥವಾಗಿಸಿದೆ, ಅದಕ್ಕೆ ಪಶ್ಚಿಮವಾಹಿನಿ ಎಂದೇ ಹೆಸರಾಗಿದೆ. ಅನೇಕ ದೇವಾಲಯಗಳೂ ಛತ್ರಗಳೂ ಅಲ್ಲಿವೆ. ಅದು ಪಿತೃಕಾರ್ಯಗಳಿಗೆ ಪವಿತ್ರತಾಣವಾಗಿದ್ದು, ಸದಾಕಾಲ ಅಲ್ಲಿ ಶ್ರದ್ಧಾವಂತರು ಹಾಜರಿರುತ್ತಾರೆ.

**ಕರೀಘಟ್ಟ:** ಶ್ರೀರಂಗಪಟ್ಟಣಕ್ಕೆ ಸನಿಹದ ಕರೀಘಟ್ಟ ಎಂಬ ಬೆಟ್ಟದಮೇಲೆ ಶ್ರೀನಿವಾಸ ದೇವರ ತೀರ್ಥಕ್ಷೇತ್ರವೊಂದಿದ್ದು, ಅದು ಕಾವೇರಿಯ ಉಪನದಿಯಾದ ಲೋಕಪಾವನಿಯ ದೆಸೆಯಿಂದ ಪಾವನ ಭೂಮಿಯಾಗಿದೆ.



ಚೆಲುವನಾರಾಯಣ ಮಂದಿರ, ಮೇಲುಕೋಟೆ

**ಮೇಲುಕೋಟೆ:** ಕರ್ನಾಟಕದ ತೀರ್ಥಕ್ಷೇತ್ರಗಳನ್ನು ಸ್ಮರಿಸುವಾಗ ಯದುಗಿರಿ ಎಂಬ ಪುರಾಣನಾಮದಿಂದ ಶೋಭಿಸುವ ವಿಸ್ತಾರವಾದ ಬೆಟ್ಟದ ಮೇಲಿರುವ ಮೇಲುಕೋಟೆಯನ್ನು ಮರೆಯುವಂತೆಯೇ ಇಲ್ಲ. ಅಲ್ಲಿರುವ ವಿಶಾಲವಾದ ಪಟ್ಟಣಕ್ಕೂ ಮೇಲುಕೋಟೆಯೆಂದೇ ಹೆಸರು. ಪಾಂಡವಪುರ ತಾಲೂಕಿಗೆ ಸೇರುವ ಆ ಪಟ್ಟಣವು ಅಲ್ಲಿಂದ ೩೦ ಕಿ.ಮೀ.ಗಳ ದೂರದಲ್ಲಿದೆ. ರಾಮಾನುಜಾಚಾರ್ಯರಿಂದ ಸ್ಥಾಪನೆಗೊಂಡ ಪಾಂಚರಾತ್ರಾಗಮದ ಚೆಲುವನಾರಾಯಣ ಸ್ವಾಮಿಯ ವಿಶಾಲವಾದ ದೇವಾಲಯವಿದೆ. ಯದುಗಿರಿ ನಾಚ್ಚಿಯಾರ್ ಅಮ್ಮನವರ ಪ್ರತ್ಯೇಕವಾದ ಗುಡಿಯೂ ಇದೆ. ಜೀವಕಳೆಯಿಂದ ತುಂಬಿತುಳುಕುವ ರಾಮಾನುಜರ ಮೂರ್ತಿಯಿಂದ ಕೂಡಿದ ಗುಡಿಯ ಜೊತೆಗೆ ಇನ್ನೂ ಕೆಲವು ಆಚಾರ್ಯರ ಮತ್ತು ಆಳ್ವಾರ್ ಭಕ್ತರ ಗುಡಿಗಳಿವೆ. ವಾರ್ಷಿಕವಾಗಿ ನಡೆಯುವ 'ವೈರಮುಡಿ ಉತ್ಸವ' ಎಂಬುದು ಅತ್ಯಂತ ಉಜ್ವಲವಾಗಿದ್ದು, ಅದರ ಜೊತೆಗೆ ವರ್ಷವಿಡೀ ಒಂದಲ್ಲ ಒಂದು ಉತ್ಸವ ಮೇಲುಕೋಟೆಯಲ್ಲಿ ಸಂಪನ್ನಗೊಳ್ಳುತ್ತಲೇ ಇರುತ್ತದೆ. ಬೆಟ್ಟದ ಮೇಲೆ ಬೆಟ್ಟವೆಂಬಂತಿರುವ ಇನ್ನೊಂದು ಶಿಖರಾಗ್ರದಲ್ಲಿ ಯೋಗಾನರಸಿಂಹದೇವರ ದೇವಾಲಯವಿದೆ.

ಶ್ರೀರಾಮಲಕ್ಷ್ಮಣರು ಈ ಕ್ಷೇತ್ರಕ್ಕೆ ಬಂದಿದ್ದಾಗ, ಸೀತೆಯ ಬಾಯಾರಿಕೆಯ ಪರಿಹಾರಕ್ಕಾಗಿ ಶ್ರೀರಾಮನು ತನ್ನ ಬಾಣದಿಂದ ಉಂಟುಮಾಡಿದ 'ಧನುಷ್ಕೋಟಿ' ಎಂಬ ಜೀವಜಲಭರಿತವಾದ ತೀರ್ಥವು, ಪರ್ವತದ ತುದಿಯ ಒಂದು ರುದ್ರರಮಣೀಯವಾದ ಸ್ಥಾನದಲ್ಲಿದೆ. ಅಂತೆಯೇ ಇನ್ನೊಂದು ತುದಿಯಲ್ಲಿ ಸದಾಕಾಲ ಹರಿಯುವ 'ತೊಟ್ಟಿಲಮಡು' ಎಂಬ ಪುಣ್ಯತೀರ್ಥವಿದೆ. ರಾಮಾನುಜರಿಗೆ ಪ್ರಿಯವಾಗಿದ್ದ ಓಂ ನಮೋ ನಾರಾಯಣಾಯ ಎಂಬ ಅಷ್ಟಾಕ್ಷರೀ ಮಹಾಮಂತ್ರದ ಪ್ರತೀಕವಾಗಿ ಬೆಟ್ಟದ ವಿವಿಧ ಭಾಗಗಳಲ್ಲಿ 'ಅಷ್ಟ ತೀರ್ಥ'ಗಳು ವಿವಿಧ ನಾಮದಿಂದ ಕಂಗೊಳಿಸುತ್ತಿದೆ. ದೇವಾಲಯಕ್ಕೆ ಸನಿಹದಲ್ಲೇ ಕೆಲವು ಪುಷ್ಕರಣಿಗಳಿವೆ. ಪಟ್ಟಣದೊಳಗೆ ರಾಮಾನುಜ ಪರಂಪರೆಯೂ ಯತಿರಾಜ ಮಠವೇ ಆದಿಯಾಗಿ ಆರು ಮಠಗಳಿವೆ. ಹಲವು ದೇವಾಲಯಗಳೂ ಸುಂದರವಾದ ಮಂಟಪಗಳೂ ವಿವಿಧ ಜನಾಂಗದವರು ಕಟ್ಟಿಕೊಂಡಿರುವ ಛತ್ರಗಳೂ ಅಲ್ಲಿವೆ. ಈಗೊಂದು ಸಂಸ್ಕೃತ ವಿಶ್ವವಿದ್ಯಾಲಯವೆ ಅಲ್ಲಿದೆ! ಕ್ಷೇತ್ರವನ್ನು ಕುರಿತಂತೆ ಸಂಸ್ಕೃತ ಮತ್ತು ಕನ್ನಡಗಳಲ್ಲಿ ತಕ್ಕಷ್ಟು ಸಾಹಿತ್ಯವಿದೆ.

**ಆದಿಚುಂಚನಗಿರಿ:** ನಾಗಮಂಗಲ ತಾಲ್ಲೂಕಿಗೆ ಸೇರುವ ಆದಿಚುಂಚನಗಿರಿಯು ಪರ್ವತಾಗ್ರದಲ್ಲಿರುವ ಪುಣ್ಯಕ್ಷೇತ್ರವಾಗಿದೆ. ಈ ಹಿಂದೆ ಅಲ್ಲಿ ಉತ್ತರ ಭಾರತೀಯ ನಾಥಪಂಥದವರ ಮಠವೊಂದಿದ್ದು, ಈಗ ಅದು ನಮ್ಮ ನಾಡಿನ ಒಕ್ಕಲಿಗ ಜನಾಂಗದ ವಶಕ್ಕೆ ಬಂದು, 'ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ'ವೆಂಬ ಹೆಸರಿನಲ್ಲಿ ಒಂದು ವಿಶ್ವವಿದ್ಯಾನಿಲಯವೇ ಸ್ಥಾಪನೆಗೊಂಡು ಲೋಕವಿಖ್ಯಾತವಾಗಿದೆ. ಪುರಾತನಕಾಲದಲ್ಲಿಯೇ ಸಿದ್ಧಯೋಗಿಯೊಬ್ಬ

ರಿಂದ, ಅವರ ಪಂಚಪ್ರಾಣಸ್ವರೂಪವಾಗಿ ಗಂಗಾಧರೇಶ್ವರ, ಸೋಮೇಶ್ವರ, ಮಲ್ಲೇಶ್ವರ, ಸಿದ್ಧೇಶ್ವರ ಮತ್ತು ಕಾಲಭೈರವೇಶ್ವರರೆಂಬ ಶಿವಾಲಯಗಳು ಸ್ಥಾಪನೆಗೊಂಡು, ಅದೊಂದು ಪಂಚಲಿಂಗ ಕ್ಷೇತ್ರವಾಗಿದೆ. ಒಂದು ಕೂಗಿಗೆ ಮೂರು ಕೂಗು ಪ್ರತಿಧ್ವನಿ ಕೊಡುವ ಕೂಗುಬಂಡೆ, ಚೋಳೂರು ಕಂಬ, ಆಕಾಶಭೈರವ ಶಿಖರ, ಗಳಿಗೆ ಕಲ್ಲು ಎಂಬ ರೋಮಾಂಚನಕಾರಿಯಾದ ತಾಣಗಳು ಅಲ್ಲಿವೆ. ಗಳಿಗೆಕಲ್ಲು ಎಂಬುದು, ಕಡಿದಾದ ಕೋಡುಗಲ್ಲು. ಮಕ್ಕಳಾಗದವರು ಹರಕೆ ಹೊತ್ತು, ಅದು ಫಲಿಸಿದ ಮೇಲೆ ಶಿಶುವನ್ನೂ ಬೆನ್ನಿಗೆ ಕಟ್ಟಿಕೊಂಡು ಮೇಲಿನಿಂದ ಜಡಿದು ಕೂರಿಸಿರುವ ಸರಪಳಿಯನ್ನು ಹಿಡಿದು, ಅದರ ತುದಿಗೇರುವ ದೃಶ್ಯವು ನಮ್ಮನ್ನು ಅಲ್ಲಾಡಿಸಿಬಿಡುತ್ತದೆ. ವಾರ್ಷಿಕ ಜಾತ್ರೆಗಳು ಮತ್ತು ಜನಪದ ಕಲಾಮೇಳಗಳು ಸಮೃದ್ಧವಾದ ಅನ್ನಸಂತರ್ಪಣೆಯೊಂದಿಗೆ ಅಲ್ಲಿ ಜರಗುತ್ತವೆ. ಶಿವನ ಜಟಾಗಂಗೆಯಿಂದಲೇ ಬಿಂದುವೊಂದು ಚಿಮ್ಮಿಬಿದ್ದು ರೂಪಗೊಂಡ ಪವಿತ್ರ ಕೊಳವೊಂದು ಬೆಟ್ಟದಲ್ಲಿದೆ. ಕ್ಷೇತ್ರವನ್ನು ಕುರಿತಂತೆ ತಕ್ಕಷ್ಟು ಜನಪದ ಸಾಹಿತ್ಯವಿದೆ.

**ಶಿವನಸಮುದ್ರ :** ಮಳವಳ್ಳಿ ತಾಲ್ಲೂಕಿಗೆ ಸೇರುವ ಶಿವನಸಮುದ್ರವು ಒಂದು ದ್ವೀಪವಾಗಿ 'ಮಧ್ಯರಂಗ'ನೆನಿಸಿದ ರಂಗನಾಥ ಸ್ವಾಮಿಯ ದೇವಾಲಯದಿಂದ ಮಹತ್ವ ತೀರ್ಥಕ್ಷೇತ್ರವಾಗಿದೆ. ಶೇಷಶಯನ ಮೂರ್ತಿಯು ಶ್ರೀರಂಗಪಟ್ಟಣಕ್ಕಿಂತ ಚಿಕ್ಕದು. ಕಾವೇರಿಯ ಶಾಖೆಗಳು ಪರಸ್ಪರ ಕೂಡುವ ಮುನ್ನ ಗಗನಚುಕ್ಕಿ ಮತ್ತು ಭರಚುಕ್ಕಿ ಎಂಬ ಜಲಪಾತಗಳಾಗಿ ರುದ್ರರಮಣೀಯವಾದ ಕಮರಿಯೊಳಕ್ಕೆ ಧುಮ್ಮಿಕ್ಕುತ್ತವೆ. ಅವುಗಳ ವೈಭವಾಚರಣೆಗಾಗಿ ವಾರ್ಷಿಕ 'ಜಲಪಾತೋತ್ಸವ'ವನ್ನು ಜರಿಗಿಸುತ್ತಾರೆ. ರಂಗನಾಥಸ್ವಾಮಿಯದಲ್ಲದೆ ಸೋಮೇಶ್ವರ–ಪ್ರಸನ್ನ ಮೀನಾಕ್ಷಿ ಅಮ್ಮನವರ ಹಿರಿದಾದ ಒಂದು ದೇವಾಲಯವೂ ಇದೆ. ಅಮ್ಮನವರ ಎದುರಿನಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಶ್ರೀಚಕ್ರವೊಂದಿದೆ. ಮೂರು ರಂಗಕ್ಷೇತ್ರಗಳಿದ್ದು, ತಮಿಳುನಾಡಿನ ಕಾವೇರಿ ನದಿಯ ಶ್ರೀರಂಗ ಎಂಬ ದ್ವೀಪದೊಳಗಿರುವ ಶ್ರೀರಂಗನಾಥ ಕ್ಷೇತ್ರವು ಅಂತ್ಯರಂಗವೆಂದು ಖ್ಯಾತವಾಗಿದೆ.

**ವರಾಹನಾಥನ ಕಲ್ಲಹಳ್ಳಿ :** ಕೃಷ್ಣರಾಜಪೇಟೆ ತಾಲ್ಲೂಕಿಗೆ ಸೇರುವ ವರಾಹನಾಥ ಕಲ್ಲಹಳ್ಳಿಯು ಕಾವೇರಿ ನದಿಯ ತೀರದ ಅನನ್ಯವಾದ ಪುಣ್ಯಕ್ಷೇತ್ರ. ವರಾಹಸ್ವಾಮಿಯೆಂದರೆ ಹಂದಿಮುಖದ ದೇವರು, ಮಹಾವಿಷ್ಣುವಿನ ಮೂರನೆಯ ಅವತಾರ. ೧೫ ಅಡಿಗಳಷ್ಟು ಎತ್ತರದ ಕುಳಿತಭಂಗಿಯ ಆ ವಿಶಾಲಮೂರ್ತಿಯ ಎಡತೊಡೆಯ ಮೇಲೆ ಭೂದೇವಿಯು ಆಸೀನಳಾಗಿದ್ದಾಳೆ. ಮೆಟ್ಟಿಲುಗಳನ್ನು ಏರಿ ನಿಂತು ಪೂಜಾದಿಗಳನ್ನು ಮಾಡಬೇಕಾದ ಘನಗಂಭೀರ ಮೂರ್ತಿಯದು. ಇಷ್ಟು ಭರ್ಜರಿಯಾದ ಮೂರ್ತಿ ಶಿಲ್ಪಕಲಾಜಗತ್ತಿನ ವಿಸ್ಮಯವೇ ಸರಿ! ಗುಪ್ತವಾಗಿದ್ದ ಆ ಕ್ಷೇತ್ರವು ಇತ್ತೀಚೆಗೆ ಅಭಿವೃದ್ಧಿಗೊಂಡು ನಿತ್ಯವೂ ಯಾತ್ರಿಕರ ಜಾತ್ರೆಯೇ ಇರುತ್ತದೆ.

## ಹಾಸನ

**ರಾಮನಾಥಪುರ:** ರಾಮನಾಥಪುರವು ಅರಕಲಗೂಡು ತಾಲ್ಲೂಕಿಗೆ ಸೇರಿದ್ದು. ಅಲ್ಲಿಂದ ೧೯ ಕಿ.ಮೀ.ಗಳ ದೂರದಲ್ಲಿ ಕಾವೇರಿ ನದಿ ತೀರದ ಬಹುದೊಡ್ಡ ತೀರ್ಥಕ್ಷೇತ್ರವಾಗಿದೆ. ಅದು ರಾಮೇಶ್ವರ ಸ್ವಾಮಿ, ಅಗಸ್ತ್ಯೇಶ್ವರ ಸ್ವಾಮಿ, ಪ್ರಸನ್ನ ಸುಬ್ರಹ್ಮಣ್ಯ ಸ್ವಾಮಿ, ಪಟ್ಟಾಭಿರಾಮಸ್ವಾಮಿ ಮೊದಲಾದ ಹಲವು ದೇವಸನ್ನಿಧಿಗಳ ಬೀಡಾಗಿದೆ. ಶುಕ್ರಾಚಾರ್ಯರು ಇಲ್ಲಿಯೇ ತಪಸ್ಸು ಮಾಡಿ ಅಮೃತಸಂಜೀವಿನಿ ಮಂತ್ರವನ್ನು ಸಿದ್ಧಿಸಿಕೊಂಡರು.

ಶ್ರೀರಾಮನು ರಾವಣವಧೆಯ ಪಾಪನಿವಾರಣೆಗಾಗಿ ಈ ಕ್ಷೇತ್ರಕ್ಕೆ ಬಂದು ರಾಮಲಿಂಗೇಶ್ವರ ಲಿಂಗವನ್ನು ಸ್ಥಾಪಿಸಿ ಪೂಜಿಸಿದನು. ಪಟ್ಟಣಕ್ಕೆ ರಾಮನಾಥಪುರ ಎಂದು ಹೆಸರಾಗಲು ಅದೇ ಕಾರಣವಾಯಿತು. ಅಲ್ಲಿ ದೇವಿಯ ಸನ್ನಿಧಿ ಇರಲಿಲ್ಲ . ಶಂಕರಾಚಾರ್ಯರು ಆಗಮಿಸಿ ಇಂದ್ರಾಕ್ಷಮ್ಮದೇವಿಯನ್ನು ಪ್ರತಿಷ್ಠಾಪಿಸಿ ಆಕೆಯ ಎದುರಿಗೆ ಶ್ರೀಚಕ್ರವನ್ನೂ ನೆಲೆಗೊಳಿಸಿದ್ದಾರೆ. ಅಗಸ್ತ್ಯಮುನಿಗಳಿಂದ ಸ್ಥಾಪನೆಗೊಂಡ ಅಗಸ್ತ್ಯೇಶ್ವರ ದೇವಾಲಯದಲ್ಲಿ, ಅಗಸ್ತ್ಯರ ಪತ್ನಿ ಲೋಪಾಮುದ್ರೆಯ ಸನ್ನಿಧಾನವು ವಿಶೇಷವಾಗಿದೆ. ಪ್ರಸನ್ನ ಸುಬ್ರಹ್ಮಣ್ಯಸ್ವಾಮಿಯು ಸರ್ಪರೂಪನಾಗಿ ಅಲ್ಲಿ ನೆಲೆಯಾಗಿದ್ದಾನೆ. ಅವನಿಗಾಗಿ ನಡೆಯುವ ತೇರು, ದನಗಳ ಜಾತ್ರೆ ಅತ್ಯಂತ ದೊಡ್ಡದು. ಸಂತರ್ಪಣೆಯ ಕಾಲದಲ್ಲಿ ಹರಕೆ ಹೊತ್ತವರು ಎಂಜಲುಎಲೆಗಳ ಮೇಲೆ ಉರುಳು ಸೇವೆ ಮಾಡುವ 'ಮಡೆ ಹೊರಳುವುದು' ಎಂಬ ವಿಶಿಷ್ಟ ಆಚರಣೆ ಇಲ್ಲಿ ನಡೆಯುತ್ತದೆ. ಲಕ್ಷ್ಮೀನರಸಿಂಹಸ್ವಾಮಿಯ ದೇವಾಲಯದಲ್ಲಿ ಲಕ್ಷ್ಮಿಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಆಸೀನನಾಗಿರುವ ಸ್ವಾಮಿಯ ಮೂರ್ತಿಯು ಮನೋಹಾರಿಯಾಗಿದೆ. ಪಟ್ಟಾಭಿರಾಮನನ್ನು ಸೌಭರಿಮುನಿಗಳು ಸ್ಥಾಪಿಸಿ ಪೂಜಿಸಿದ್ದಾರೆ. ಆ ಪಟ್ಟಾಭಿರಾಮ ದೇವಾಲಯದಲ್ಲಿ ರಾಮಪಂಚಾಯತನವೆನ್ನುವ ರಾಮ–ಸೀತಾ–ಲಕ್ಷ್ಮಣ–ಭರತ– ಶತ್ರುಘ್ನರೆಲ್ಲರೂ ಒಟ್ಟಿಗೆ ಇದ್ದಾರೆ. ಹನುಮಂತನೂ ಇದ್ದಾನೆಂದು ಹೇಳಬೇಕಾಗಿಯೇ ಇಲ್ಲ. ಸೀತಾದೇವಿಯು ಶ್ರೀರಾಮನ ತೊಡೆಯ ಮೇಲೆ ಕುಳಿತ ರೂಪದಲ್ಲಿರುವುದು ಅಲ್ಲಿನ ವಿಶೇಷ.

ಪಟ್ಟಾಭಿರಾಮದೇವಾಲಯಕ್ಕೆ ಶ್ರೀವೈಷ್ಣವರು ಅರ್ಚಕರು. ವಾರ್ಷಿಕವಾಗಿ ನಡೆಯುವ ರಾಮಾನುಜಾಚಾರ್ಯರ ಸನ್ನಿಧಿಯ ತಿರುನಕ್ಷತ್ರವು (ಜಯಂತಿ) ಅತ್ಯಂತ ವರ್ಣಮಯವಾಗಿ ಸಂಪನ್ನಗೊಳ್ಳುತ್ತದೆ. ಅಲ್ಲಿಂದ ೨೦ ಕಿ.ಮೀ. ದೂರದಲ್ಲಿರುವ ಮೈಸೂರು ಜಿಲ್ಲೆಯ ಸಾಲಿಗ್ರಾಮದ 'ಶ್ರೀಪಾದತೀರ್ಥ'ವೆಂಬ ರಾಮಾನುಜರ ಪಾದಸ್ಪರ್ಶದಿಂದ ಪವಿತ್ರಗೊಂಡ ಕಲ್ಯಾಣಿಯಿಂದ ಅಭಿಷೇಕಕ್ಕಾಗಿ ಪುಣ್ಯತೀರ್ಥವನ್ನು ಕೊಡದಲ್ಲಿ ಹೊತ್ತು ಪಾದಯಾತ್ರೆಯಲ್ಲಿಯೇ ತಂದು, ಆ ದಿನ ಊರಿನೊಳಗೆ ಮೆರವಣಿಗೆ ಮಾಡುತ್ತಾರೆಂಬುದು ಒಂದು ವೈಶಿಷ್ಟ್ಯವೇ ಸರಿ. ಒಬ್ಬರ ತಪ್ಪ ಒಬ್ಬರಂತೆ ಇಬ್ಬರು ಆ ಕುಂಭವನ್ನು ಹೊತ್ತು ತರುತ್ತಾರೆ. ರಾತ್ರಿಯಲ್ಲಿ ನಡೆಯುವ ಉತ್ಸವಕಾಲದಲ್ಲಿ 'ಭಜ ಯತಿರಾಜಂ' ಎಂದು ಹಾಡಿಕೊಂಡು ಎರಡು ಗುಂಪಾಗಿ, ಎದುರು ಬದುರಾಗಿ ನಿಂತು ಸಲ್ಲಿಸುವ ನರ್ತನಸೇವೆ ಅತ್ಯಂತ ರಮಣೀಯವಾಗಿರುತ್ತದೆ.

ಕಾವೇರಿ ನದಿಯೊಳಗೆ ವಹ್ನಿಪುಷ್ಕರಿಣಿ, ಗಾಯತ್ರಿಶಿಲೆ, ಮೇನಕಾಶಿಲೆ, ಗೋಗರ್ಭ ಎಂಬ ಪುಣ್ಯತಾಣಗಳಿವೆ. ಗೋಗರ್ಭವು ಗೋವಿನ ಹೊಟ್ಟೆಯಂತೆ ಇರುವ ನೀರು ತುಂಬಿ ಹರಿಯುವ ಒಂದು ಚಿಕ್ಕ ಗವಿ, ನದಿಯ ಪ್ರವಾಹ ಕಡಿಮೆಯಿದ್ದಾಗ ಭಕ್ತರು ಉಸಿರು ಬಿಗಿಹಿಡಿದು ಆ ಗೋಗರ್ಭದ ಮೂಲಕ ತೂರಿ ಹೊರಕ್ಕೆ ಬರುತ್ತಾರೆ. ಅದು ಸಕಲಪಾಪಗಳನ್ನೂ ಪರಿಹರಿಸುತ್ತದೆ.

**ಗೊರೂರು:** ಹಾಸನ ತಾಲ್ಲೂಕಿಗೇ ಸೇರುವ ಗೊರೂರು ಕ್ಷೇತ್ರವು ಹೇಮಾವತಿನದಿಯ ತೀರದಲ್ಲಿದ್ದು, ಆ ನದಿಯ ಕಂಠಾಭರಣವೆಂಬ ಖ್ಯಾತಿಗೆ ಪಾತ್ರವಾಗಿದೆ. ಪುರಾಣಗಳಲ್ಲಿ ಗೋಕರ್ಣಪುರಿ, ಶತ ರುದ್ರೀಯಪುರಿ ಎಂದೆಲ್ಲಾ ಕರೆಯಲ್ಪಟ್ಟಿದೆ. ನದಿಯತೀರದ ಸೋಪಾನ ಕಟ್ಟೆಯ ಪರಿಸರದಲ್ಲಿ ಗೋಕರ್ಣ ಋಷಿಗಳಿಂದ ಸ್ಥಾಪನೆಗೊಂಡ ಯೋಗಾನರಸಿಂಹಸ್ವಾಮಿಯ ದೇವಾಲಯವಿದೆ. ಚಿಕ್ಕಮಕ್ಕಳಂತೆ ಕಣ್ಣುಮುಚ್ಚಿಕೊಂಡು ಯೋಗನಿದ್ರೆಯಲ್ಲಿ ಕುಳಿತಿರುವ ಆ ಸ್ವಾಮಿಯ ಭಂಗಿಯು ಅಪೂರ್ವವಾಗಿದೆ. ಯೋಗಾನರಸಿಂಹನಲ್ಲದೆ ಗೊರೂರಿನಲ್ಲಿ ತ್ರಿಕೂಟೇಶ್ವರ, ಕೈಲಾಸೇಶ್ವರ ಮತ್ತು ದೊಡ್ಡದಾದ ಪರ ವಾಸುದೇವ ದೇವಾಲಯಗಳಿವೆ. ಪರವಾಸುದೇವ ದೇವಾಲಯದಲ್ಲಿರುವ ಪರವಾಸುದೇವವಿಗ್ರಹ ಮತ್ತು ಚತುರ್ಭುಜಲಕ್ಷ್ಮೀ ದೇವಿಯರ ಮೂರ್ತಿಗಳು ಭಕ್ತರಸವನ್ನು ಉಕ್ಕಿಸುವಂತಿದೆ. ಹೇಮಾವತಿಗೆ ಗೊರೂರಿನಲ್ಲಿ ನಿರ್ಮಿಸಿರುವ ಅಣೆಕಟ್ಟಿನಿಂದಾಗಿ ಅದರ ಘನತೆಯು ಇಮ್ಮಡಿಸಿದೆ.

**ಬೇಲೂರು:** ತಾಲ್ಲೂಕು ಕೇಂದ್ರವಾಗಿರುವ ಬೇಲೂರು, ವೇಲಾಪುರಿಯೆಂದೂ ಕರೆಯಲ್ಪಟ್ಟು ಯಗಚಿ ಎಂಬ ನದಿಯ ದಂಡೆಯಲ್ಲಿದೆ. ಅಲ್ಲಿರುವ ಚೆನ್ನಕೇಶವ ದೇವಾಲಯವು ಆ ಸ್ವಾಮಿಯ ಅಪೂರ್ವವಾದ ಮೂರ್ತಿಯಿಂದಲೂ ಮಿಕ್ಕ ಮೂರ್ತಿಗಳ ಶಿಲ್ಪಕಲಾಪ್ರೌಢಿಮೆಯಿಂದಲೂ ಜಗದ್ವಿಖ್ಯಾತವಾಗಿದೆ. ಜಕಣಾಚಾರಿಯೆಂಬ ಮಹಾಶಿಲ್ಪಿಯ ಹೆಸರು ಆ ದೇವಾಲಯ ನಿರ್ಮಾಣದ ಹಿನ್ನೆಲೆಯಲ್ಲಿದೆ. ''ನಾನು ದೈವೀ ಸ್ಫೂರ್ತಿಯಿಂದ ಈ ದೇವಾಲಯ ನಿರ್ಮಿಸಿದ್ದೇನೆ. ಇಂತಹ ಇನ್ನೊಂದು ದೇವಾಲಯವನ್ನು ಪುನಃ ನಿರ್ಮಿಸಲು ನನ್ನಿಂದ ಸಾಧ್ಯವಿಲ್ಲ'' ಎಂದು ಶಿಲ್ಪಿಯು ಹೇಳಿದನೆಂದು ಮಾತು ದಾಖಲಾಗಿದೆ. ಆ ದೇವಾಲಯದ ಶಿಲ್ಪಮಾಧುರ್ಯದಿಂದ ಮೋಹಿತರಾಗಿ ಡಿ.ವಿ.ಜಿ. ಅವರು ''ಅಂತಃಪುರಗೀತೆ'' ಎಂಬ ಗೀತ ಗುಚ್ಛವನ್ನು ರಚಿಸಿದ್ದಾರೆ.

**ಶ್ರವಣಬೆಳಗೊಳ:** ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರಿದ ಶ್ರವಣಬೆಳಗೊಳವು ಭರತಖಂಡದ ಅತ್ಯಂತ ಶ್ರೇಷ್ಠವಾದ ಜೈನ ತೀರ್ಥವಾಗಿದೆ. ಇಂದ್ರಗಿರಿ ಎಂಬ ಬೆಟ್ಟದ ಮೇಲೆ ೫೮ ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿಯು ಭುವನಮೋಹನ ಶಿಲ್ಪವಾಗಿದೆ. ಬೆಟ್ಟದ ತುದಿಯ ಒಂದು ಕೋಡುಗಲ್ಲನ್ನು, ಅದು ಇದ್ದ ತಾಣದಲ್ಲಿಯೇ ಗೊಮ್ಮಟಮೂರ್ತಿಯನ್ನಾಗಿ ರೂಪಿಸಿರುವ ಕೌಶಲವು ನಮ್ಮನ್ನು ಭ್ರಾಂತಗೊಳಿಸುತ್ತದ. ಬೆಟ್ಟದ ತಪ್ಪಲಿನಲ್ಲಿ ಅತ್ಯಂತ ವಿಶಾಲವಾದ ಸರೋವರವೊಂದಿದೆ. ಅಲ್ಲಿಯೇ ಇರುವ ಚಂದ್ರಗಿರಿ ಎಂಬ ಇನ್ನೊಂದು ಬೆಟ್ಟದ ಮೇಲೆ ಮತ್ತು ಊರಿನ ವಿವಿಧ ಭಾಗಗಳಲ್ಲಿ ಅನೇಕ ತೀರ್ಥಂಕರ ಬಸದಿಗಳಿವೆ. ಭಟ್ಟಾರಕ ಪರಂಪರೆಯ ಒಂದು ಜೈನಮಠವೂ ಇದೆ. ೧೨ ವರ್ಷಗಳಿಗೊಮ್ಮೆ ಗೊಮ್ಮಟನಿಗೆ ನೆರವೇರುವ 'ಮಹಾಮಸ್ತಕಾಭಿಷೇಕ'ಕ್ಕೆ ವಿಶ್ವದ ವಿವಿಧೆಡೆಗಳಿಂದ ಲಕ್ಷಾಂತರ ಭಕ್ತರು ಬರುತ್ತಾರೆ.

## ಶಿವಮೊಗ್ಗ

**ತೀರ್ಥಹಳ್ಳಿ:** ಚಿಕ್ಕಮಗಳೂರು ಜಿಲ್ಲೆಯ ವಲಯಕ್ಕೆ ಸೇರುವ ಪಶ್ಚಿಮಘಟ್ಟಗಳ ಶ್ರೇಣಿಯ ವರಾಹಪರ್ವತದ ಗಂಗಾಮೂಲದಲ್ಲಿ ತುಂಗಾ, ಭದ್ರಾ ಮತ್ತು ನೇತ್ರಾವತಿ ಎಂಬ ಮೂರು ನದಿಗಳು ಹುಟ್ಟಿ ವಿವಿಧ ದಿಕ್ಕುಗಳನ್ನು ಹಿಡಿದು ಹರಿದುಹೋಗುತ್ತವೆ. ತಾಲ್ಲೂಕು ಕೇಂದ್ರವಾಗಿರುವ 'ತೀರ್ಥರಾಜಪುರ'ವೆಂದು ಖ್ಯಾತಿವೆತ್ತ ತೀರ್ಥಹಳ್ಳಿಯು ತುಂಗಾನದಿಯ ದಂಡೆಯ ಮೇಲಿದ್ದು ಪ್ರಕೃತಿ ಸೌಂದರ್ಯದ ತವರ್ಮನೆಯಾಗಿದೆ. ಪರಶುರಾಮನು ತನ್ನ ತಾಯಿ ರೇಣುಕಾದೇವಿಯನ್ನು ಕಡಿದುಹಾಕಿದ ರಕ್ತಸಿಕ್ತವಾದ ಕೊಡಲಿಯನ್ನು ಎಲ್ಲೆಲ್ಲಿಯೋ ತೊಳೆದರೂ ರಕ್ತದ ಕಲೆಯು ಮಾಯಲಿಲ್ಲ. ಕೊನೆಗೆ ತೀರ್ಥಹಳ್ಳಿಯ ತುಂಗಾನದಿಯ ನಡುವಣ 'ರಾಮಕುಂಡ'ವೆಂಬಲ್ಲಿ ತೊಳೆದಾಗ ಪೂರ್ಣವಾಗಿ ಶುದ್ಧವಾಯಿತು. ಮತ್ತು ಅವನ ಮಾತೃಹತ್ಯಾದೋಷವೂ ಕಳೆಯಿತು. ಎಳ್ಳಮವಾಸ್ಯೆ ಎಂದು ಕರೆಯುವ ದಿನದಂದು ಅಲ್ಲಿ ನಡೆಯುವ ತೀರ್ಥಸ್ನಾನ ಸಹಿತವಾದ ಜಾತ್ರೆಯು ಸಹಸ್ರಾರು ಸದ್ಭಕ್ತರನ್ನು ಸೆಳೆದುಕೊಳ್ಳುತ್ತದೆ.

**ಸಿಗಂದೂರು:** ಸಾಗರ ತಾಲ್ಲೂಕಿಗೆ ಸೇರುವ ಸಿಗಂದೂರು ಕ್ಷೇತ್ರವು ಅಲ್ಲಿಂದ ಸುಮಾರು ೩೦ ಕಿ.ಮೀ.ಗಳ ದೂರದಲ್ಲಿ, ಸಾಗರದಂತೆ ಹಬ್ಬಿರುವ ಹಿನ್ನೀರಿನ ದಡದಲ್ಲಿ ನೆಲೆಗೊಂಡಿದೆ. ಅಲ್ಲಿರುವ ಸಿಗಂದೂರೇಶ್ವರಿ ಅಥವಾ ಚೌಡೇಶ್ವರಿಯೆಂಬ ಶಕ್ತಿದೇವತೆಯ ದರ್ಶನಕ್ಕೆ ಸ್ಟೀಮರಿನಲ್ಲಿ ಸಾಗುವುದೇ ಮೈಮನಗಳನ್ನು ಪುಳಕಗೊಳಿಸುವ ಒಂದು ಅಪೂರ್ವವಾದ ಅನುಭವ. ಭಕ್ತಾಭೀಷ್ಟಗಳನ್ನೆಲ್ಲ ಅಲ್ಲಿಂದಲ್ಲಿಗೇ ಈಡೇರಿಸಿ ಕೊಡುವ ಆ ಮಾತೆಯ ಸನ್ನಿಧಿಯಲ್ಲಿ ನಿತ್ಯವೂ ಜಾತ್ರೆಯೇ ನೆರೆಯುತ್ತದೆ. ಆಕೆಯ ಪ್ರತಾಪ ಅದೆಷ್ಟಿದೆಯೆಂದರೆ, ಅವಳ ಸನ್ನಿಧಿಯಿಂದ ''ಇದು ಸಿಗಂದೂರೇಶ್ವರಿಯ ಕೃಪೆಗೊಳಗಾಗಿದೆ'' ಎಂಬ ಫಲಕವನ್ನು ತಂದು ಹೊಲಗದ್ದೆ ತೋಟಮನೆಗಳಿಗೆ ಹಾಕಿದರೆ ಸಾಕು, ಕಳ್ಳಕಾರರು ಅತ್ತ ತಲೆಹಾಕುವುದೂ ಇಲ್ಲ.

**ವರದಪುರ:** ಸಾಗರ ತಾಲ್ಲೂಕಿನ ಯಡಜಿಗಳೆಮನೆ ಎಂಬ ಗ್ರಾಮದ ವ್ಯಾಪ್ತಿಗೆ ಬರುವ, ಸಾಗರದಿಂದ ೬ ಕಿ.ಮೀ.ಗಳ ದೂರದಲ್ಲಿರುವ ವರದಪುರವು ನಿಸರ್ಗರಮಣೀಯವಾದ ಪುಣ್ಯತೀರ್ಥವಾಗಿದೆ. ಪುರಾತನವಾದ ದುರ್ಗಾದೇವಿಯ ದೇವಾಲಯವಿದೆ. ಗಿರಿಕಂದರಗಳಿಂದ ಹುಟ್ಟಿಬರುವ ಶಾಶ್ವತ ಬುಗ್ಗೆಯೊಂದು ಆ ಕ್ಷೇತ್ರವನ್ನು ತೀರ್ಥವಾಗಿಸಿದೆ. ಅದು ಹಿಂದೆ ವ್ಯಾಸಮುನಿಗಳ, ಅಗಸ್ತ್ಯ ಮಹರ್ಷಿಗಳ ತಪೋಭೂಮಿಯಾಗಿದ್ದು ವ್ಯಾಸಗುಹೆಯೊಂದಿದೆ. ಆಧುನಿಕ ಯುಗದಲ್ಲಿ ಶ್ರೀಧರಸ್ವಾಮಿಗಳೆಂಬ (೧೯೫೦) ವಿಭೂತಿ ಪುರುಷರು ಅಲ್ಲಿ ನೆಲೆಸಿದುದೇ ಕಾರಣವಾಗಿ ಅದು ಹೆಚ್ಚಿನ ಅಭಿವೃದ್ಧಿಗೆ ಬಂದಿದೆ. ಸ್ವಾಮಿಗಳ ಸನ್ನಿಧಿಯಿಂದೊಡಗೂಡಿದ ಸುಸಜ್ಜಿತವಾದ ಶ್ರೀಧರಾಶ್ರಮವು ಅಲ್ಲಿ ರೂಪುತಳೆದಿದೆ. ವೇದಪಾಠಶಾಲೆ, ಗೋಶಾಲೆ, ಭಕ್ತನಿವಾಸಗಳೆಲ್ಲವೂ ಇವೆ.

**ಕೂಡ್ಲಿ:** ಶಿವಮೊಗ್ಗ ತಾಲ್ಲೂಕಿಗೆ ಸೇರುವ ಸುಕ್ಷೇತ್ರ ಕೂಡ್ಲಿಯು 'ದಕ್ಷಿಣದ ಪ್ರಯಾಗ'ವೆಂದೇ ಕೀರ್ತಿತವಾಗಿರುವ ಶಿವಮೊಗ್ಗೆಯಿಂದ ೧೫ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ತುಂಗಾ ಮತ್ತು ಭದ್ರಾ ನದಿಗಳು ಕೂಡುವ ಸ್ಥಾನವಾಗಿ ಕೂಡ್ಲಿ ಎಂಬುದು ಸಾರ್ಥಕ ನಾಮವಾಗಿದೆ. ಶಾಂಕರಪರಂಪರೆಯ 'ಕೂಡ್ಲಿ ಶೃಂಗೇರಿ ಮಠ' ಎಂದ ಖ್ಯಾತವಾಗಿರುವ ಮಠವಿದ್ದು, ಯತಿಪರಂಪರೆಯೊಂದು ನಡೆದು ಬಂದಿದೆ. ಮಠದಲ್ಲಿರುವ ಚಂದ್ರಮೌಳೇಶ್ವರ, ಶಾರದಾಂಬಾ

ಮತ್ತು ಶಂಕರಾಚಾರ್ಯರ ಸನ್ನಿಧಿಗಳು ಭಕ್ತರ ಶ್ರದ್ಧಾಕೇಂದ್ರಗಳಾಗಿವೆ. ಎಲ್ಲೆಡೆ ಶಾರದಾಂಬೆಯು ಕುಳಿತ ಭಂಗಿಯಲ್ಲಿದ್ದರೆ, ಇಲ್ಲಿ ಮಾತ್ರ ನಿಂತ ಭಂಗಿಯಲ್ಲಿರುವುದು ಅಪೂರ್ವವೆಂದು ಹೇಳಬಹುದು. ಮಧ್ವಪರಂಪರೆಯ ಅಕ್ಷೋಭ್ಯತೀರ್ಥ ಮಠ, ರಾಮೇಶ್ವರ ಮತ್ತು ಚಿಂತಾಮಣಿ ನರಸಿಂಹದೇವಾಲಯಗಳು ಕೂಡ್ಲಿಯ ಇನ್ನಿತರ ಭಕ್ತಿ ಕೇಂದ್ರಗಳಾಗಿವೆ.

**ಚಂದ್ರಗುತ್ತಿ :** ಚಂದ್ರಗುತ್ತಿಯು ಸೊರಬ ತಾಲ್ಲೂಕಿಗೆ ಸೇರಿದ್ದು. ಅಲ್ಲಿಂದ ೧೬ ಕಿ.ಮೀ.ಗಳ ದೂರದಲ್ಲಿ ವರದಾನದಿಯ ದಂಡೆಯಲ್ಲಿರುವ ಅಪಾರ ಸಂಖ್ಯೆಯಲ್ಲಿ ಭಕ್ತರನ್ನು ಪಡೆದಿರುವ ಪುಣ್ಯಕ್ಷೇತ್ರವಾಗಿದೆ. ಆ ಕ್ಷೇತ್ರ ಬೆಟ್ಟವೊಂದರ ಬುಡದಲ್ಲಿದೆ. ರೇಣುಕಾದೇವಿಯ ಗುಹಾಂತರ ದೇವಾಲಯವೇ ಅಲ್ಲಿನ ಕೇಂದ್ರಬಿಂದುವಾಗಿದೆ. ತನ್ನ ತಲೆಯನ್ನು ಕಡಿಯಲು ಬಂದ ಪರಶುರಾಮನಿಂದ ತಪ್ಪಿಸಿಕೊಳ್ಳುವ ರೇಣುಕೆಯು ಈ ಗುಹೆಯಲ್ಲಿ ಅವಿತುಕೊಂಡಿದ್ದಳು. ಆದರೂ ಶಿಕ್ಷೆ ತಪ್ಪಲಿಲ್ಲ. ಸೌದೆಭವಾನಿತೀರ್ಥ, ಶಂಕರಲಿಂಗತೀರ್ಥ, ಮಾತಂಗಿ ಗುಡಿ ಮೊದಲಾದವು ಅಲ್ಲಿವೆ. ಆಗಮೋಕ್ತ ವಿಧಿಯಲ್ಲಿ ರೇಣುಕಾಂಬೆಯ ಪೂಜೆ ಮತ್ತು ರಥೋತ್ಸವಾದಿಗಳು ಕಿಕ್ಕಿರಿದ ಜನಸಂದಣಿಯ ನಡುವೆ ಜರುಗುತ್ತವೆ. ನವರಾತ್ರ್ಯೋತ್ಸವವು ಅಲ್ಲಿನ ಅದ್ದೂರಿಯ ಪರ್ವಗಳಲ್ಲೊಂದು.

**ಹೊಂಬುಜ:** ಹೊಂಬುಜ ಅಥವಾ ಹುಂಚವು ಹೊಸನಗರ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ದೂರದಲ್ಲಿರುವ ಸುಪ್ರಸಿದ್ಧ ಜೈನತೀರ್ಥವಾಗಿದ್ದು ಯಕ್ಷದೇವತೆ ಪದ್ಮಾವತಿದೇವಿಯ ಕೇಂದ್ರವಾಗಿದೆ. ಆಕೆಯ ವಾರ್ಷಿಕ ರಥೋತ್ಸವವು ಸಮೃದ್ಧಿಯಿಂದ ಸಾಗುತ್ತದೆ. ಪಂಚಕೂಟಬಸದಿ, ಪಾರ್ಶ್ವನಾಥಬಸದಿ, ಚಂದ್ರನಾಥಬಸದಿಗಳು ಅತ್ಯಂತ ಆಕರ್ಷಕ ಸ್ಥಾನಗಳಾಗಿವೆ. ಭಟ್ಟಾರಕ ಪರಂಪರೆಯ ಒಂದು ಜೈನಮಠವೂ ಅಲ್ಲಿದೆ.

**ಅಂಬುತೀರ್ಥ:** ತೀರ್ಥಹಳ್ಳಿ ತಾಲ್ಲೂಕಿಗೆ ಸೇರುವ ಅಂಬುತೀರ್ಥವು ಅಲ್ಲಿಂದ ೧೮ ಕಿ.ಮೀ.ಗಳ ದೂರದ ನಿಸರ್ಗದ ಮಡಿಲಿನಲ್ಲಿದೆ. ಅಂಬುತೀರ್ಥವು ಶರಾವತಿ ನದಿಯ ಉಗಮಸ್ಥಾನವಾಗಿದೆ. ಸೀತಾನ್ವೇಷಣೆಯ ಕಾಲದಲ್ಲಿ ಶ್ರೀರಾಮನು ಆ ಮಾರ್ಗವಾಗಿ ಬರುತ್ತಾ, ಬಾಯಾರಿ ಬೆಂಡಾಗಿ ಎಲ್ಲೂ ನೀರು ಕಾಣದೆ, ತನ್ನ ಬಾಣಾಘಾತದಿಂದ ಒಂದು ತೀರ್ಥವನ್ನು ಸೃಷ್ಟಿಸಿ, ತೃಷೆಯನ್ನು ನೀಗಿಸಿಕೊಂಡನು. ಆ ಪರಿಸರವನ್ನು ಮೆಚ್ಚಿ ಅಲ್ಲಿಯೇ ಒಂದು ಲಿಂಗವನ್ನು ಸ್ಥಾಪಿಸಿ ಪೂಜಿಸಿ, ಅದು ರಾಮೇಶ್ವರ ಕ್ಷೇತ್ರವಾಯಿತು. ಅಲ್ಲಿರುವ ರಾಮೇಶ್ವರ ದೇವಾಲಯದ ಆಶ್ರಯದಲ್ಲಿ ನಡೆಯುವ 'ಶ್ರೀರಾಮ ವಸಂತ ನವರಾತ್ರ'ಯ ವೈಭವವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಆಸ್ತಿಕರು ಆಗಮಿಸುತ್ತಾರೆ.

## ಚಿಕ್ಕಮಗಳೂರು

**ಶೃಂಗೇರಿ:** ತುಂಗಾನದಿ ತೀರದಲ್ಲಿರುವ, ತಾಲ್ಲೂಕು ಕೇಂದ್ರವಾದ, ಇಡೀ ಭರತಖಂಡಕ್ಕೇ ಮುಕುಟಪ್ರಾಯವಾದ ತೀರ್ಥಕ್ಷೇತ್ರವಾಗಿದೆ ಶೃಂಗೇರಿ. ಅದು ವಿಭಾಂಡಕ ಮುನಿಗಳ ಮತ್ತು ಅವರ ಸುಪುತ್ರರಾದ ಋಷ್ಯಶೃಂಗಮುನಿಗಳ ತಪೋಭೂಮಿಯಾಗಿದೆ. ಋಷ್ಯಶೃಂಗರಿಂದಾಗಿಯೇ ಅದು ಶೃಂಗಪುರ, ಶೃಂಗೇರಿ ಎಂದಾ



ವಿದ್ಯಾಶಂಕರ ದೇವಾಲಯ, ಶೃಂಗೇರಿ

ಗಿದೆ. ಹಿಂದೂಧರ್ಮದ ಪುನರುತ್ಥಾನಕ್ಕಾಗಿ ಶಂಕರಾಚಾರ್ಯರು (೭೮೮-೮೨೦) ಸ್ಥಾಪಿಸಿದ ಚತುರಾಮ್ನಾಯಪೀಠಗಳಲ್ಲಿ ಶೃಂಗೇರಿಯ 'ಶಾರದಾಪೀಠ'ವೇ ಮೊದಲನೆಯದು. ಇದುವರೆಗೆ ೩೫ ಯತಿವರ್ಯರು ಜಗದ್ಗುರು ಪೀಠವನ್ನಲಂಕರಿಸಿದ್ದಾರೆ. ಪೂರ್ವಕ್ಕೆ ಕಾಲಭೈರವ, ಪಶ್ಚಿಮಕ್ಕೆ ಆಂಜನೇಯ, ಉತ್ತರಕ್ಕೆ ಮಹಾಕಾಳಿ ಮತ್ತು ದಕ್ಷಿಣಕ್ಕೆ ದುರ್ಗಾದೇವಿಯವರು ಸ್ಥಾಪನೆಗೊಂಡಿದ್ದು ಅವರು ಕ್ಷೇತ್ರವನ್ನು ಸಂರಕ್ಷಿಸುವವರಾಗಿದ್ದಾರೆ.

ಶೃಂಗೇರಿಯಲ್ಲಿ ಶಾರದಾಂಬ-ಚಂದ್ರಮೌಳೇಶ್ವರರ ಸನ್ನಿಧಾನವೇ ಅತ್ಯಂತ ಪ್ರಮುಖವಾದುದು. ಶ್ರೀಚಕ್ರಯಂತ್ರದ ಮೇಲೆ ಸ್ಥಾಪನೆಗೊಂಡಿರುವ ಶಾರದಾಂಬೆಯ ಪಂಚಲೋಹದ ಮೂರ್ತಿಯು ಮನಮೋಹಕವಾಗಿದೆ. ಶಿಲ್ಪಜಗತ್ತನ್ನೇ ವಿಸ್ಮಯಗೊಳಿಸುವ ವಿದ್ಯಾಶಂಕರ ದೇವಾಲಯದ ವೈಭವವನ್ನು ಹೇಳತೀರದು. ಜಗದ್ಗುರು ಪರಂಪರೆಯ ವಿದ್ಯಾತೀರ್ಥಸ್ವಾಮಿಗಳ (೧೩೦೦) ಸಜೀವಸಮಾಧಿಯು ದೇವಾಲಯವಾಗಿ ವಿಸ್ತಾರಗೊಂಡಿದೆ. ವಿದ್ಯಾಶಂಕರ ಎಂಬುದು ಅಲ್ಲಿ ಸ್ಥಾಪನೆಗೊಂಡಿರುವ ಲಿಂಗಮೂರ್ತಿಯಾಗಿದೆ. ಆ ಗುಡಿಯಲ್ಲಿ ಬಗೆಬಗೆಯ ೧೦೪ ವಿಗ್ರಹಗಳಿವೆ. ಖಗೋಲ ಶಾಸ್ತ್ರೀಯ ಚಮತ್ಕಾರದಿಂದ ಕೂಡಿದ ಮೀನ, ಮೇಷ, ಮುಂತಾದ ೧೨ ರಾಶಿಕಂಬಗಳು ಅಲ್ಲಿನ ನವರಂಗದಲ್ಲಿವೆ. ಸೂರ್ಯನು ಸಂಕ್ರಮಣದಂದು ಯಾವ ರಾಶಿಯನ್ನು ಪ್ರವೇಶಿಸುತ್ತಾನೊ ಆ ರಾಶಿ ಕಂಬದ ಮೇಲೆ ಮಾಸಪರ್ಯಂತ ಸೂರ್ಯೋದಯದ ಬಿಸಿಲು ಬೀಳುವ ಕೌಶಲವನ್ನು ಸ್ಥಪತಿಗಳು ಅಲ್ಲಿ ಮೂಡಿಸಿದ್ದಾರೆ. ಈ ದೇವಾಲಯಗಳಲ್ಲದೆ ಶಕ್ತಿಗಣಪತಿ, ರಾಮದೇವರು, ಬ್ರಹ್ಮದೇವರು, ಪ್ರವಚನ ಮಂದಿರ, ಜನಾರ್ದನ ದೇವಾಲಯ, ಶಂಕರಾಚಾರ್ಯ ದೇವಾಲಯ ಮತ್ತು ಹರಿಹರದೇವಾಲಯಗಳೂ ಅಲ್ಲಿವೆ. ಪೀಠದ ಆದಿಗುರು ಸುರೇಶ್ವರಾಚಾರ್ಯರ ಒಂದು ಆಲಯವೂ ಇದೆ.

ಪಟ್ಟಣದ ಮಧ್ಯದಲ್ಲಿಯೇ ಇರುವ ಮಲ್ಲಪ್ಪನ ಬೆಟ್ಟದ ಮೇಲೆ ಮಲಹಾನಿಕರೇಶ್ವರನೆಂಬ ಶಿವನ ದೇವಾಲಯವಿದೆ. ಮಳೆಯ ಕೊರತೆಯಾದರೆ ಅಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿದರೆ ಚೆನ್ನಾಗಿ ಮಳೆಯಾಗುತ್ತದೆ. ಅಲ್ಲಿ 'ಕಂಬದ ಗಣಪತಿ'ಯಿದ್ದಾನೆ. ಮಗ್ಗುಲಿಗೊಂದು ಭವಾನಿಯ ಆಲಯವಿದೆ. ಸಂಸ್ಕೃತ ಪಾಠಶಾಲೆ, ಯೋಗಶಾಲೆ, ಗೋಶಾಲೆ, ಪೂರ್ವಗುರುಗಳ ಸಮಾಧಿಗಳು, ಪುಸ್ತಕ ಭಂಡಾರ

ಗಳೆಲ್ಲವೂ ಅಲ್ಲಿವೆ. ಭಕ್ತಿನಿವಾಸಗಳಿದ್ದು, ನಿತ್ಯಸಂತರ್ಪಣೆ ಜರಗುತ್ತದೆ. 'ಗಂಗಾಸ್ನಾನ, ತುಂಗಾಪಾನ' ಎಂಬ ನುಡಿಯಂತೆ ತುಂಗೆಯ ನೀರು ಸ್ವಚ್ಛವೂ, ರುಚಿಕರವೂ ಆಗಿರುತ್ತದೆ.

ತುಂಗಾನದಿಯ ಇನ್ನೊಂದು ತೀರದಲ್ಲಿ 'ನರಸಿಂಹವನ' ವಿದ್ದು ಅಲ್ಲಿ ಜಗದ್ಗುರುಗಳ ಗುರುನಿವಾಸವಿದೆ. ಆ ವಲಯದಲ್ಲಿ ನರಸಿಂಹ ಭಾರತಿಗಳ, ಚಂದ್ರಶೇಖರಭಾರತಿಗಳ ಮತ್ತು ಅಭಿನವ ವಿದ್ಯಾತೀರ್ಥಸ್ವಾಮಿಗಳ ಪರಿಷ್ಕಾರವಾದ ಸಮಾಧಿ ಮಂದಿರಗಳಿವೆ. ನೂತನ ಶೈಲಿಯ ಅಷ್ಟಕೋನಾಕೃತಿಯ ವ್ಯಾಸಮಹರ್ಷಿಗಳ ದೇವಾಲಯವೊಂದು ಹೊಸದಾಗಿ (೨೦೦೭) ನಿರ್ಮಾಣಗೊಂಡಿದೆ. ಗುರು ಮಂದಿರದಲ್ಲಿ ಭಕ್ತರೊಬ್ಬರು ಸಮರ್ಪಿಸಿರುವ (೨೦೦೬) ಸ್ವರ ಸಾಮ್ರಾಜ್ಯದ ಸಾರವನ್ನೆಲ್ಲಾ ತಿಳಿಯಹೇಳುವ, ವೀಣಾಪಾಣಿ ಶಾರದಾಂಬೆಗೆ ಪ್ರಿಯವಾದ 'ಸಾರ್ವಭೌಮವೀಣೆ' ಅದ್ಭುತವಾಗಿದೆ.

'ಕರ್ನಾಟಕಸಿಂಹಾಸನ ಸ್ಥಾಪನಾಚಾರ್ಯ'ರೆಂದು ಖ್ಯಾತರಾದ, ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ವಿದ್ಯಾರಣ್ಯಮುನಿಗಳು (೧೩೮೦) ಶೃಂಗೇರಿ ಜಗದ್ಗುರು ಪೀಠವನ್ನಲಂಕರಿಸಿದ್ದ ಮಹಾತ್ಮರು. ಅದೇ ಕಾರಣವಾಗಿ ನಮ್ಮ ನಾಡಿನ ಹಲವು ರಾಜಮನೆತನಗಳು ಶೃಂಗೇರಿಗೆ ಶರಣಾಗಿವೆ. ಆ ಸದ್ಗುರುಗಳನ್ನು ನೆನಪಿಸುವ ವಿದ್ಯಾರಣ್ಯಪುರವೆಂಬ ಊರೊಂದು ಶೃಂಗೇರಿಯ ಮಗ್ಗುಲಿನಲ್ಲಿದೆ. ಅಲ್ಲಿ ತುಂಗಾನದಿಯು ಪಶ್ಚಿಮವಾಹಿನಿಯಾಗಿ ಹರಿದು ಹೆಚ್ಚಿನ ಪಾವಿತ್ರ್ಯವನ್ನು ತುಂಬಿಸಿದೆ. 'ವಸಿಷ್ಠಾಶ್ರಮ'ವೆಂದು ಕರೆಯುವ ಅಲ್ಲಿನ ಒಂದು ತಾಣದಲ್ಲಿ ಚತುರ್ವಿದ್ಯೇಶ್ವರನ ಸನ್ನಿಧಿಯಿದೆ. ಚೌಕಾಕಾರದ ಆ ಲಿಂಗದ ನಾಲ್ಕೂ ಮುಖಗಳಲ್ಲಿ ಬೇರೆ ಬೇರೆ ದೇವರುಗಳನ್ನು ಕಡೆಯಲಾಗಿದೆ. ಕಂಬದ ತುದಿಯಲ್ಲಿ ಪಾಣಿಪೀಠಸಹಿತವಾದ ಲಿಂಗವನ್ನು ಕಡೆದಿದ್ದಾರೆ. ಈ ಪರಿಯ ಅಪೂರ್ವ ಲಿಂಗವು ಮತ್ತೆಲ್ಲಿಯೂ ಇಲ್ಲ.

ಶೃಂಗೇರಿಯು ಉತ್ಸವಗಳ, ರಥೋತ್ಸವಗಳ, ಜಯಂತಿಗಳ, ಪರ್ವಗಳ ಬೀಡೂ ಆಗಿದೆ. ಆ ಪೈಕಿ ಶರನ್ನವರಾತ್ರಿ ಮಹೋತ್ಸವವು ಅತ್ಯಂತ ಉತ್ತುಂಗವಾದ ಪರ್ವ. ಆಗ ಶಾರದಾಂಬೆಯ ಕಣ್ಣು ಕೋರೈಸುವ ಅಲಂಕಾರಗಳಿಂದ ಮೆರೆಯುತ್ತಾಳೆ ಮತ್ತು ಜಗದ್ಗುರುಗಳು ಹಿಂದಿನ ರಾಜಮಹಾರಾಜರುಗಳು ಕೋರಿಕೊಂಡಿದ್ದ ಬಗೆಯಲ್ಲಿ ಅಡ್ಡಪಲ್ಲಕ್ಕಿ ಉತ್ಸವಾರೂಢರಾಗುತ್ತಾರೆ. ಕಿರೀಟವೇ ಮೊದಲಾದ ದಿವ್ಯಾಭರಣಭೂಷಿತರಾಗಿ, ರಾಜಪೋಷಾಕಿನಲ್ಲಿ ದರ್ಬಾರಿನಲ್ಲಿ ಸಿಂಹಾಸನಾರೂಢರಾಗಿ ಆಸೀನರಾಗುತ್ತಾರೆ. ಬದುಕಿನಲ್ಲಿ ಒಮ್ಮೆಯಾದರೂ ಶೃಂಗೇರಿಯ ದರ್ಶನ ಮಾಡಲೇಬೇಕು! ಭರತಖಂಡದಾದ್ಯಂತ ೩೦೦ಕ್ಕೂ ಹೆಚ್ಚು ಶೃಂಗೇರಿಯ ಶಾಖಾಮಠಗಳಿವೆ.

**ಬಾಬಾಬುಡನ್‌ಗಿರಿ:** ರಾಮಾಯಣ ಕಾಲದ ಚಂದ್ರದ್ರೋಣ ಪರ್ವತವೆಂದು ಖ್ಯಾತವಾಗಿರುವ ಬಾಬಾಬುಡನ್‌ಗಿರಿಯು ಚಿಕ್ಕಮಗಳೂರು ತಾಲ್ಲೂಕಿಗೆ ಸೇರುವ ಸಮುನ್ನತ ಪರ್ವತವಾಗಿದೆ. ಅದರಲ್ಲಿರುವ ಗುಹಾಲಯದಲ್ಲಿ ದತ್ತಾತ್ರೇಯ ಪೀಠವೂ, ಒಂದು ತೀರ್ಥವೂ ಇವೆ. ಆರೈಕೆಯ ಕೊರತೆಯಿಂದಾಗಿ ತರುವಾಯದಲ್ಲಿ ಮುಸ್ಲಿಮರೂ ಹೊಕ್ಕು 'ಇದು ಬಾಬಾಬುಡನ್ ಎಂಬ ಸಂತನ ದರ್ಗಾ' ಎಂದು ಹಿಂದೂ ಪದ್ಧತಿಯ ಕಾಯಿಕರ್ಪೂರಗಳಿಂದಲೇ ಪೂಜಿಸುತ್ತಿದ್ದಾರೆ. ದತ್ತಜಯಂತಿಯೂ ನಡೆಯುತ್ತದೆ, ಉರೂಸೂ ನಡೆಯುತ್ತಿದೆ. ೧೨ ವರ್ಷಗಳಿಗೊಮ್ಮೆ ಆ ಪರ್ವತದಲ್ಲಿ ಅರಳುವ 'ನೀಲಕುರುಂಜಿ'ಯು ಪುಷ್ಪಪ್ರೇಮಿಗಳ ಮನವನ್ನು ಸೂರೆಗೊಳ್ಳುತ್ತದೆ.

**ಕಳಸ:** ಮೂಡಿಗೆರೆ ತಾಲ್ಲೂಕಿಗೆ ಸೇರುವ ಕಳಸವು ಅಲ್ಲಿಂದ ೮ ಕಿ.ಮೀ. ದೂರದಲ್ಲಿ ಭದ್ರಾನದಿಯ ತೀರದಲ್ಲಿದೆ. ಆ ಕ್ಷೇತ್ರವು ಅಗಸ್ತ್ಯ ಮುನಿಗಳ ತಪೋಭೂಮಿಯೆಂದು ಸ್ಕಂದ ಪುರಾಣದಲ್ಲಿ ವರ್ಣಿತವಾಗಿದೆ. ಗುಡ್ಡದಮೇಲೆ ದೊಡ್ಡದಾದ ಕಳಸೇಶ್ವರ ದೇವಾಲಯವಿದ್ದ, ಗರ್ಭಗೃಹದಲ್ಲಿ ೯ ಅಡಿ ಎತ್ತರದ ಬೃಹದಾಕಾರದ ಲಿಂಗವಿದೆ. ಶಕ್ತಿದೇವತೆ ''ಸರ್ವಾಂಗಸುಂದರಿದೇವಿ''ಯ ಪ್ರತ್ಯೇಕ ಸನ್ನಿಧಾನವಿದೆ. ಅಲ್ಲಿನ ಭದ್ರಾನದಿಯಲ್ಲಿ ಪವಿತ್ರವಾದ ಪಂಚತೀರ್ಥಗಳಿವೆ. ಮಹಾರಥೋತ್ಸವ ಮತ್ತು ಗಿರಿಜಾಕಲ್ಯಾಣೋತ್ಸವಗಳು ಅಲ್ಲಿನ ಆಕರ್ಷಕ ಪರ್ವಗಳಾಗಿವೆ.

**ಹೊರನಾಡು:** ಮೂಡಿಗೆರೆ ತಾಲ್ಲೂಕಿಗೇ ಸೇರುವ ಹೊರನಾಡಿಗೆ ಕಳಸದ ಮಾರ್ಗವಾಗಿಯೇ ಅಲ್ಲಿಂದ ೫ ಕಿ.ಮೀ. ಸಾಗಬೇಕು. ಪ್ರಕೃತಿಮಾತೆಯ ಬೆಟ್ಟಗುಡ್ಡಗಳ ನಡುವಣ ನಯನಾಭಿರಾಮವಾದ ದೇವಿಯ ವಿಗ್ರಹವಂತೂ ಸರ್ವಾಂಗಸುಂದರವಾಗಿದ್ದು ಭಕ್ತಿಭಾವವನ್ನು ಉಕ್ಕಿಸುವಂತಿದೆ. ಹಲವು ಬುಗ್ಗೆಗಳ ಜಲವನ್ನೆಲ್ಲಾ ಒಗ್ಗೂಡಿಸಿಕೊಂಡು ಸ್ವಚ್ಛವಾದ ಸ್ನಾನಘಟ್ಟವನ್ನು ನಿರ್ಮಿಸಿದ್ದಾರೆ. ಭದ್ರಾನದಿಯೇ ಅಲ್ಲಿಗೂ ಪ್ರಧಾನವಾದ ತೀರ್ಥ. ರಥೋತ್ಸವ, ಲಕ್ಷದೀಪೋತ್ಸವಗಳು ಚೆನ್ನಾಗಿ ನೆರವೇರುತ್ತವೆ. ಇನ್ನೆಲ್ಲಿಯೂ ಲಭ್ಯವಾಗದ ಭೋಜನೋಪಾಹಾರಗಳ ರಾಜಾತಿಥ್ಯವನ್ನು ಸವಿಯಬೇಕಾದರೆ ಅನ್ನಪೂರ್ಣೆಗೇ ಅಡ್ಡಬೀಳಬೇಕು.

**ಬಾಳೆಹೊನ್ನೂರು:** ನರಸಿಂಹರಾಜಪುರ ತಾಲ್ಲೂಕಿನ ಭದ್ರಾನದಿಯ ತೀರದಲ್ಲಿರುವ ಬಾಳೆಹೊನ್ನೂರಿಗೆ ಸಮೀಪದ ಬಾಳೆಹಳ್ಳಿ ಎಂಬುದು ಪುಣ್ಯಕ್ಷೇತ್ರವಾಗಿದೆ. ವೀರಶೈವ ಪಂಚಾಚಾರ್ಯ ಪರಂಪರೆಯ ''ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಠ'' ವಿದೆ. ಮಠಕ್ಕೆ ಸಂಬಂಧಿಸಿದಂತೆ ವೀರಭದ್ರ-ಭದ್ರಕಾಳಿಯರ ದೇವಾಲಯವಿದೆ. ಮಠದ ಆದಿಗುರುಗಳದ ರೇಣುಕಾಚಾರ್ಯರ ಸನ್ನಿಧಾನವಿದೆ.

**ನರಸಿಂಹರಾಜಪುರ:** ತಾಲ್ಲೂಕು ಕೇಂದ್ರವಾದ ಈ ಪಟ್ಟಣದ 'ಸಿಂಹನಗದ್ದೆ' ಎಂಬುದು ಜೈನರ ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಜೈನಮಠವಿದೆ. ಜ್ವಾಲಾಮಾಲಿನಿಯಕ್ಷಿಯ ಕ್ಷೇತ್ರವಾಗಿದೆ. ಶಾಂತಿನಾಥ ಮತ್ತು ಚಂದ್ರನಾಥ ತೀರ್ಥಂಕರರ ಬಸದಿಗಳಿವೆ.

**ಕಲ್ಲತ್ತಿಪುರ:** ತರೀಕೆರೆ ತಾಲ್ಲೂಕಿಗೆ ಸೇರುವ, ಅಲ್ಲಿಂದ ೨೦ ಕಿ.ಮೀ. ದೂರದ ಕಲ್ಲತ್ತಿಪುರದ ಬಳಿ ಕಲ್ಲತ್ತಿಗಿರಿಯೆಂಬ ಸಮುನ್ನತ ಪರ್ವತವಿದೆ. ಆ ಪರ್ವತಾಗ್ರದಿಂದ ಜಲಧಾರೆಯೊಂದು ಧುಮ್ಮಿಕ್ಕುತ್ತದೆ. ಆ ತಾಣದಲ್ಲಿ ವೀರಭದ್ರದೇವರ ಕ್ಷೇತ್ರವಿದ್ದು ವಾರ್ಷಿಕ ತೇರು ಜಾತ್ರೆಗಳು ಜರುಗುತ್ತವೆ.

## ಬೆಂಗಳೂರು

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಹಾನಗರವು ಭಾರತದ ಬೃಹನ್ನಗರಗಳಲ್ಲಿ ೫ನೆಯ ಸ್ಥಾನದಲ್ಲಿದೆ. ಮತ್ತು ಏಷ್ಯಾಖಂಡದಲ್ಲಿಯೇ ಅತಿವೇಗವಾಗಿ ವಿಸ್ತಾರಗೊಳ್ಳುತ್ತಿರುವ ನಗರ

ವಾಗಿದೆ. ತೀರ್ಥಕ್ಷೇತ್ರಗಳಿದ್ದರೂ ನವನಾಗರಿಕತೆಯ ಅಬ್ಬರದ ನಡುವೆ ಅವು ಎದ್ದು ಕಾಣಿಸುವುದೇ ಇಲ್ಲ. ಆಡಳಿತದ ಸೌಕರ್ಯಕ್ಕಾಗಿ ಬೆಂಗಳೂರು ನಗರ ಜಿಲ್ಲೆಯನ್ನು ಉತ್ತರ ತಾಲ್ಲೂಕು, ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ಲು ತಾಲ್ಲೂಕು ಎಂದು ವಿಭಾಗಿಸಿದ್ದಾರೆ.

**ಗಾಳಿ ಆಂಜನೇಯ ಸ್ವಾಮಿ:** ಉತ್ತರ ತಾಲ್ಲೂಕಿನ ಬೆಂಗಳೂರು-ಮೈಸೂರು ರಸ್ತೆಯಲ್ಲಿರುವ ಋಷಭಾವತಿ ನದಿಯ ಉಗಮ ಸ್ಥಾನದಲ್ಲಿ ಗಾಳಿ ಆಂಜನೇಯ ಸ್ವಾಮಿಯ ಕ್ಷೇತ್ರವಿದೆ. ಗಾಳಿಗ್ರಹಗಳ ಬಾಧೆಗೆ ತುತ್ತಾದವರು ಅಲ್ಲಿರುವ ಆಂಜನೇಯ ಸ್ವಾಮಿಯನ್ನು ಆರಾಧಿಸಿ ಸಂಕಟಮುಕ್ತರಾಗುತ್ತಾರೆ.

**ಗವಿಗಂಗಾಧರೇಶ್ವರ:** ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇವಾಲಯವು ನೈಸರ್ಗಿಕವಾದ ಗುಹೆಯೊಂದರಲ್ಲಿ ನಿರ್ಮಾಣಗೊಂಡಿರುವ ಪ್ರಾಚೀನ ಕ್ಷೇತ್ರ. ಮಕರ ಸಂಕ್ರಾಂತಿ ಹಬ್ಬದ ಸಂಧ್ಯಾಕಾಲಕ್ಕೆ ಸೂರ್ಯನ ಕಿರಣಗಳು ಗವಿಯನ್ನು ಪ್ರವೇಶಿಸಿ ಗರ್ಭಗೃಹದ ಲಿಂಗದ ಮೇಲೆ ಬೀಳುವ ವಾಸ್ತುಚಾತುರ್ಯ ಅಚ್ಚರಿಗೊಳಿಸುತ್ತದೆ. ದೇವಾಲಯದ ಅಂಗಳದಲ್ಲಿ ೧೫ ಅಡಿ ಎತ್ತರದ ಏಕಶಿಲಾಸ್ಥಂಭದಲ್ಲಿ ತ್ರಿಶೂಲ, ಛತ್ರ, ಡಮರುಗಗಳನ್ನು ಕಡೆದಿರುವ ಶಿಲ್ಪವು ಮನೋಜ್ಞವಾಗಿದೆ.

**ಹೆಸರಘಟ್ಟ:** ಅರ್ಕಾವತಿ ನದಿಯಿಂದ ನಿರ್ಮಾಣವಾಗಿರುವ ವಿಶಾಲವಾದ ಸರೋವರವೊಂದು ಹೆಸರಘಟ್ಟದಲ್ಲಿದ್ದು, ಅದೊಂದು ಮನಮೋಹಕ ವಿಹಾರಕೇಂದ್ರವಾಗಿದೆ. ಅಷ್ಟುಮಾತ್ರವಲ್ಲದೆ ಅದು ದೂರ್ವಾಸಮುನಿಗಳಿಂದ ಪೂಜಿತವಾದ ಲಕ್ಷ್ಮೀನರಸಿಂಹಸ್ವಾಮಿಯ ಕ್ಷೇತ್ರವಾಗಿದೆ.

**ವಸಂತಪುರ:** ದಕ್ಷಿಣ ತಾಲ್ಲೂಕಿನ ವಸಂತಪುರವು ಮಾಂಡವ್ಯ ಮುನಿಗಳ ತಪೂಭೂಮಿಯಾಗಿದೆ. ಅಲ್ಲಿ ಆ ಮಹಾತ್ಮರಿಂದ ಪೂಜಿತನಾದ ವಸಂತವಲ್ಲಭರಾಯ ಸ್ವಾಮಿಯ ದೇವಾಲಯವಿದೆ. ಅಲ್ಲಿ ಅಷ್ಟತೀರ್ಥಗಳಿವೆ.

**ತಿಪ್ಪಗೊಂಡನಹಳ್ಳಿ:** ಅರ್ಕಾವತಿನದಿಯ ತೀರದ ಪುಣ್ಯತೀರ್ಥವಾದ ತಿಪ್ಪಗೊಂಡನಹಳ್ಳಿಯಲ್ಲಿ ಪ್ರಸನ್ನ ಪಾರ್ವತಿ ಅಮ್ಮನವರ ಸನ್ನಿಧಾನವಿದೆ. ಅಮ್ಮನವರ ಜನ್ಮೋತ್ಸವ ಜಾತ್ರೆಯು ಅತ್ಯಂತ ವೈಭವದಿಂದ ಜರುಗುತ್ತದೆ.

**ಬನ್ನೇರುಘಟ್ಟ:** ಆನೇಕಲ್ಲು ತಾಲ್ಲೂಕಿನ ಬನ್ನೇರುಘಟ್ಟವೆಂಬ ಗ್ರಾಮದ ಬೆಟ್ಟದಲ್ಲಿ ಅರ್ಕಾವತಿಯ ಉಪನದಿಯಾದ ಸುವರ್ಣಾವತಿಯು ಹುಟ್ಟುತ್ತದೆ. ಅಲ್ಲಿ ಮಹಾವಿಷ್ಣುವು ಶ್ರೀದೇವಿಭೂದೇವಿಯರೊಡಗೂಡಿ ಸಂಪಂಗಿರಾಮಸ್ವಾಮಿ ಅಥವಾ ಚಂಪಕಧಾಮ ಸ್ವಾಮಿ ಎಂಬ ನಾಮದಿಂದ ನೆಲೆಗೊಂಡು, ಅದನ್ನೊಂದು ಪುಣ್ಯತೀರ್ಥವಾಗಿಸಿದ್ದಾನೆ. ಅಲ್ಲಿ ಫಾಲ್ಗುಣದಲ್ಲಿ ನಡೆಯುವ ಹೂವಿನ ಪಲ್ಲಕ್ಕಿ ಉತ್ಸವವು ವಿಶೇಷ ಕಾಂತಿಯಿಂದ ಕೂಡಿರುತ್ತದೆ.

## ರಾಮನಗರ

**ರಾಮದೇವರ ಬೆಟ್ಟ:** ಜಿಲ್ಲಾ ಕೇಂದ್ರವಾದ ರಾಮನಗರವು ಏಳು ಬೆಟ್ಟಗಳಿಂದ ಸುತ್ತುವರಿದಿದ್ದು, ಎಲ್ಲವೂ ಪೌರಾಣಿಕಮಹತ್ವದಿಂದ ಕೂಡಿವೆ. ಆ ಪೈಕಿ ರಾಮನಗರಕ್ಕೆ ೫ ಕಿ.ಮೀ. ದೂರದಲ್ಲಿರುವ ರಾಮದೇವರ ಬೆಟ್ಟವು ಅರ್ಕಾವತಿ ನದಿಯ ತೀರದಲ್ಲಿದ್ದು ತ್ರೇತಾಯುಗದ ಚಿತ್ರಕೂಟದಪರ್ವತವೆಂಬ ಕೀರ್ತಿಗೆ ಪಾತ್ರವಾಗಿದೆ. ಸೀತಾದೇವಿಗೆ ಹಿಂಸೆಕೊಟ್ಟ ಕಾಕಾಸುರನ ಮೇಲೆ ಶ್ರೀರಾಮನು ದರ್ಭಾಸ್ತ್ರವನ್ನು ಪ್ರಯೋಗಿಸಿ, ಅದರ ಒಂದು ಕಣ್ಣನ್ನು ಸೆಳೆದುಕೊಂಡು ಅಟ್ಟಿ ಕಳೆದನು. ಹೀಗಾಗಿ ಇಂದಿಗೂ ರಾಮದೇವರ ಬೆಟ್ಟದ ಮೇಲೆ ಕಾಗೆಗಳು ಹಾರಾಡುವುದಿಲ್ಲ, ಅಲ್ಲಿ ವಾಸಮಾಡುವುದೂ ಇಲ್ಲ. ಶ್ರೀರಾಮನು ತನ್ನದೇ ಆದ ವಿಗ್ರಹವೊಂದನ್ನು ಸುಗ್ರೀವನಿಗೆ ಕರುಣಿಸಿದನೆಂದೂ, ಸುಗ್ರೀವನು ಅದನ್ನು ರಾಮದೇವರ ಬೆಟ್ಟದಲ್ಲಿ ಪ್ರೀತಿಯಿಂದ ಪ್ರತಿಷ್ಠಾಪಿಸಿ ಪೂಜಿಸಿದನೆಂದೂ ಸ್ಥಳಪುರಾಣದಲ್ಲಿದೆ. ಸೀತಾದೇವಿಯ ಸ್ಪರ್ಶದಿಂದ ಪುನೀತವಾದ 'ರಾಮತೀರ್ಥ'ವೊಂದು ಅಲ್ಲಿದೆ. ಅಷ್ಟು ಮಾತ್ರವಲ್ಲದೆ ಅಷ್ಟತೀರ್ಥಗಳೂ, ಸಪ್ತರ್ಷಿಶಿಲೆಗಳೂ ಆ ಕ್ಷೇತ್ರದ ಪಾವಿತ್ರ್ಯವನ್ನು ಇಮ್ಮಡಿಗೊಳಿಸಿವೆ.

**ದೊಡ್ಡಮಳೂರು:** ಚನ್ನಪಟ್ಟಣ ತಾಲ್ಲೂಕಿಗೆ ಸೇರುವ ದೊಡ್ಡಮಳೂರು ವೈಷ್ಣವ ಕ್ಷೇತ್ರವಾಗಿದ್ದು ಅಲ್ಲಿಂದ ೫ ಕಿ.ಮೀ. ದೂರದಲ್ಲಿ, ಕಣ್ವ ನದಿಯ ದಂಡೆಯ ಮೇಲಿದೆ. ಅಲ್ಲಿ ಮಹಾವಿಷ್ಣುವು ಶಂಖ ಚಕ್ರ ಗದಾಭಯಹಸ್ತಗಳಿಂದ ಕೂಡಿ ಅಪ್ರಮೇಯನೆಂಬ ನಾಮದಿಂದ ಪರಿಶೋಭಿತನಾಗಿದ್ದಾನೆ. ಮಹಾಲಕ್ಷ್ಮಿಯ ಅರವಿಂದವಲ್ಲಿಯೆಂಬ ನಾಮದಿಂದ ಅಲ್ಲಿ ಪ್ರತಿಷ್ಠಿತಳಾಗಿದ್ದಾಳೆ. ಅಂಬೆಗಾಲು ಕೃಷ್ಣನ ಮೂರ್ತಿಯಂತೂ ಅಪರೂಪದ ಚೆಲುವಾದ ವಿಗ್ರಹವಾಗಿದೆ. ಪುರಂದರದಾಸರು ಬಂದಾಗ ಆ ಮೂರ್ತಿಯನ್ನು ಕಂಡು ಭಕ್ತಿಪರವಶರಾಗಿ, 'ಆಡಿಸಿದಳೆ ಯಶೋದಾ ಜಗದೋದ್ಧಾರನ'' ಎಂಬ ಕೀರ್ತನೆಯನ್ನು ಕಟ್ಟಿ ಹಾಡಿದರರೆಂದು ಸ್ಥಳೀಯರು ಹೇಳು ತ್ತಾರೆ. ಊರಿನಲ್ಲಿ ಕೈಲಾಸೇಶ್ವರ ಮುಂತಾದ ಇನ್ನು ಕೆಲವು ಆಲಯ ಗಳಿವೆ.

## ಬೆಂಗಳೂರು ಗ್ರಾಮಾಂತರ

**ಶಿವಗಂಗೆ:** ಕಕುದ್ಗಿರಿ ಎಂಬ ಪುರಾಣನಾಮದ ಶಿವಗಂಗೆಯು ನೆಲಮಂಗಲ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩೦ ಕಿ.ಮೀ.ಗಳ ದೂರದಲ್ಲಿದೆ. ಅದನ್ನು 'ತೀರ್ಥರಾಜ' ಎಂದು ಬಣ್ಣಿಸಲಾಗಿದ್ದು, ಅದಕ್ಕೆ ತಕ್ಕಂತೆಯೇ ಇದೆ. ಅಲ್ಲಿರುವ ಬಹಳ ಕಡಿದಾದ, ವಿಶಾಲವಾದ ಪರ್ವತಸ್ತೋಮದಲ್ಲಿ ಗಂಗಾಧರೇಶ್ವರ ಮತ್ತು ಹೊನ್ನಾದೇವಿಯವರ ಬೇರೆ ಬೇರೆಯೇ ಆದ ಗುಹಾಂತರ ದೇವಾಲಯಗಳಿವೆ. ಗಂಗಾಧರೇಶ್ವರ ಲಿಂಗದ ಮೇಲೆ ತುಪ್ಪವನ್ನು ಸವರಿ ಗೋರಿಕೊಂಡರೆ ಅದು ಬೆಣ್ಣೆಯಾಗಿ ಬಿಡುವ ವೈಚಿತ್ರ್ಯ ಅಲ್ಲಿದೆ. ಹೊನ್ನಾದೇವಿಯು ಕುಳಿತ ಭಂಗಿಯಲ್ಲಿದ್ದು, ಅವಳು ಅಷ್ಟಭುಜೆಯಾಗಿ ರಕ್ತಬೀಜಾಸುರನನ್ನು ಸಂಹರಿಸುವ ಉಗ್ರರೂಪಿಣಿಯಾಗಿದ್ದಾಳೆ. ಈ ಸನ್ನಿಧಾನಗಳ ರಥೋತ್ಸವಗಳು ಬೇರೆ ಬೇರೆ ಮಾಸಗಳಲ್ಲಿಯೇ ಜರಗುತ್ತವೆ. ಪರ್ವತಾಗ್ರದ ಮೈನವಿರೇಳಿಸುವ ಪ್ರಪಾತದ ಅಂಚಿನಲ್ಲಿ ಬೃಹದಾಕಾರದ ನಂದಿವಿಗ್ರಹವನ್ನು ಸ್ಥಾಪಿಸಿದ್ದಾರೆ. ಸಂತಾನವಿಲ್ಲದ ಸ್ತ್ರೀಯರು ಆ ನಂದಿಯನ್ನು ಪ್ರದಕ್ಷಿಣೆ ಮಾಡಿದರೆ, ಸಂತಾನವತಿಯಾಗುತ್ತಾರೆಂಬ ನಂಬಿಕೆಯಿದೆ. ಸ್ವಚ್ಛವಾದ ಜೀವಜಲದಿಂದ ತುಂಬಿದ 'ಅಷ್ಟತೀರ್ಥ'ಗಳೇ ಮೊದಲಾದ ಅನೇಕ ಪುಣ್ಯತೀರ್ಥಗಳಿದ್ದು ಅದು ತೀರ್ಥರಾಜನೇ ಆಗಿದೆ.

ಶಿಲ್ಪಕಲಾವೈಭವದಿಂದ ಕೂಡಿದ ವೀರಭದ್ರೇಶ್ವರ, ಚಂಡಿಕೇಶ್ವರ, ಸುಬ್ರಹ್ಮಣ್ಯ ಮುಂತಾದ ಮೂರ್ತಿಗಳು ಅಲ್ಲಿ ಭಕ್ತರನ್ನು ಮೋಹ

ಗೊಳಿಸುತ್ತವೆ. ಬೆಟ್ಟದ ಪಾದದಲ್ಲಿರುವ ಊರಿನೊಳಗೆ ಶಿವಗಂಗಾ ಮಠ ಎಂದೇ ಕರೆಯುವ ಯತಿಪರಂಪರೆಯಿರುವ ಶಂಕರಾಚಾರ್ಯ ಪರಂಪರೆಯ ದೊಡ್ಡದಾದ ಮಠವಿದೆ. ಎರಡು ಗಣ್ಯವಾದ ವೀರಶೈವ ಮಠಗಳೂ ಇವೆ. ಪರ್ವತವೈಭವ, ವಾಸ್ತುವೈಭವ, ತೀರ್ಥವೈಭವಾದಿ ಪ್ರಕೃತಿಯ ಅದ್ಭುತ ಲೀಲೆಗಳನ್ನು ಕಣ್ಣಾರೆ ಕಾಣಬೇಕೆಂದರೆ ಶಿವಗಂಗೆಗೆ ಹೋಗಲೇಬೇಕು. ಕಳಲೆ ನಂಜರಾಜ ಕವಿಯು (೧೭೫೦) 'ಕಕುದ್ಗಿರಿ ಮಾಹಾತ್ಮ್ಯ'ವೆಂಬ ಪದ್ಯಕಾವ್ಯವನ್ನೇ ರಚಿಸಿದ್ದಾನೆ.

**ಘಾಟಿಸುಬ್ರಹ್ಮಣ್ಯ:** ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸೇರುವ, ಅಲ್ಲಿಂದ ೧೨ ಕಿ.ಮೀ. ಅಂತರದಲ್ಲಿರುವ ಗಿರಿಕಂದರಗಳ ಘಾಟುಗಳ ನಡುವೆ ಇರುವ ಘಾಟಿಸುಬ್ರಹ್ಮಣ್ಯವು ಸರ್ಪರೂಪದ ಸುಬ್ರಹ್ಮಣ್ಯ ಸ್ವಾಮಿಯ ಕ್ಷೇತ್ರ. ವಾರ್ಷಿಕವಾಗಿ ನಡೆಯುವ ಷಷ್ಠಿ ಜಾತ್ರೆಯು ಅತ್ಯಂತ ವರ್ಣಮಯವಾಗಿರುತ್ತದೆ. ತ್ರಿಕಾಲಪೂಜೆ, ನಿತ್ಯಾನ್ನದಾನಗಳು ನಡೆಯುತ್ತವೆ. ಸಂತಾನಕ್ಕಾಗಿ ನಾಗಪ್ರತಿಷ್ಠೆ, ಚರ್ಮರೋಗ ಮತ್ತು ಇನ್ನಿತರ ಕಷ್ಟಕಾರ್ಪಣ್ಯಗಳಿಗೆ ಹರಕೆಯೊಪ್ಪಿಸುವುದು, ಮುಡಿಸೇವೆ, ತುಪ್ಪದ ಕಾಯಿ ಸೇವೆ ಮೊದಲಾದವು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ನಿತ್ಯವೂ ಅಲ್ಲೊಂದು ಜಾತ್ರೆಯೇ ನಡೆಯುತ್ತದೆ. ಷಷ್ಠಿ ಜಾತ್ರೆಯ ಕಾಲದ ದನಗಳ ಜಾತ್ರೆಯೂ ಅಲ್ಲಿನ ಒಂದು ವಿಶೇಷ.

## ಚಿಕ್ಕಬಳ್ಳಾಪುರ

**ನಂದೀದುರ್ಗ:** ಜಿಲ್ಲಾ ಕೇಂದ್ರವೂ ತಾಲ್ಲೂಕು ಕೇಂದ್ರವೂ ಆಗಿರುವ ಚಿಕ್ಕಬಳ್ಳಾಪುರದಿಂದ ೮ ಕಿ.ಮೀ. ದೂರದಲ್ಲಿರುವ ನಂದೀದುರ್ಗವು ಕರ್ನಾಟಕದ ಅತ್ಯಂತ ರಮಣೀಯ ಗಿರಿಧಾಮವಾಗಿರುವಂತೆಯೇ, ಪವಿತ್ರವಾದ ಪುಣ್ಯತೀರ್ಥವೂ ಆಗಿದೆ. ತಂಗುವಿಕೆಗೆ ಬೇಕಾದ ಕೆಲವು ಕಟ್ಟಡಗಳ ಚಿಕ್ಕ ಊರೇ ಗಿರಿಯ ಮೇಲಿದೆ. ಕೂಷ್ಮಾಂಡ ಋಷಿಗಳು ಸ್ಥಾಪಿಸಿರುವ ಯೋಗನಂದೀಶ್ವರನ ಲಿಂಗ ಸಹಿತವಾದ ದೇವಾಲಯವೇ ಆ ಕ್ಷೇತ್ರದ ಕೇಂದ್ರಬಿಂದುವಾಗಿದೆ. ಸ್ವಾಮಿಯು ಸದಾಕಾಲ ಯೋಗದೀಕ್ಷೆಯಲ್ಲಿರುತ್ತಾನಾದ್ದರಿಂದ ಪೂಜಾದಿಗಳು ಉಂಟೇ ಹೊರತು ಉತ್ಸವಾದಿಗಳಿಲ್ಲ. ಪ್ರತ್ಯೇಕ ಗುಡಿಯಲ್ಲಿ ಪಾರ್ವತೀ ದೇವಿಯು ಮುಕ್ತಾಂಬ ನಾಮದಿಂದ ವಿರಾಜಮಾನಳಾಗಿದ್ದಾಳೆ. ಪಾರ್ವತೀದೇವಿಯು ಅಲ್ಲಿ ತಪಸ್ಸುಮಾಡಿ ತನ್ನ ಒಂದು ಅವತಾರವನ್ನು ಮುಗಿಸಿ ಮುಕ್ತಳಾದುದರಿಂದ ಅವಳಿಗೆ ಅಲ್ಲಿ ಮುಕ್ತಾಂಬ ಎಂದು ಹೆಸರಾಗಿದೆ. ಶಿವಪಾರ್ವತಿಯರ ಗುಡಿಗಳಲ್ಲದೆ ಪ್ರತ್ಯೇಕವಾಗಿ ನೆಲ್ಲಿಕಾಯಿ ಬಸವ, ವೀರಾಂಜನೇಯ, ಮುನೀಶ್ವರ ಸ್ವಾಮಿ, ಗಂಗಾಭವಾನಿ, ಗವಿವೀರಭದ್ರ ಮುಂತಾದ ದೇವರುಗಳೂ ಬೆಟ್ಟದಮೇಲಿದ್ದಾರೆ. ಅಮೃತಸರೋವರ, ಪಾತಾಳಗಂಗೆ, ಅಂತರಗಂಗೆ, ಶೌನಕತೀರ್ಥ, ನರಸಪ್ಪನಕುಂಟೆ, ದೊಡ್ಡ ದೊಣೆ ಎಂಬ ತೀರ್ಥಗಳಿವೆ. ಅರ್ಕಾವತಿ ಮತ್ತು ಪಾಲಾರ್ ನದಿಗಳು ನಂದಿದುರ್ಗದಿಂದಲೇ ಹುಟ್ಟಿಹರಿಯುತ್ತವೆ. ನಂದಿಯ ಹವೆಯಲ್ಲಿ ಗಾಂಧೀಜಿಯವರು ವಿಶ್ರಾಂತಿ ಪಡೆದು ನವಚೈತನ್ಯಭರಿತರಾದರೆಂದು ಇತಿಹಾಸದಲ್ಲಿ ಬರೆದಿದೆ.

ನಂದೀದುರ್ಗದ ಬೆಟ್ಟದ ತಪ್ಪಲಿನಲ್ಲಿ ನಂದಿ ಎಂಬ ಹೆಸರಿನ ಗ್ರಾಮವಿದೆ. ಅದೂ ಒಂದು ಪವಿತ್ರ ಪುಣ್ಯತೀರ್ಥವೇ ಆಗಿದೆ. ಅಲ್ಲಿ ಭೋಗನಂದೀಶ್ವರನೆಂಬ ಶಿವನ ದೇವಾಲಯವಿದ್ದು ಅದೊಂದು ಜೋಡು ದೇವಾಲಯವಾಗಿದೆ. ಒಂದು ಗುಡಿಯಲ್ಲಿ ಭೋಗನಂದೀಶ್ವರನಿದ್ದರೆ ಇನ್ನೊಂದರಲ್ಲಿ ಅರುಣಾಚಲೇಶ್ವರನಿದ್ದಾನೆ. ಭೋಗನಂದೀಶ್ವರನ ದೇವಿ ಪ್ರಸನ್ನಪಾರ್ವತಿಗೆ ಮತ್ತು ಅರುಣಾಚಲೇಶ್ವರನ ದೇವಿ ಅಪೀತಕುಚಾಂಬೆಗೆ ಪ್ರತ್ಯೇಕ ಗುಡಿಗಳಿವೆ. ದೇವಾಲಯದ ಆವರಣದಲ್ಲಿ ದಕ್ಷಿಣಪಿನಾಕಿನಿ ನದಿಗೆ ಉಗಮಸ್ಥಾನವಾದ ಶೃಂಗೀತೀರ್ಥವಿದೆ. ಜಾತ್ರೆಗಳು, ಉತ್ಸವಗಳು ಸಮೃದ್ಧವಾಗಿ ನಡೆಯುತ್ತವೆ. ಈ ಅವಳಿ ದೇವಾಲಯಗಳ ಶಿಲ್ಪವೈಭವವನ್ನು ನೋಡಲು ಒಂದು ಪೂರ್ತಿ ದಿನವೇ ಬೇಕು. ಅದು ಕರ್ನಾಟಕದ ದ್ರಾವಿಡಶೈಲಿಯ ಅತಿ ಸುಂದರ ವಾಸ್ತುಶಿಲ್ಪಗಳಲ್ಲಿ ಒಂದೆಂಬ ಕೊಂಡಾಟಕ್ಕೆ ಪಾತ್ರವಾಗಿದೆ.

**ಕೈವಾರ:** ಚಿಂತಾಮಣಿ ತಾಲ್ಲೂಕಿನ ಪುಣ್ಯಕ್ಷೇತ್ರವಾದ ಕೈವಾರವು ಅಲ್ಲಿಂದ ೧೩ ಕಿ.ಮೀ.ಗಳ ಅಂತರದಲ್ಲಿದೆ. ಮಹಾಭಾರತದಲ್ಲಿ ಬರುವ ಏಕಚಕ್ರನಗರವೇ ಕೈವಾರವೆಂದು ಸ್ಥಳಪುರಾಣದಲ್ಲಿ ಹೇಳಿದೆ. ಅದರ ಕುರುಹಾಗಿ ಸಮೀಪದ ಚಿಕ್ಕಬೆಟ್ಟದಲ್ಲಿ ಭೀಮನು ಬಕಾಸುರನನ್ನು ಕೊಂದುಹಾಕಿ ಗುಹೆಯೊಂದಕ್ಕೆ ಎಸೆದುದನ್ನು ಭಕ್ತರು ತೋರಿಸುತ್ತಾರೆ. ಅಷ್ಟು ಮಾತ್ರವಲ್ಲದೆ ಪಾಂಡವರ ಹೆಸರುಗಳಲ್ಲಿ ಭೀಮೇಶ್ವರ, ನಕುಲೇಶ್ವರ, ಸಹದೇವೇಶ್ವರ ಎಂಬ ಶಿವಾಲಯಗಳಿವೆ. ಅಮರನಾರಾಯಣನೆಂಬ ಮಹಾವಿಷ್ಣುವಿನ ಶಿಲ್ಪಕಲಾಪ್ರೌಢಿಮೆಯಿಂದೊಡಗೂಡಿದ ದೇವಾಲಯವೇ ಕೈವಾರದ ಕೇಂದ್ರಬಿಂದು.

ಗೃಹಸ್ಥರಾಗಿಯೂ ಅಮರನಾರಾಯಣನ ಭಕ್ತರಾಗಿ ಸಿದ್ಧಿಪುರುಷರಾಗಿ ಮೆರೆದ ಕೈವಾರ ನಾರಣಪ್ಪ (೧೭೫೦) ಎಂಬ ಮಹಾತ್ಮರ ದೆಸೆಯಿಂದಾಗಿ ಕೈವಾರದ ಕೀರ್ತಿ ನೂರ್ಮಡಿಸಿದೆ. ಭಕ್ತಜೀವನ ನಡೆಸುತ್ತಿದ್ದ ನಾರಾಣಪ್ಪನವರಿಗೆ ಒಮ್ಮೆ ಏಕಾಂತದಲ್ಲಿ ಮಹಾತ್ಮರೊಬ್ಬರು ಪ್ರತ್ಯಕ್ಷರಾಗಿ ಒಂದು ಮಂತ್ರವನ್ನುಪದೇಶಿಸಿ, ಒಂದು ಗುಂಡಾದ ಬೆಣಚುಕಲ್ಲನ್ನು ಕೊಟ್ಟು ''ಇದನ್ನು ಸದಾಕಲ ಬಾಯಲ್ಲಿ ಊರಿಟ್ಟುಕೊಂಡು ಮಂತ್ರಜಪಮಾಡು ಕಂದಾ, ಆ ಕಲ್ಲು ಸಕ್ಕರೆಯಾಗಿ ಕರಗಿದಾಗ ನಿನಗೆ ಮಂತ್ರಸಿದ್ಧಿಯಾಯಿತೆಂದು ತಿಳಿಯಪ್ಪಾ'' ಎಂದು ಆಶೀರ್ವದಿಸಿ ಕಣ್ಮರೆಯಾದರು. ಅದರಂತೆ ಅವರು ಸಿದ್ಧಿಪುರುಷರಾಗಿ ತರುವಾಯ ಅಮರನಾರಾಯಣನೆ ಅವರಿಗೆ 'ತತ್ತ್ವಮಸಿ' ಮಂತ್ರವನ್ನು ಉಪದೇಶಿಸಿದನು. ವಿಭೂತಿಪುರುಷರಾದ ನಾರಾಣಪ್ಪನವರು ಕಾಲಜ್ಞಾನವೆಂದು ಹೇಳುವ ವಚನಗಳನ್ನು ತೆಲುಗು ಭಾಷೆಯಲ್ಲಿ ಬರೆದ ಮನೀಷಿಗಳೂ ಆಗಿದ್ದಾರೆ. ಅವರ ಮೂರ್ತಿಯನ್ನೊಳಗೊಂಡ ದೇವಾಲಯವು ಒಂದು ನೂತನ ಶಿಲ್ಪವಾಗಿ ಮೇಲೆ ಬಂದಿದೆ. ಅದೊಂದು ಸಾಂಸ್ಕೃತಿಕ, ಆಧ್ಯಾತ್ಮಿಕ ಕೇಂದ್ರವೂ ಆಗಿದೆ. ಅವರ ಹೆಸರಿನಲ್ಲೊಂದು 'ಭಕ್ತಿಪಂಥ'ವೇ ರೂಪುತಳೆದಿದೆ.

**ವಿದುರಾಶ್ವತ್ಥ:** ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥವು ಉತ್ತರಪಿನಾಕಿನಿ ನದಿಯ ತೀರದಲ್ಲಿರುವ ಗಣ್ಯವಾದ ತೀರ್ಥಕ್ಷೇತ್ರವಾಗಿದೆ. ಮಹಾಭಾರತದ ವಿದುರನು ನೆಟ್ಟ ಅಶ್ವತ್ಥವೃಕ್ಷದ ಕಾರಣದಿಂದಾಗಿ ಅದು ವಿದುರಾಶ್ವತ್ಥವೆನಿಸಿದೆ. ಈಗಲೂ ಅಲ್ಲಿ ಅಶ್ವತ್ಥ ವೃಕ್ಷಕ್ಕೇ ಪ್ರಾಶಸ್ತ್ಯ. ಅದರ ಬುಡದಲ್ಲಿ ಅಶ್ವತ್ಥನಾರಾಯಣ ಮೊದಲಾದ ದೇವಾಲಯಗಳಿವೆ. ಸಂತಾನಪ್ರಾಪ್ತಿಗಾಗಿ ನಾಗಪ್ರತಿಷ್ಠೆ ಮಾಡಿಸಿದ ಸಹಸ್ರಾರು ನಾಗರಕಲ್ಲುಗಳಿಂದ ವಿದುರಾಶ್ವತ್ಥವು ತುಂಬಿಹೋಗಿದೆ.

## ಕೋಲಾರ

**ಶತಶೃಂಗ ಪರ್ವತ:** ಜಿಲ್ಲಾಕೇಂದ್ರವಾದ ಕೋಲಾರ ಪಟ್ಟಣವೇ ಒಂದು ನಿರ್ಮಲತೀರ್ಥವಾಗಿದೆ. ಸಮೀಪದ ಶತಶೃಂಗಪರ್ವತದ ತಪ್ಪಲಿನಲ್ಲಿ ಗಿರಿಗರ್ಭದಿಂದ ಅಗೋಚರವಾಗಿ ಹರಿದು ಬರುವ ಜಲಧಾರೆಯು 'ಅಂತರಗಂಗೆ' ಎಂಬ ಹೆಸರಿನ ಕ್ಷೇತ್ರವನ್ನು ನಿರ್ಮಿಸಿದೆ. ಅಲ್ಲೊಂದು ಶಿವಾಲಯವಿದೆ. ಸರಳ ವಿವಾಹಗಳೂ ವಿಶೇಷ ಅರ್ಚನೆಗಳೂ ಸಂತರ್ಪಣೆಗಳೂ ಅಲ್ಲಿನ ಶಿವನ ಸನ್ನಿಧಿಯಲ್ಲಿ ನಡೆಯುತ್ತವೆ.

**ಕುರುಡುಮಲೆ:** ಮುಳಬಾಗಲು ತಾಲ್ಲೂಕಿಗೆ ಸೇರುವ ಕುರುಡುಮಲೆ ಬೆಟ್ಟವು ಪಾಲಾರ್‌ನದಿಯ ಉಪನದಿಯಾದ ಕೌಂಡಿನ್ಯ ನದಿಯ ಉಗಮ ಸ್ಥಾನವಾಗಿ ಪವಿತ್ರಭೂಮಿಯಾಗಿದೆ. ಸೋಮೇಶ್ವರ ಮತ್ತು ಮಹಾಗಣಪತಿಯ ದೇವಾಲಯಗಳು ಅಲ್ಲಿವೆ. ಎಲ್ಲಿಯೂ ಇಲ್ಲದ ಗಣಪತಿಗೆ ವಾಹನವಾದ ದೊಡ್ಡಗಾತ್ರದ ಇಲಿಯ ಶಿಲ್ಪವೊಂದು ಕುತೂಹಲಕಾರಿಯಾಗಿದೆ. ಮಹಾಗಣಪತಿಯ ಮೂರ್ತಿಯು ೧೧ ಅಡಿಗಳ ಎತ್ತರದ ಭೂಮವಿಗ್ರಹವಾಗಿದ್ದು ಭಕ್ತರ ಉಸಿರು ಕಟ್ಟುವಂತೆ ಮಾಡುತ್ತದೆ. ಒಮ್ಮೆ ದೇವತೆಗಳೆಲ್ಲರೂ ಸೇರಿ ಅಲ್ಲಿ ಗಣಪತಿಯನ್ನು ಆರಾಧಿಸಿ, ತಮಗೆ ಬೇಕುಬೇಕಾದುದನ್ನು ಪಡೆದುಕೊಂಡರು. ಹಾಗೆ ಅವರೆಲ್ಲರೂ ಕೂಡಿದ ಮಲೆಯೇ ಕೂಡುಮಲೆಯಾಗಿ ಆಮೇಲೆ ಕುರುಡುಮಲೆಯಾಯಿತು.

## ಚಿತ್ರದುರ್ಗ

**ಚಿತ್ರದುರ್ಗ:** ಚಿನ್ಮೂಲಾದ್ರಿಯೆಂದು ಖ್ಯಾತವಾಗಿರುವ ಜಿಲ್ಲೆಯ ಕೇಂದ್ರಪಟ್ಟಣವಾಗಿರುವ ಚಿತ್ರದುರ್ಗ ವಿಶಾಲವೂ ರುದ್ರರಮಣೀಯವೂ ಆದ ಪರ್ವತಸ್ತೋಮದ ನಡುವೆಯೇ ಮೇಲೆದ್ದ ಕ್ಷೇತ್ರವಾಗಿದೆ. ನಗರೀಕರಣದ ದೆಸೆಯಿಂದಾಗಿ ಅದರ ತೀರ್ಥ ಮಹಿಮೆಯು ಮಸುಕಾಗಿಬಿಟ್ಟಿದೆ. ಪಾಳೆಯಪಟ್ಟುಗಳು ಆಳಿದುದೇ ಕಾರಣವಾಗಿ ಬೆಟ್ಟದ ಮೇಲೆಯೇ ೪ ಸುತ್ತು ಬೆಟ್ಟದ ಕೆಳಗೆ ೩ ಸುತ್ತು ಎಂಬಂತೆ ೭ ಸುತ್ತಿನ ಕೋಟೆಯಿದೆ. ಅದು ಮಹಾಭಾರತದ ಹಿಡಿಂಬಾಸುರನ ಪಟ್ಟಣವೆಂದೂ ಅಲ್ಲಿ ಭೀಮನು ಹಿಡಿಂಬನನ್ನು ಕೊಂದು ಅವನ ತಂಗಿ ಹಿಡಿಂಬೆಯನ್ನು ವರಿಸಿದ್ದನೆಂದು ಸ್ಥಳಕತೆಯಿದೆ. ಅದರ ಕುರುಹಾಗಿ ಪರ್ವತದಮೇಲೆ ಹಿಡಂಬೇಶ್ವರನೆಂಬ ಶಿವನ ಗುಹಾದೇಗುಲವಿದೆ. ಅಲ್ಲಿಯೇ ಏಕನಾಥೇಶ್ವರಿಯೆಂಬ ಪಾರ್ವತಿಯ, ಸಂಪಿಗೆ ಸಿದ್ಧೇಶ್ವರ, ಫಲ್ಗುಣೇಶ್ವರ ಎಂಬ ಶಿವನ ಗುಡಿಗಳಿದ್ದು ಎಲ್ಲವೂ ಗುಹಾಲಯಗಳೇ ಆಗಿವೆ. ಕೆಳಕೋಟೆಯಲ್ಲಿ ರಾಜಪೂಜಿತವಾದ ಉಚ್ಚಂಗಿಯಮ್ಮನ ಆಲಯವಿದೆ. ದೇವಾಲಯಗಳಿಗೆ ಹೊಂದಿಕೊಂಡಂತೆ ಪರ್ವತದ ವಿವಿಧ ಶಿಖರಗಳಿಂದ ಹರಿದು ಬರುವ ಅಂತರ್ಜಲವು ಪುಣ್ಯತೀರ್ಥಗಳನ್ನುಂಟುಮಾಡಿದೆ. ಅಂಕಲಿಮಠ, ಮುರುಗಿಮಠ, ಮೊದಲಾದ ಮಠಗಳಿವೆ. ಚಿತ್ರದುರ್ಗದ ಅಲ್ಪವಾದ ಅರಿವು ಮೂಡಬೇಕಾದರೂ ಅಲ್ಲಿನ ಗಿರಿಗಹ್ವರಗಳ ಒಡಲಲ್ಲಿ ಒಂದು ವಾರ ಕಾಲದ ಸಾಹಸಯಾತ್ರೆಯನ್ನಾದರೂ ಮಾಡಲೇಬೇಕು.

**ನಾಯಕನಹಟ್ಟಿ:** ಚಳ್ಳಕೆರೆ ತಾಲ್ಲೂಕಿಗೆ ಸೇರುವ ನಾಯಕನಹಟ್ಟಿಯು ಅಲ್ಲಿಂದ ೨೨ ಕಿ.ಮೀ. ದೂರದಲ್ಲಿದೆ. ಕರ್ಮಯೋಗಿಯೂ, ಲೋಕೋಪಕಾರಿಯೂ, ಸಮಾಜಸುಧಾರಕನೂ, ಪವಾಡಪುರುಷನೂ ಆಗಿದ್ದ ತಿಪ್ಪೇರುದ್ರಸ್ವಾಮಿಯೆಂಬ(೧೬೫೦) ವಿಭೂತಿಪುರುಷನ ಲೀಲಾಭೂಮಿಯಾಗಿ ಅದು ಪರಮಪಾವನ ಕ್ಷೇತ್ರವಾಗಿ ಲಕ್ಷಾಂತರ ಭಕ್ತರ ಶ್ರದ್ಧಾಕೇಂದ್ರವಾಗಿದೆ. ಅಲ್ಲಿ ಅವನನ್ನು ಆರಾಧಿಸುವ ಒಳಮಠ ಮತ್ತು ಹೊರಮಠ ಎಂಬ ಎರಡು ಸ್ಥಾನಗಳಿವೆ. ಒಳಮಠವೊಂದು ದೇವಾಲಯವಾಗಿದ್ದು ಅಲ್ಲಿ ತಿಪ್ಪೇರುದ್ರಸ್ವಾಮಿಯ ಗದ್ದುಗೆ ಗುಡಿಯಿದೆ. ಆ ಗುಡಿಯ ಗೋಪುರದಲ್ಲಿ ಕೆಲವು ಆಕರ್ಷಕ ಪೌರಾಣಿಕ ಶಿಲ್ಪಗಳಿವೆ. ಊರ ಹೊರಗೆ ಚಿಕ್ಕಕೆರೆಯೆಂಬ ರಮಣೀಯ ತಟಾಕದ ತೀರದಲ್ಲಿ ಹೊರಮಠವಿದ್ದು ಅವನು ಜೀವಂತ ಸಮಾಧಿಯನ್ನು ಪಡೆದುಕೊಂಡ ಸಮಾಧಿಮಂದಿರವಿದೆ. ಗುಮ್ಮಟಾಕಾರದ ಆಕರ್ಷಕ ಗೋಪುರದಿಂದೊಡಗೂಡಿದ ಆ ಗುಡಿಯಲ್ಲಿ ಅವನ ಮೂರ್ತಿಸಹಿತವಾದ ಗದ್ದುಗೆಯಿದೆ. ರಥೋತ್ಸವ ಸಹಿತವಾದ ಏಳು ದಿನಗಳ ಜಾತ್ರೆಯು ಲಕ್ಷಾಂತರ ಭಕ್ತರನ್ನು ಸೆಳೆದುಕೊಳ್ಳುತ್ತದೆ.

**ಜಟಿಂಗರಾಮೇಶ್ವರ:** ಮೊಳಕಾಲ್ಮೂರು ತಾಲ್ಲೂಕಿನ ರಾಮಸಾಗರವೆಂಬ ಗ್ರಾಮಕ್ಕೆ ಸೇರಿದ ಜಟಿಂಗರಾಮೇಶ್ವರವು ಜಟಾಯು ಮತ್ತು ಶ್ರೀರಾಮನ ಪುಣ್ಯನಾಮಗಳಿಂದ ಪರಿಪ್ಲುತವಾಗಿದೆ. ರಾವಣನು ಸೀತೆಯನ್ನು ಕದ್ದೊಯ್ಯುತ್ತಿರುವಾಗ ಜಟಾಯುವು ಅವನೊಡನೆ ಹೋರಾಟ ಮಾಡಿದ ತಾಣವೆ ಅದಾಗಿದೆ. ದುಃಖಿತನಾದ ಶ್ರೀರಾಮನು ಜಟಾಯುವಿಗೆ ಅಲ್ಲಿಯೇ ಅಂತ್ಯಸಂಸ್ಕಾರಮಾಡಿ, ಅವನ ನೆನಪಿಗಾಗಿ ಶಿವಲಿಂಗವೊಂದನ್ನು ಸ್ಥಾಪಿಸಿದುದೇ ಜಟಿಂಗರಾಮೇಶ್ವರವೆಂದು ಖ್ಯಾತವಾಯಿತು. ಮಹಿಷಾಸುರಮರ್ದಿನಿ, ಪಂಪಾಪತಿ, ಜಂಬುಕೇಶ್ವರ, ಸಪ್ತಮಾತೃಕೆಯರು, ಭೈರವ, ತಪೋಲಿಂಗ ಮುಂತಾದ ಚಿಕ್ಕಚಿಕ್ಕ ಗುಡಿಗಳೂ ಅಲ್ಲಿಯೇ ಇವೆ. ಅಲ್ಲಿ 'ಏಕಾಂತ ತೀರ್ಥ'ವೆಂಬ ಪುಣ್ಯತೀರ್ಥವಿದೆ.

## ದಾವಣಗೆರೆ

**ಹರಿಹರ:** ತಾಲ್ಲೂಕು ಕೇಂದ್ರವಾಗಿರುವ ಹರಿಹರವು ಗುಹಾರಣ್ಯ ಕ್ಷೇತ್ರವೆನಿಸಿ ತುಂಗಭದ್ರಾ ತೀರದಲ್ಲಿರುವ ಪುಣ್ಯತಮ ತೀರ್ಥವಾಗಿದೆ. ಹರಿಹರದೇವಾಲಯವೇ ಅಲ್ಲಿ ಪ್ರಮುಖವಾದುದು. ಪುರಾಣಕಾಲದಲ್ಲಿ ಗುಹಾಸುರನೆಂಬ ರಾಕ್ಷಸನು ಬ್ರಹ್ಮನನ್ನು ಒಲಿಸಿಕೊಂಡು ಹರಿಯಿಂದಾಗಲೀ ಹರನಿಂದಾಗಲೀ ತನಗೆ ಮರಣವುಂಟಾಗದಂತೆ ವರವನ್ನು ಪಡೆದುಕೊಂಡು ಕೊಬ್ಬಿ ಮೆರೆಯುತ್ತಿದ್ದನು. ಆಗ ಹರಿ ಮತ್ತು ಹರರು ಮತ್ತು ತೇಜೋರೂಪಗಳನ್ನು ಒಗ್ಗೂಡಿಸಿ ಹರಿಹರವೆಂಬ ಏಕರೂಪವಾಗಿ ಆ ರಕ್ಕಸನನ್ನು ನಿಗ್ರಹಿಸಿದನು. ದೇವತೆಗಳ ಕೋರಿಕೆಯಂತೆ ಅದೇ ರೂಪದಲ್ಲಿ ಅದೇ ನಾಮದಲ್ಲಿ ಹರಿಹರದಲ್ಲಿ ನೆಲೆಸಿದರು. ವಿಶಾಲವಾದ ಆ ದೇವಾಲಯದ ಗರ್ಭಗುಡಿಯ ಹರಿ ಹರ ಮೂರ್ತಿಯ ಬಲಭಾಗವು ಶಿವನಾದರೆ, ಎಡಭಾಗವು ವಿಷ್ಣು ರೂಪವಾಗಿದೆ. ಓಂಕಾರೇಶ್ವರ ಮಠ, ಶ್ರೀಶೈಲಮಠ ಮುಂತಾದ ಆರು ಮಠಗಳಿವೆ. ಶಿವನೊಳಗೆ ವಿಷ್ಣು, ವಿಷ್ಣುವಿನೊಳಗೆ ಶಿವ, ಅವರ ನಡುವೆ ಭೇದವೆಣಿಸುವುದು ಸಲ್ಲದೆಂಬುದೇ ಆ ಕ್ಷೇತ್ರದ ಸಂದೇಶವಾಗಿದೆ.

## ತುಮಕೂರು

**ಸಿದ್ದಗಂಗೆ:** ಜಿಲ್ಲಾಕೇಂದ್ರವೂ ತಾಲ್ಲೂಕು ಕೇಂದ್ರವೂ ಆಗಿರುವ ತುಮಕೂರು ನಗರದಿಂದ ೫ ಕಿ.ಮೀ. ಅಂತರದಲ್ಲಿ ಸಿದ್ಧಗಂಗೆ

ಯೆಂಬ ಪುಣ್ಯತೀರ್ಥವಿದೆ. ಅದೊಂದು ಬೆಟ್ಟದಮೇಲಿದೆ. ಅಲ್ಲಿ ಸಿದ್ಧಲಿಂಗೇಶ್ವರನ ದೇವಾಲಯ ಮತ್ತು ಬೆಟ್ಟದಿಂದ ಹರಿದುಬರುವ ಸಿದ್ಧಗಂಗಾತೀರ್ಥವಿದೆ. ಸಿದ್ಧಗಂಗಾಮಠ ಎಂಬ ಹೆಸರಿನ ಮಠ ವೊಂದಿದ್ದು, ಅದು ಬಹುದೊಡ್ಡ ಶೈಕ್ಷಣಿಕ ಕೇಂದ್ರವೂ ಅದಕ್ಕೂ ಮೀರಿದ ಅನ್ನದಾಸೋಹ ಕೇಂದ್ರವೂ ಆಗಿ ರಾಷ್ಟ್ರೀಯ ಖ್ಯಾತಿಗೆ ಪಾತ್ರವಾಗಿದೆ. ಶಿವರಾತ್ರಿಯಲ್ಲಿ ೧೨ ದಿನಗಳ ಸಿದ್ಧಲಿಂಗೇಶ್ವರನ ರಥೋತ್ಸವ ಸಹಿತವಾದ ಜಾತ್ರೆ ನಡೆಯುತ್ತದೆ. ಆಗ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನಗಳಿರುತ್ತದೆ. ಇದುವರೆಗೆ ಪೀಠಾಧಿಪತಿಗಳಾ ಗಿದ್ದ ಶಿವಕುಮಾರಸ್ವಾಮಿಗಳೆಂಬ ಯೋಗೀಶ್ವರರು 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ವಿವೇಕಾನಂದರ ಮಂತ್ರ ವಾಣಿಗೆ ಅನುಸಾರವಾಗಿ ಲೋಕಹಿತಕ್ಕಾಗಿಯೇ ತಮ್ಮನ್ನು ತೆತ್ತು ಕೊಂಡು, ''ನಡೆದಾಡುವ ದೇವರು'' ಎಂದೇ ಖ್ಯಾತರಾಗಿ ೧೧೬ ವರ್ಷಗಳು ಜೀವಿಸಿ ಮುಕ್ತರಾದರು.

**ದೇವರಾಯನದುರ್ಗ:** ತುಮಕೂರಿನಿಂದ ೧೫ ಕಿ.ಮೀ. ದೂರ ದಲ್ಲಿರುವ ದೇವರಾಯನದುರ್ಗವು ನಯನಮನೋಹರವಾದ ಗಿರಿಧಾಮವೂ ಪವಿತ್ರತೀರ್ಥವೂ ಆಗಿದೆ. ಮೂರು ಗಿರಿಶಿಖರ ಗಳಿಂದೊಡಗೂಡಿದ ಆ ಪರ್ವತಕ್ಕೆ ೭ ಹೆಬ್ಬಾಗಿಲುಗಳಿಂದ ಕೂಡಿದ ಎರಡು ಸುತ್ತಿನ ಕೋಟೆಯಿದೆ. ಕರಿಗಿರಿ ಎಂದು ಪ್ರಸಿದ್ಧಪಟ್ಟಿರುವ ಆ ಪರ್ವತದಲ್ಲಿ ಜಯ ಮತ್ತು ಮಂಗಲಿ ಎಂಬೆರಡು ತೊರೆಗಳು ಹುಟ್ಟಿ, ತರುವಾಯ ತಪ್ಪಲಿನಿಂದ ಮುಂದಕ್ಕೆ ಹರಿಯುವಾಗ ಸಂಗಮ ಗೊಂಡು ಜಯಮಂಗಲಿಯೆನಿಸುತ್ತದೆ. ಆ ದುರ್ಗದ ''ನೀರಿನ ಗುಂಡಿ'' ಎಂಬಲ್ಲಿ ಶಿಂಷಾ ನದಿಯು ಜನಿಸುತ್ತದೆ. ಬೆಟ್ಟದ ಪಾದ ದಲ್ಲಿ ಭೋಗಾನರಸಿಂಹ ಮತ್ತು ಬೆಟ್ಟದ ಮೇಲೆ ಯೋಗಾನರಸಿಂಹ ದೇವರುಗಳ ಸಮಾನ ಆಕೃತಿಯಿಂದೊಡಗೂಡಿದ ಹಿರಿದಾದ ದೇವಾ ಲಯಗಳಿವೆ. ಅವರು ಲಕ್ಷ್ಮೀಸಹಿತರಾಗಿದ್ದಾರೆ. ಎರಡೂ ಸನ್ನಿಧಿ ಗಳಲ್ಲಿ ಜಾತ್ರೋತ್ಸವಗಳಾಗುತ್ತವೆ. ಯೋಗಾನರಸಿಂಹ ಸ್ವಾಮಿಯ ಸನ್ನಿಧಿಗೆ ಸನಿಹದಲ್ಲಿ 'ಪಾದತೀರ್ಥ'ವೆಂಬ ಪುಷ್ಕರಿಣಿಯಿದೆ. ಅದಕ್ಕೆ ತುಂಬುವ ಪುಣ್ಯಜಲವು ಸ್ವಾಮಿಯ ಪಾದಮೂಲದಿಂದ ಇಳಿದು ಬರುತ್ತದೆಯೆಂದು ತಿಳಿಯಲಾಗಿದೆ.

ರಾಮಸೀತಾಲಕ್ಷ್ಮಣರು ತಮ್ಮ ವನವಾಸ ಕಾಲದಲ್ಲಿ ಸ್ವಲ್ಪಕಾಲ ಅಲ್ಲಿ ತಂಗಿದ್ದರೆಂದು ಐತಿಹ್ಯವಿದೆ. ಅದರ ಕುರುಹಾಗಿ ಬೆಟ್ಟದ ಮೇಲಣ ಒಂದು ಗುಹೆಯಲ್ಲಿ ರಾಮಸೀತಾಲಕ್ಷ್ಮಣರ ಸನ್ನಿಧಾನ ವಿದ್ದು, ಅಲ್ಲಿಯೇ ರಾಮತೀರ್ಥ ಮತ್ತು ಧನುಷ್ತೀರ್ಥ ಎಂಬೆರಡು ಚಿಲುಮೆ ತೀರ್ಥಗಳಿವೆ. ಬೆಟ್ಟದ ತುದಿಯಲ್ಲಿ ಗರುಡದೇವರ ಚಿಕ್ಕ ಗುಡಿಯಿದೆ. ಅಲ್ಲಿ 'ದೀವಿಗೆಗುಂಡು' ಎಂಬ ಹೆಬ್ಬಂಡೆಯ ಮೇಲೊಂದು ದೀಪಸ್ತಂಭವಿದೆ. ವಿಶೇಷ ದಿನಗಳಲ್ಲಿ ಅಲ್ಲಿ ಬೆಳಗಿ ಸುವ ದೀಪಜ್ಯೋತಿಯು ಬಹುದೂರದವರೆಗೆ ಕಾಣಿಸುತ್ತದೆ. ದೇವ ರಾಯನ ದುರ್ಗಕ್ಕೆ ೩ ಕಿ.ಮೀ. ದೂರದಲ್ಲಿ 'ನಾಮದ ಚಿಲುಮೆ' ಯೆಂಬ ತೀರ್ಥವಿದೆ. ಬಂಡೆಯ ಮಧ್ಯದಲ್ಲಿ ಒರಳಿನಂತಿರುವ ತಾಣದಿಂದ ಪುಣ್ಯಜಲವು ಉಕ್ಕಿ ಹರಿಯುತ್ತದೆ. ಶ್ರೀರಾಮನು ಹಣೆಗೆ ನಾಮಧರಿಸಿಕೊಳ್ಳಲು ನೀರು ಸಿಗದಿದ್ದಾಗ, ತನ್ನ ಬಾಣದ ಹೊಡೆತದಿಂದ ಆ ಚಿಲುಮೆಯನ್ನು ಉಂಟುಮಾಡಿದನೆಂಬ ವೃತ್ತಾಂತವಿದೆ.

**ಎಡಿಯೂರು:** ಕುಣಿಗಲ್ಲು ತಾಲ್ಲೂಕಿಗೆ ಸೇರಿದ ಎಡಿಯೂರು ಅಲ್ಲಿಂದ ೧೯ ಕಿ.ಮೀ. ದೂರದಲ್ಲಿದೆ. ೧೫ನೇ ಶತಮಾನದಲ್ಲಿದ್ದ ತೋಂಟದ ಸಿದ್ಧಲಿಂಗೇಶ್ವರರೆಂಬ ಶರಣರು ಅಲ್ಲಿ ಐಕ್ಯವಾಗಿದ್ದು, ಅವರ ಬಹು ದೊಡ್ಡದಾದ ಮಠವಿದೆ. ವಾರ್ಷಿಕ ಜಾತ್ರಾ ಕಾಲಕ್ಕೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

## ಉತ್ತರ ಕನ್ನಡ

ಒಂದು ಬದಿ ಸಹ್ಯಾದ್ರಿ, ಒಂದು ಬದಿ ಕಡಲು
ನಡುಮಧ್ಯದಲಿ ಅಡಕೆ ತೆಂಗುಗಳ ಮಡಲು
ಸಿರಿಗನ್ನಡದ ಚಪ್ಪರವೆ ನನ್ನ ಜಿಲ್ಲೆ
ಇಲ್ಲಿಯೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ ॥

ಎಂದು ದಿನಕರದೇಸಾಯಿಯವರು ಕೊಂಡಾಡಿರುವ ಉತ್ತರ ಕನ್ನಡ ಜಿಲ್ಲೆಯು ಪುಣ್ಯಕ್ಷೇತ್ರಗಳಿಂದಲೂ ಪರ್ವತಾವಳಿಗಳಿಂದಲೂ, ಗಹನಾರಣ್ಯಗಳಿಂದಲೂ ನದಿಗಳಿಂದಲೂ ಜಲಪಾತಗಳಿಂದಲೂ ಸಮುದ್ರಬೀಚುಗಳವೈಭವದಿಂದಲೂ ದ್ವೀಪಗಳಿಂದಲೂ ತುಂಬಿ ತುಳುಕುತ್ತಿದ್ದು, ಅದರ ಮಹಿಮಾವಿಶೇಷಗಳನ್ನೆಲ್ಲ ಬಣ್ಣಿಸಲು ವಾಗ್ದೇವಿಯೇ ಇಳಿದುಬರಬೇಕು.

**ಗೋಕರ್ಣ:** ಕುಮುಟಾ ತಾಲ್ಲೂಕಿಗೆ ಸೇರಿದ ಗೋಕರ್ಣ ಕ್ಷೇತ್ರವು ಅಲ್ಲಿಂದ ೧೬ ಕಿ.ಮೀ.ಗಳ ದೂರದಲ್ಲಿದೆ. 'ಮಹಾಬಲೇ ಶ್ವರ'ನಾಗಿ ಶಿವನು ಅಲ್ಲಿ ನೆಲೆಸಿರುವುದೇ ಕಾರಣವಾಗಿ, ಕಾಶಿ ಮತ್ತು ರಾಮೇಶ್ವರಗಳನ್ನು ಗೋಕರ್ಣದೊಂದಿಗೆ ಕೂಡಿಸಿ 'ತ್ರಿಸ್ಥಲಿ' ಎಂದು ಎಣಿಕೆಗೊಂಡಿರುವ ಘನತೆ ಅದಕ್ಕೆ ಪ್ರಾಪ್ತವಾಗಿದೆ. ಶಿವನ ಆತ್ಮ ಲಿಂಗವೇ ಗಣಪತಿಯ ಚಾತುರ್ಯದಿಂದ, ಅವನಿಂದಲೇ ಗೋಕರ್ಣ ದಲ್ಲಿ ಪ್ರತಿಷ್ಠಾಪನೆಗೊಂಡು 'ಭೂ ಕೈಲಾಸ'ವೆನಿಸಿದುದು ಕನ್ನಡಿಗರ ಭಾಗ್ಯವೇ ಸರಿ. ರಾವಣನ ಕೋಪಕ್ಕೆ ತುತ್ತಾಗಿ ತಲೆಯ ಮೇಲೆ ಗುದ್ದಿಸಿಕೊಂಡ ಗಣಪನು ಆ ಏಟಿಗೆ ಕುಳ್ಳನಾಗಿಬಿಟ್ಟು, ಆ ಕುಬ್ಜ ರೂಪದಲ್ಲಿಯೇ ಅಲ್ಲಿ ನೆಲೆಸಿದ್ದಾನೆ.

ಮಹಾಬಲೇಶ್ವರ ದೇವಾಲಯವು ಶಿಲ್ಪಕಲಾಚಾತುರ್ಯದಿಂದ ಲೂ ಕೂಡಿದ್ದು ಅತ್ಯಂತ ವಿಶಾಲವಾಗಿದೆ. ಸಪ್ತಕೋಟೇಶ್ವರ, ಅಮೃ ತೇಶ್ವರ, ಸಪ್ತಸಾಗರೇಶ್ವರ ಮೊದಲಾದ ೩೦ ಶಿವಲಿಂಗ ಸನ್ನಿಧಿಗಳಿವೆ. ದೇವಾಲಯಕ್ಕೆ ಸಮೀಪದಲ್ಲಿಯೇ ಸಮುದ್ರವು ಭೋರ್ಗರೆಯು ತ್ತಿರುತ್ತದೆ. ಕೋಟಿತೀರ್ಥ ಎಂಬುದೇ ಪ್ರಧಾನತೀರ್ಥವಾಗಿದ್ದು, ಸುಮಿತ್ರಾತೀರ್ಥ, ಅಗಸ್ತ್ಯತೀರ್ಥ ಮುಂತಾದ ೩೦ ತೀರ್ಥಗಳಿವೆ. ಶಿವರಾತ್ರಿಯಲ್ಲಿ ಜರಗುವ ರಥೋತ್ಸವ ಮತ್ತು ತೀರ್ಥಸ್ನಾನಗಳಿಗೆ ಸಹಸ್ರಾರು ಭಕ್ತರು ಆಗಮಿಸುತ್ತಾರೆ. ಮಹಾಬಲೇಶ್ವರ ಲಿಂಗವು ಭೂಗತವಾಗಿಯೇ ಇದ್ದು, ಒಂದು ಅಂಗುಲದಷ್ಟು ಮಾತ್ರವೇ ಹೊರಕ್ಕೆ ಕಾಣುತ್ತದೆ. ೫೦ ವರ್ಷಗಳಿಗೊಮ್ಮೆ ನಡೆಯುವ 'ಮಹಾಷ್ಟ ಬಂಧೋತ್ಸವ'ದ ಹೊತ್ತಿನಲ್ಲಿ , ಸಾಲಿಗ್ರಾಮಪೀಠವನ್ನು ಖನನ ಮಾಡಿ ಮೇಲೆತ್ತಿದಾಗ, ೩ ಅಡಿಗಳಷ್ಟು ಎತ್ತರವಿರುವುದು ಗೋಚರಿ ಸುತ್ತದೆ. ಆಗ ಅದನ್ನು ಕೆಳಗಿಳಿಸುವ ಮುನ್ನ ದರ್ಶನಮಾಡಲು ಅವಕಾಶ ನೀಡುತ್ತಾರೆ. ೭ ದಿನಗಳು ನಡೆಯುವ ಆ ಮಹೋತ್ಸವಕ್ಕೆ ಲಕ್ಷಾಂತರ ಭಕ್ತರು ಬರುತ್ತಾರೆ.

**ದಾಂಡೇಲಿ:** ಹಳಿಯಾಳ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೨೨ ಕಿ.ಮೀ. ದೂರದಲ್ಲಿ ಕಾಳೀನದಿಯ ತೀರದ ಪುಣ್ಯತೀರ್ಥವೇ ದಾಂಡೇಲಿ. ದತ್ತಾತ್ರೇಯ ಕಾಳಿಕಾಂಬ ದೇವಾಲಯಗಳಲ್ಲದೆ, ದೈವತ್ವಕ್ಕೇರಿದ ದಾಂಡೇಲಿಯಪ್ಪ ಎಂಬ ಮಹಾಪುರುಷನ ದೆಸೆಯಿಂದ ಅದು ಹೆಚ್ಚು ಖ್ಯಾತವಾಗಿದೆ. ಅವನಿಗಾಗಿ ದೊಡ್ಡದೊಂದು ಜಾತ್ರೆಯೇ ಜರಗುತ್ತದೆ. ನವರಾತ್ರಿಯ ವಿಜಯದಶಮಿಯಂದು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ನಡೆಯುವ ರಾವಣ, ಕುಂಭಕರ್ಣ, ಇಂದ್ರಜಿತುಗಳ ತೆಂಗಿನ ಮರದ ಎತ್ತರದ ಮೂರ್ತಿಗಳನ್ನು ನಿರ್ಮಿಸಿ, ಸಿಡಿಮದ್ದುಗಳನ್ನು ತುಂಬಿಸಿ, ಭಸ್ಮೀಭೂತವಾಗಿಸುವ 'ರಾಮಲೀಲಾ' ಮಹೋತ್ಸವವು ದಾಂಡೇಲಿಯಲ್ಲಿ ಕೂಡ ನಡೆಯುವುದು ಕರ್ನಾಟಕಕ್ಕೆ ಅಪೂರ್ವವಾದುದೆಂದು ಹೇಳಬಹುದು.

**ಮಂಜಗುಣಿ:** ಶಿರಸಿ ತಾಲ್ಲೂಕಿಗೆ ಸೇರಿದ ಮಂಜಗುಣಿಯು ಅಲ್ಲಿಂದ ೨೬ ಕಿ.ಮೀ.ಗಳ ದೂರದ ಆದರಣೀಯ ಪುಣ್ಯಕ್ಷೇತ್ರವಾಗಿದೆ. ಅಲ್ಲಿರುವ ವೆಂಕಟೇಶ್ವರಸ್ವಾಮಿಯ ದೇವಾಲಯವು ಒಂದು ಕಾರಣಿಕ ನೆಲೆಯಾಗಿದೆ. ಗರ್ಭಗೃಹದಲ್ಲಿ ಪದ್ಮಾವತಿ ಅಮ್ಮನವರ ಸಹಿತವಾಗಿ ಸ್ವಾಮಿಯು ಸ್ಥಾಪನೆಗೊಂಡಿದ್ದಾನೆ. ಅಲ್ಲಿನ ಮಹಾರಥೋತ್ಸವ, ಬ್ರಹ್ಮೋತ್ಸವ, ದೀಪೋತ್ಸವ, ವಸಂತೋತ್ಸವಾದಿಗಳು ಭಾವುಕ ಭಕ್ತರ ಪುಳಕಬಿಂದುಗಳಾಗಿವೆ. ತುಲಾಭಾರವೇ ಮುಂತಾದ ಹರಕೆಗಳ ಮಹಾಪೂರವೇ ಅಲ್ಲಿಗೆ ಹರಿದುಬರುತ್ತದೆ. ಚಕ್ರಗಳ ಮೇಲೆಯೇ ರಥವನ್ನು ತಿರುಗಿಸಬಹುದಾದ, ಆರು ಚಕ್ರಗಳ, ರಾಮಾಯಣ ಮಹಾಭಾರತ ಭಾಗವತಗಳ ಸನ್ನಿವೇಶಗಳ ಕಲಾತ್ಮಕ ಕೆತ್ತನೆಗಳಿಂದೊಡಗೂಡಿದ ''ತಿರುಗಣೆ ತೇರು''ಎಂದು ಕರೆಯುವ ಭುವನಮನೋಹಕವಾದ ತೇರು ಅಲ್ಲಿದೆ. ಅಲ್ಲಿರುವ ''ಚಕ್ರತೀರ್ಥ''ವಂತೂ ೮ ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ, ೫ ಎಕರೆ ವಿಸ್ತೀರ್ಣಕ್ಕೆ ಶುದ್ಧವಾದ, ಜೀವಜಲವು ಶೇಖರವಾಗಿರುವ ಮಹಾಸರೋವರವೇ ಸರಿ. ಅಲ್ಲಿರುವ ಭೂತರಾಜನಂತೂ ಸ್ವಾಮಿಯ ಅಪ್ಪಣೆಯಂತೆ ಚೋರಬಾಧೆ, ರೋಗಬಾಧೆ, ಕೀಟಬಾಧೆ, ಭೂತಬಾಧೆ, ಮುಂತಾದ ಈತಿ ಬಾಧೆಗಳನ್ನೆಲ್ಲಾ ನಿವಾರಿಸಿಕೊಡುತ್ತಾನೆ.

**ಸಹಸ್ರಲಿಂಗಕ್ಷೇತ್ರ :** ಶಿರಸಿ ತಾಲ್ಲೂಕಿಗೇ ಸೇರಿದ, ಅಲ್ಲಿಂದ ೧೭ ಕಿ.ಮೀ. ದೂರದಲ್ಲಿರುವ, ಹುಲಡೋಳ ಎಂಬ ಗ್ರಾಮದ ವ್ಯಾಪ್ತಿಗೆ ಸೇರುವ, ಸಹಸ್ರಲಿಂಗಕ್ಷೇತ್ರವು ಶಾಲ್ಮಲಾ ನದಿಯ ಒಡಲಿನಲ್ಲಿಯೇ ಇರುವ ಬಯಲು ಆಲಯವಾಗಿದೆ. ಸದ್ಭಕ್ತರು ನದಿಯ ನಡುವಣ ಬಂಡೆಗಳ ಮೇಲೆಯೇ ಅಲ್ಲಲ್ಲಿ ಅನೇಕಾನೇಕ ಲಿಂಗಗಳನ್ನೂ ನಂದಿಗಳನ್ನೂ ಕಡೆಯಿಸಿದ್ದಾರೆ. ಶಿವರಾತ್ರಿಯಂದು ಪುಣ್ಯಸ್ನಾನ, ಪೂಜಾದಿಗಳು ನೆರವೇರುತ್ತದೆ.

**ಯಾಣ:** ಕುಮಟಾ ತಾಲ್ಲೂಕಿಗೆ ಸೇರಿದ ಯಾಣವು ಅಲ್ಲಿಂದ ೨೮ ಕಿ.ಮೀ.ಗಳ ದೂರದಲ್ಲಿದೆ. ಅಲ್ಲಿರುವ ಭೈರವೇಶ್ವರ ಪರ್ವತವು ಅಪೂರ್ವ ಶಿಲಾವಿನ್ಯಾಸಗಳಿಂದ ಕೂಡಿದ್ದು ಭೂಲೋಕದ ವಿಸ್ಮಯಗಳಲ್ಲೊಂದಾಗಿದೆ. ಅದರ ಸ್ವರೂಪವನ್ನು ನೋಡಿ ತಿಳಿಯಬೇಕೇ ಹೊರತು ಬಣ್ಣಿಸುವದು ಸಾಧ್ಯವಿಲ್ಲ. ಅದು ಪಾರ್ವತೀಶಿಖರ, ಭೈರವೇಶ್ವರಶಿಖರ ಮತ್ತು ಸಹ್ಯರಾಜಶಿಖರಗಳೆಂಬ ೩ ಪ್ರಧಾನ ಶಿಖರಗಳಿಂದಲೂ, ೬೧ ಉಪಶಿಖರಗಳಿಂದಲೂ ೪೭ ತೀರ್ಥಗಳಿಂದಲೂ ಕೂಡಿದ್ದು, ೧೬ ಕಿ.ಮೀ.ಗಳಷ್ಟು ದಾರಿಯನ್ನು ಒಳಗೊಳಗೇ ಸುತ್ತಾಡಿ ನೋಡಬಲ್ಲವರು ಎಂಟೆದೆಯ ಬಂಟರೇ ಆಗಿರಬೇಕು. ಆದ್ದರಿಂದಲೇ ''ರೊಕ್ಕ ಇದ್ದರೆ ಗೋಕರ್ಣ, ಸೊಕ್ಕು ಇದ್ದರೆ ಯಾಣ'' ಎಂಬ ಗಾದೆಯೇ ಹುಟ್ಟಿಕೊಂಡಿದೆ.

''ನಾನು ಯಾರ ತಲೆಯಮೇಲೆ ಕೈಯಿಟ್ಟರೂ ಅವರು ಭಸ್ಮವಾಗಬೇಕು'' ಎಂಬ ವರವನ್ನು ಶಿವನಿಂದ ಪಡೆದ ಭಸ್ಮಾಸುರನು ಶಿವನ ತಲೆಯಮೇಲೆಯೆ ಕೈ ಇಡಲು ಹೋದಾಗ ಶಿವನು ಓಟಕಿತ್ತನು. ಭಸ್ಮಾಸುರನೂ ಬೆನ್ನಟ್ಟಿದನು. ಆಗ ವಿಷ್ಣುವು ಮೋಹಿನಿಯಾಗಿ ಅಲ್ಲಿ ತೋರಿಕೊಂಡು, ಭಸ್ಮಾಸುರನು ತಾನೆ ತನ್ನ ತಲೆಯ ಮೇಲೆ ಕೈಯಿಟ್ಟುಕೊಳ್ಳುವಂತೆ ಮಾಡಿ ಭಸ್ಮೀಭೂತಗೊಳಿಸಿದನು. ಅದೇ ಕಾರಣವಾಗಿ ಆ ಪರ್ವತದಲ್ಲಿ ಸುಟ್ಟು ಕರುಕಲಾದ, ಮತ್ತೆಲ್ಲೂ ಕಾಣಲಾಗದ, ಬೂದಿಮಣ್ಣು ಹರಡಿಕೊಂಡಿದೆ. ಅಲ್ಲಿ ಭೈರವೇಶ್ವರ ಶಿಖರವೇ ಪ್ರಧಾನವಾದುದು. ಅದರೊಳಗಿರುವ ದೊಡ್ಡ ಗುಹೆಯೊಂದರ ಭಿತ್ತಿಯಲ್ಲಿ ಭೈರವೇಶ್ವರನೆಂಬ ಶಿವನ ಬಿಂಬವು ಮೂಡಿಕೊಂಡಿದೆ. ಅದರ ಜಟಾಭಾಗದಿಂದ 'ಜಟಾತೀರ್ಥ'ವೆನ್ನುವ ಜಲಧಾರೆಯು ಸದಾಕಾಲ ಇಳಿದುಬರುತ್ತದೆ. ಆ ಪುಣ್ಯಜಲವು ರೋಗನಿವಾರಕವೆನಿಸಿದೆ. ಪಾರ್ವತೀಶಿಖರದ ಗುಹೆಯೂ ಸೇರಿದಂತೆ ಹಲವು ಗುಹೆಗಳೂ ಕಣಿವೆಗಳೂ ಕೊರಕಲುಗಳೂ ಅಲ್ಲಿವೆ. ಯಾಣವನ್ನು ನೋಡಿದಾಗ ಡಿ.ವಿ.ಜಿ.ಯವರು ಹಾಡಿರುವಂತೆ ''ಏನು ಭೈರವಲೀಲೆ, ಏನು ವಿಸ್ಮಯಸೃಷ್ಟಿ, ಆ ವಿಶೇಷಕೆ ಮಣಿಯೋ ಮಂಕುತಿಮ್ಮ'' ಎಂದು ನಾವೂ ಶರಣಾಗತರಾಗಲೇಬೇಕು!

**ಬನವಾಸಿ:** ಶಿರಸಿ ತಾಲ್ಲೂಕಿಗೆ ಸೇರಿದ ಬನವಾಸಿಯು ಅಲ್ಲಿಂದ ೨೨ ಕಿ.ಮೀ.ಗಳ ದೂರದಲ್ಲಿ ವರದಾನದಿಯ ದಡದಲ್ಲಿರುವ ಪುರಾತನ ಪುಣ್ಯಕ್ಷೇತ್ರವಾಗಿದೆ. ಮಧುಕೇಶ್ವರ ದೇವಾಲಯದಿಂದಾಗಿ ಬನವಾಸಿಗೆ ಪ್ರಾಶಸ್ತ್ಯ ಬಂದಿದೆ. ಮಧುಕೈಟಭರೆಂಬ ಪುರಾಣಯುಗದ ರಕ್ಕಸರು ಆ ಲಿಂಗವನ್ನು ಸ್ಥಾಪಿಸಿದ್ದರಿಂದ ಮಧುವಿನ ಹೆಸರು ಆ ಲಿಂಗಕ್ಕೆ ಬಂದಿತು. ಆದರೆ ಮುಂದಕ್ಕೆ ಆ ರಕ್ಕಸರು ಲೋಕಕಂಟಕರಾಗಿ ಮಹಾವಿಷ್ಣುವು ಅಲ್ಲಿಯೇ ಅವರನ್ನು ಸಂಹರಿಸಿದನೆಂದು ಪುರಾಣದಲ್ಲಿದೆ. ಶಿಲ್ಪಕಲಾಕೌಶಲದಿಂದ ಮೆರೆಯುತ್ತಿರುವ ಆ ಗುಡಿಯಲ್ಲಿ ಏಕಶಿಲಾಮಂಚವೊಂದು ನೋಡತಕ್ಕದ್ದಾಗಿದೆ. ಕನ್ನಡ ವಚನ ಸಾಹಿತ್ಯದ ಅಧ್ವರ್ಯರ್ಗಳಾದ ಅಲ್ಲಮಪ್ರಭು ಮತ್ತು ಬಸವಣ್ಣನವರ ಗುಡಿಗಳಿವೆ. ಹಿರಿಮಠ, ಚಿಕ್ಕಮಠ, ಹೊಳೆಮಠ, ಚಾಬೀಮಠ ಮತ್ತು ಹಾಲುಮಠಗಳೆಂಬ ಪಂಚ ವೀರಶೈವ ಮಠಗಳಿವೆ.

**ಉಳವಿ:** ಸೂಪಾ ತಾಲ್ಲೂಕಿಗೆ ಸೇರುವ ಉಳವಿಯು ಚೆನ್ನಬಸವಣ್ಣನವರೆಂಬ ಮಹಾತ್ಮರ ಐಕ್ಯಭೂಮಿಯಾಗಿ ಪವಿತ್ರಕ್ಷೇತ್ರವಾಗಿದೆ. ಕಲ್ಯಾಣಕ್ರಾಂತಿಯ ಹೊತ್ತಿನಲ್ಲಿ ವಚನ ಸಾಹಿತ್ಯವನ್ನು ಸಂರಕ್ಷಿಸುವ ಸಲುವಾಗಿ, ಅದನ್ನೆಲ್ಲಾ ಬೆನ್ನಿಗೆ ಕಟ್ಟಿಕೊಂಡು ಅಶ್ವಾರೋಹಿಗಳಾಗಿ ತಮ್ಮ ಆಪ್ತರೊಡನೆ ಗೊಂಡಾರಣ್ಯದ ನಡುವಣ ಉಳವಿಯನ್ನು ಸೇರಿದರು. ಅಲ್ಲಿಯೇ ಧರ್ಮಪ್ರಚಾರಮಾಡುತ್ತಾ ಶಿವೈಕ್ಯರಾದರು. ಚೆನ್ನಬಸವಣ್ಣನವರ ದೊಡ್ಡದಾದ ದೇವಾಲಯವಿದ್ದು ವರ್ಷಪೂರ್ತಿ ಯಾತ್ರಿಕರು ಬರುತ್ತಲೇ ಇರುತ್ತಾರೆ. ಸುತ್ತಲೂ ಭಕ್ತರಿಗಾಗಿ ಕುಟೀರಗಳಿವೆ. ಶಿವರಾತ್ರಿಯಂದು ಬಹುದೊಡ್ಡ ರಥೋತ್ಸವ ಜರುಗುತ್ತದೆ.

ಉಳವಿಯು ಗುಹೆಗಳ, ತೀರ್ಥಗಳ ರೋಮಾಂಚನಕಾರಿಯಾದ ಕ್ಷೇತ್ರವಾಗಿ ರಾರಾಜಿಸುತ್ತಿದೆ.

**ಕವಳಗುಹಾಲಯ:** ಹಳಿಯಾಳ ತಾಲ್ಲೂಕಿನ ಕವಳಗುಹಾಲಯವು ಅಲ್ಲಿಂದ ೨೦ ಕಿ.ಮೀ. ದೂರದಲ್ಲಿ ಎತ್ತರವಾದ ಪರ್ವತ ಶ್ರೇಣಿಯ ಏಣಿನಲ್ಲಿ ನೆಲೆಗೊಂಡಿರುವ ರುದ್ರಭಯಂಕರ ತೀರ್ಥವಾಗಿದೆ. ಎಚ್ಚರದಿಂದ ತೆವಳಿಕೊಂಡು ಒಳಕ್ಕೆ ಹೋದ ಬಳಿಕ ಹಜಾರದಂತಹ ಸ್ಥಳದಲ್ಲಿ ತೀರ್ಥವಿದೆ ಮತ್ತು ಕವಳೆಲಿಂಗ ಎಂಬ ಶಿವಲಿಂಗವಿದೆ. ಶನಿಯ ಕಾಟದಿಂದ ತಪ್ಪಿಸಿಕೊಳ್ಳಲು ಶಿವನು ಸ್ವಲ್ಪಕಾಲ ಈ ಗವಿಯೊಳಗೆ ಅಡಗಿಕೊಂಡಿದ್ದನು.

**ಚಿಗಳ್ಳಿ:** ಮುಂಡಗೋಡ ತಾಲ್ಲೂಕಿನ ಚಿಗಳ್ಳಿಯ ವಿಸ್ಮಯ ಹೇಳತಿರದು. ೧೯೭೪ರಲ್ಲಿ ಶಾರದಮ್ಮ ಎಂಬ ಸಾಧ್ವಿಯು ಬೆಳಗಿಸಿದ ೩ ಸೀಮೇಎಣ್ಣೆಯ ಲಾಟೀನು ದೀಪಗಳು ಎಣ್ಣೆಯಿಲ್ಲದೆ, ಬತ್ತಿಯಿಲ್ಲದೆ ನಂದಾದೀಪದಂತೆ ಉರಿಯುತ್ತಲೇ ಇದೆ. ಅಲ್ಲೊಂದು ಸರೋವರವೂ ಇದ್ದು ಅದೊಂದು ತೀರ್ಥವಾಗಿದೆ. ಹಲವರ ಪರೀಕ್ಷೆಗೂ ಅದು ಒಳಗಾಗಿದೆ.

**ಮುರ್ಡೇಶ್ವರ:** ಮುರ್ಡೇಶ್ವರವು ಭಟ್ಕಳ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೧೫ ಕಿ.ಮೀ.ಗಳ ದೂರದಲ್ಲಿರುವ ಸಮುದ್ರತೀರದ ಮಹೋಜ್ವಲವಾದ ಪುಣ್ಯತೀರ್ಥವಾಗಿದೆ. ಶಿವನು ಅಲ್ಲಿ ಮುರ್ಡೇಶ್ವರನೆಂಬ ನಾಮದಿಂದಲೇ ಪ್ರಸಿದ್ಧನಾಗಿದ್ದಾನೆ. ಅದೊಂದು ಪುರಾತನ ಪುಣ್ಯತೀರ್ಥವಾಗಿದ್ದು ಇತ್ತೀಚೆಗೆ ನಿರೀಕ್ಷೆಗೆ ಮೀರಿದಷ್ಟು ಅದ್ಭುತವಾಗಿ ಜೀರ್ಣೋದ್ಧಾರಗೊಂಡು ಇಡೀ ಜಗತ್ತಿನ ಕಣ್ಣುಗಳನ್ನೇ ಕೋರೈಸುವಂತೆ ಮಾಡಿದೆ.

ಶಿವನ ಆತ್ಮಲಿಂಗವು ರಾವಣನಿಗೆ ದಕ್ಕದೆ ಗೋಕರ್ಣದಲ್ಲಿ ನೆಟ್ಟು ನಿಂತಿತು. ಆಗ ರಾವಣನು ಕ್ರೋಧಪರವಶನಾಗಿ ತನ್ನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಕೀಳಲು ಯತ್ನಿಸಿದನು. ಅವನ ರಭಸಕ್ಕೆ ಲಿಂಗದ ಮೇಲ್ಭಾಗವು ನಾಲ್ಕು ಚೂರಾಗಿ ಅವನ ಕೈಗೆ ಬಂದಿತು. ದಿಕ್ಕೆಟ್ಟ ರಾವಣನು ಗೋಕರ್ಣದಿಂದಲೇ ಆ ಚೂರುಗಳನ್ನು ದಿಕ್ಕಾಪಾಲಾಗಿ ಬೀಸಿ ಎಸೆದನು. ಆ ಚೂರುಗಳು ಮುರ್ಡೇಶ್ವರ, ಧಾರೇಶ್ವರ, ಗುಣವಂತೆ, ಕಾರವಾರಗಳಿಗೆ ಹೋಗಿ ಬಿದ್ದುವು. ಮುರ್ಡೇಶ್ವರಕ್ಕೆ ಬಿದ್ದ ಲಿಂಗ ಖಂಡವನ್ನು ಕಂಡ ಸಪ್ತಋಷಿಗಳು ಓಡೋಡಿ ಬಂದು ಸ್ಥಾಪಿಸಿ ಪೂಜಿಸಿದರು. ಗೋಕರ್ಣವೂ ಸೇರಿದಂತೆ ಉತ್ತರ ಕನ್ನಡದಲ್ಲಿ ಐದು ಆತ್ಮಲಿಂಗ ಕ್ಷೇತ್ರಗಳಾದುವು.

ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಮುರ್ಡೇಶ್ವರನಿದ್ದಾನೆ. ಅಲ್ಲಿಯೇ ಬೇರೊಂದು ಗುಡಿಯಲ್ಲಿ ಪಾರ್ವತಿದೇವಿಯಿದ್ದಾಳೆ. ಹಾಗೆಯೇ ಬಿಡಿಬಿಡಿಯಾದ ಗುಡಿಗಳಲ್ಲಿ ಗಣಪತಿ, ದತ್ತಾತ್ರೇಯ, ಹನುಮಂತದೇವರು, ಸುಬ್ರಹ್ಮಣ್ಯರಿದ್ದಾರೆ. ಆ ಕ್ಷೇತ್ರದಲ್ಲಿ ಇನ್ನೂ ಇತ್ತೀಚೆಗೆ ಸ್ಥಾಪಿಸಿರುವ ೧೨೩ ಅಡಿ ಎತ್ತರದ ಗಗನಚುಂಬಿಯಾದ ಶಿವನ ಮನಮೋಹಕವಾದ ಮೂರ್ತಿಯಿದೆ. ೨೦ ಅಂತಸ್ತುಗಳ ದಿವ್ಯಗೋಪುರವಿದೆ. ಅದೆಲ್ಲವೂ ಭಗವಂತನ ವಿಭೂತಿಯಲ್ಲದೆ ಬೇರೆಯಲ್ಲ. ರಥೋತ್ಸವ, ತೆಪ್ಪೋತ್ಸವಗಳು ವಿಧಿಪೂರ್ವಕವಾಗಿ ನೆರವೇರುತ್ತದೆ. ಚಿತ್ತಾಹಾರಿಯಾದ ಪುಷ್ಕರಿಣಿಯೇನು; ಭೀಮತೀರ್ಥ, ಕಾಕತೀರ್ಥ, ಜಟಾಯುತೀರ್ಥ, ಕುಂಭತೀರ್ಥಾದಿ ಪುಣ್ಯತೀರ್ಥಗಳೇನು–ಎಲ್ಲವೂ ಮುರ್ಡೇಶ್ವರವನ್ನು ಮಹಾಕ್ಷೇತ್ರವನ್ನಾಗಿಸಿವೆ.

**ರಾಮತೀರ್ಥ:** ರಾಮತೀರ್ಥವು ಹೊನ್ನಾವರ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩ ಕಿ.ಮೀ. ದೂರದಲ್ಲಿ ಶ್ರೀರಾಮನಿಂದ ಪ್ರತಿಷ್ಠಿಸಿ ಪೂಜಿಸಲ್ಪಟ್ಟ ರಾಮಲಿಂಗೇಶ್ವರ ತೀರ್ಥ ಸಹಿತವಾಗಿದೆ. ರಾಮತೀರ್ಥ, ಲಕ್ಷ್ಮಣತೀರ್ಥ ಎಂಬೆರಡು ರಸಧಾರೆಗಳು ಗುಡ್ಡದ ಒಡಲಿನಿಂದ ಚಿಕ್ಕಜಲಪಾತದಂತೆ ಧುಮಿಕ್ಕುತ್ತಾ ಪುಣ್ಯಸ್ನಾನಕ್ಕೆ ಅನುವುಮಾಡಿಕೊಟ್ಟಿವೆ.

**ಸೋಂದಾ:** ಶಿರಸಿ ತಾಲ್ಲೂಕಿಗೆ ಸೇರಿದ ಸೋಂದಾತೀರ್ಥವು ಅಲ್ಲಿಂದ ೧೬ ಕಿ.ಮೀ. ದೂರದಲ್ಲಿದೆ. ಅಲ್ಲಿ ಶಾಂಕರ ಪರಂಪರೆಗೆ ಸೇರಿದ ಸ್ವರ್ಣವಲ್ಲೀಮಠ ಮತ್ತು ಮಾಧ್ವಪರಂಪರೆಗೆ ಸೇರಿದ ವಾದಿರಾಜಮಠ ಎಂಬ ಎರಡೂ ಕ್ಷೇತ್ರಗಳಿವೆ. ಸ್ವರ್ಣವಲ್ಲೀಮಠದಲ್ಲಿ ಪೀಠಪರಂಪರೆಯೊಂದು ನಡೆದು ಬಂದಿದ್ದು ತನ್ನ ಸಮಾಜಮುಖಿಯಾದ ಕಾರ್ಯಚಟುವಟಿಕೆಗಳಿಂದ ಜನಪ್ರಿಯವಾಗಿದೆ. ವಾದಿರಾಜ ಮಠದಲ್ಲಿ ವಾದಿರಾಜರು ಸಶರೀರ ಸಮಾಧಿಯನ್ನು ಪಡೆದ ವೃಂದಾವನವಿದೆ. ಅದು ಮಧ್ವರಿಂದ ಪ್ರಚಲಿತಗೊಂಡ ಉಡುಪಿಯ ಅಷ್ಟಮಠಗಳಲ್ಲಿ ಒಂದಾಗಿದೆ. ಸಮೀಪದ ಶಾಲ್ಮಲಾನದಿಯ ಹರಿವಿನಲ್ಲಿ ಅವರು ತಪಸ್ಸುಮಾಡಿದ 'ತಪೋವನ' ಎಂದು ಗುರುತಿಸುವ ಪುಣ್ಯತಾಣವೊಂದಿದ್ದು, ಅಲ್ಲಿ ಹಯಗ್ರೀವದೇವರನ್ನೂ ವಾದಿರಾಜರ ಪಾದಚಿಹ್ನೆಗಳನ್ನೂ ಕಡೆದಿದ್ದಾರೆ. ಸೋಂದಾದಲ್ಲಿ ಜೈನಬಸದಿ ಮತ್ತು ವೀರಶೈವಮಠಗಳೂ ಇವೆ. ಊರಿನಲ್ಲಿ ಹಲವು ದೇವಾಲಯಗಳಿದ್ದು ಆ ಪೈಕಿ ಶಂಕರನಾರಾಯಣಗುಡಿಯಲ್ಲಿ ಶಂಕರ ಮತ್ತು ನಾರಾಯಣರಿಬ್ಬರೂ ಅಕ್ಕಪಕ್ಕದ ಗರ್ಭಗುಡಿಗಳಲ್ಲೇ ಪೂಜಿತರಾಗುತ್ತಾ ಸಮನ್ವಯಭಕ್ತಿಯನ್ನು ಸಾರುತ್ತಿದ್ದಾರೆ.

**ಕಾರವಾರ:** ಜಿಲ್ಲೆಯ ರಾಜಧಾನಿಯಾದ ಕಾರವಾರವು ಸಮುದ್ರತೀರದ ಬಂದರು ಪಟ್ಟಣ. ಆ ಪಟ್ಟಣವನ್ನು ವಿಶ್ವಕವಿ ರವೀಂದ್ರನಾಥ ಠಾಕೂರರು 'ಅನಂತ ಸೌಂದರ್ಯದ ಸಾಕಾರರೂಪ'ವೆಂದು ಬಣ್ಣಿಸಿದ್ದಾರೆ. ಪಟ್ಟಣಕ್ಕೆ ಸಮಿಪದ ಕಾಳೀನದಿಯ ತೀರದ ಸದಾಶಿವಗಡ ಮತ್ತು ಸಮುದ್ರಮಧ್ಯದ ಕೂರ್ಮಗಡಗಳು ಕ್ರಮವಾಗಿ ದುರ್ಗಾಭವಾನಿ ಮತ್ತು ನರಸಿಂಹದೇವರುಗಳ ಅತ್ಯದ್ಭುತ ಪುಣ್ಯತೀರ್ಥಗಳಾಗಿವೆ.

## ದಕ್ಷಿಣ ಕನ್ನಡ

**ಮಂಗಳೂರು:** 'ಪರಶುರಾಮಸೃಷ್ಟಿ' ಎನಿಸಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳು ಸಮುದ್ರತೀರವನ್ನೊಳಗೊಂಡಿದ್ದು, ಕನ್ನಡದ ಜೊತೆಗೆ 'ತುಳು' ಭಾಷೆಯನ್ನೂ ಬಳಸುತ್ತಿದ್ದು ತುಳುನಾಡು ಎಂದು ಖ್ಯಾತವಾಗಿವೆ. ಮಹಾವಿಷ್ಣುವಿನ ೬ನೆಯ ಅವತಾರಿಯಾದ ಪರಶುರಾಮ ದೇವನು ಕೊಡಚಾದ್ರಿ ಶಿಖರದಮೇಲೆ ನಿಂತು ತನ್ನ ಕೊಡಲಿಯನ್ನು ಸಮುದ್ರರಾಜನ ಮೇಲೆ ಬೀಸಿ ಎಸೆದನು. ಮೊದಲೇ ಒಪ್ಪಂದವಾಗಿದ್ದಂತೆ, ಕೊಡಲಿಯು ಕ್ರಮಿಸಿದಷ್ಟು ಜಾಗವನ್ನೆಲ್ಲಾ ತೆರವು ಮಾಡಿಕೊಟ್ಟು ಸಮುದ್ರರಾಜನು ಹಿಂದಕ್ಕೆ ಸರಿದು ಬಿಟ್ಟನು. ಮಂಗಳೂರಿನಿಂದ ಗೋಕರ್ಣದವರೆಗೂ ಹಬ್ಬಿದಂತೆ ಅದು ಪರಶುರಾಮಕ್ಷೇತ್ರವೆನಿಸಿತು.

ಜಿಲ್ಲೆಯ ಮುಖ್ಯಪಟ್ಟಣವಾದ ಮಂಗಳೂರು ನಗರವು ಮಂಗಳಾದೇವಿಯೆಂಬ ನಗರದೇವತೆಯ ದೇವಾಲಯದಿಂದ ಕೂಡಿದ್ದು, ಆ

ಹೆಸರಿಗೆ ಪಾತ್ರವಾಗಿದೆ. ಕದ್ರಿಗುಡ್ಡವೆಂಬುದು ಅಲ್ಲಿನ ಪುರಾತನ ಪುಣ್ಯತೀರ್ಥವಾಗಿದೆ. ಗುಡ್ಡದ ಪಾದದಲ್ಲಿ ಮಂಜುನಾಥೇಶ್ವರನೆಂಬ ಶಿವನ ದೇವಾಲಯವಿದೆ. ಅದರ ಎದುರಿನಲ್ಲಿ ಜೀವಜಲದ ೯ ತೀರ್ಥಕೆರೆಗಳಿವೆ. ಸಪ್ತಕೋಟಿ ಮಹಾಮಂತ್ರಗಳೇ ಶಿವನ ಸೇವೆಗಾಗಿ ಆ ತೀರ್ಥಕೆರೆಗಳಲ್ಲಿ ನೆಲೆಸಿವೆಯೆಂದು ಜ್ಞಾನಿಗಳು ಹೇಳಿದ್ದಾರೆ. ಸುಮಾರು ೩೫ ಎತ್ತರದ ಭರ್ಜರಿಯಾದ ಲೋಹದ ದೀಪಸ್ತಂಭ ವೊಂದು ಅಲ್ಲಿದೆ ಕೆಳಗಿನಿಂದ ಮೇಲಿನವರೆಗೆ ವೃತ್ತಾಕಾರವಾಗಿರುವ ಸಾಲುಗಳಲ್ಲಿ ದೀಪಗಳನ್ನು ಬೆಳಗಿಸುತ್ತಾರೆ. ಮಕರಸಂಕ್ರಮಣ ಕಾಲ ದಲ್ಲಿ ೯ ದಿನಗಳ ದೊಡ್ಡದಾದ ಜಾತ್ರೆ ನಡೆಯುತ್ತದೆ. ಕದ್ರಿಗುಡ್ಡ ದಲ್ಲಿಯೇ ಉತ್ತರಪ್ರದೇಶದ ಹರಿದ್ವಾರದಲ್ಲಿ ಕೇಂದ್ರವನ್ನುಳ್ಳ ''ನಾಥ ಪಂಥ''ದ ಮಠವೊಂದಿದೆ. ಭಾರತದ ವಿವಿಧ ಭಾಗಗಳಲ್ಲಿ ಆ ಪಂಥದ ಅನೇಕ ಮಠಗಳಿವೆ. ೧೨ ವರ್ಷಗಳಿಗೊಮ್ಮೆ ಆ ಮಠಾ ಧೀಶರನ್ನು ಬದಲಾಯಿಸಿ, ಮತ್ತೊಬ್ಬರಿಗೆ ಪಟ್ಟಾಭಿಷೇಕ ಮಾಡುವ ಮಹೋತ್ಸವವೊಂದು ನಡೆಯುತ್ತದೆ. ಮಹಾರಾಷ್ಟ್ರದ ನಾಸಿಕದ ತ್ರ್ಯಂಬಕೇಶ್ವರ ದಿಂದ 'ಝುಂಡಿ' ಎಂದು ಕರೆಯುವ ಸಂನ್ಯಾಸಿಗಳ ಮಹಾ ಮೆರವಣಿಗೆಯೊಂದು ಹೊರಟು, ಪಾದಯಾತ್ರೆಯಲ್ಲಿಯೇ ಆ ಮಠಗಳ ಮೂಲಕ ಸಂಚರಿಸುತ್ತದೆ. ಶ್ವಾನವನ್ನು ಕಾಲಭೈರವ ನೆನ್ನುತ್ತಾರಾಗಿ ಅದು ಝುಂಡಿಯ ಮುಂಚೂಣಿಯಲ್ಲಿರುತ್ತದೆ. ಸಾವಿ ರಾರು ಕಿ.ಮೀ.ಗಳನ್ನು ಕಾಲ್ನಡಿಗೆಯಲ್ಲಿಯೇ ಕ್ರಮಿಸಿ ಅದು ಕದ್ರಿ ಗುಡ್ಡಕ್ಕೂ ಬಂದು, ಅಲ್ಲಿ ಭವ್ಯವಾದ ಪಟ್ಟಾಭಿಷೇಕ ನಡೆಯುತ್ತದೆ.

**ಉಪ್ಪಿನಂಗಡಿ:** ಪುತ್ತೂರು ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೧೨ ಕಿ.ಮೀ. ದೂರದಲ್ಲಿ ''ಗಯಾಪದಕ್ಷೇತ್ರ''ವೆನಿಸಿದ ಉಪ್ಪಿನಂಗಡಿ ಯಿದೆ. ನೇತ್ರಾವತಿ, ಕುಮಾರಧಾರಾ ಮತ್ತು ಗುಪ್ತಗಾಮಿನಿ ಸರಸ್ವತಿ ನದಿಯ ತ್ರಿವೇಣಿ ಸಂಗಮವಾಗಿ ಅದು ಹೆಚ್ಚಿನ ಪೂಜ್ಯತೆಗೂ ಮಾಹಾತ್ಮ್ಯಕ್ಕೂ ಪಾತ್ರವಾಗಿದೆ. ಸಹಸ್ರಲಿಂಗೇಶ್ವರನೆಂಬ ಶಿವನ ಆಲ ಯವೂ ಸಂಗಮದ ತೀರದಲ್ಲಿದೆ. ಪಿತೃಕಾರ್ಯಗಳಿಗೆ ಹೇಳಿಮಾಡಿ ಸಿದ ತಾಣವಾಗಿದ್ದು, ಅದಕ್ಕೆಂದೇ ತಕ್ಕ ಏರ್ಪಾಡುಗಳಿವೆ. 'ಮಖೆ ಕೂಟ' ಎಂದು ಕರೆಯುವ ಮೂರು ವಾರ್ಷಿಕ ತೀರ್ಥಸ್ನಾನ ಜಾತ್ರೆ ಗಳು ಅಲ್ಲಿ ನಡೆಯುತ್ತವೆ.

**ಪೊಳಲಿ:** ಬಂಟ್ವಾಳ ತಾಲ್ಲೂಕಿಗೆ ಸೇರುವ ಪೊಳಲಿಯು ಕರಿಯಂ ಗಳ ಎಂಬ ಗ್ರಾಮಕ್ಕೆ ಸೇರಿದ ಆಲಯಾಶ್ರಿತ ಉಪಗ್ರಾಮವಾಗಿದ್ದು, ಬಂಟ್ವಾಳದಿಂದ ೧೨ ಕಿ.ಮೀ.ಗಳ ದೂರದಲ್ಲಿ ಫಲ್ಗುಣೀನದಿಯ ತೀರದಲ್ಲಿರುವ ಅಪೂರ್ವ ಪುಣ್ಯಕ್ಷೇತ್ರವಾಗಿದೆ. ರಾಜರಾಜೇಶ್ವರಿಯ ದೇವಾಲಯವೇ ಅಲ್ಲಿನ ಆಕರ್ಷಣೆಯ ಕೇಂದ್ರಬಿಂದುವಾಗಿದೆ. ಅಲ್ಲಿರುವ ಗರ್ಭಗುಡಿ ವಿಶಾಲವಾಗಿದ್ದು, ದೇವತಾಮೂರ್ತಿಗಳ ಒಂದು ಗ್ಯಾಲರಿಯೋ ಎಂಬಂತಿದ್ದು ೨೦ಕ್ಕೂ ಹೆಚ್ಚು ಮೂರ್ತಿ ಗಳಿವೆ. ಸುಮಾರು ೧೦ ಅಡಿ ಎತ್ತರದ ಕುಳಿತಭಂಗಿಯ ಭವ್ಯಾ ಕಾರದ ರಾಜರಾಜೇಶ್ವರಿಯೇ ಅಲ್ಲಿನ ಅಧಿಷ್ಠಾತ್ರಿಯಾಗಿದ್ದಾಳೆ. ಗಣ ಪತಿ, ಸುಬ್ರಹ್ಮಣ್ಯರು ಅಕ್ಕಪಕ್ಕದಲ್ಲಿದ್ದಾರೆ. ಅಲ್ಲಿನ ಕೆಲವು ಮೂರ್ತಿ ಗಳು ಸೌಮ್ಯವಾದರೆ ಮತ್ತೆ ಕೆಲವು ಅಕರಾಳವಿಕರಾಳವಾಗಿದ್ದು ಭಯಾನಕ ರಸದಲ್ಲಿ ನಮ್ಮನ್ನು ಅಟ್ಟುತ್ತವೆ. ಇಲ್ಲಿನ ಸೋಜಿಗವೆಂದರೆ ದೇವಿಯದೇ ಆದಿಯಾಗಿ ಎಲ್ಲ ಮೂರ್ತಿಗಳೂ ವಿಶೇಷವಾಗಿ ಮಣ್ಣಿ ನಿಂದ ೧೨೦೦ ವರ್ಷಗಳಷ್ಟು ಹಿಂದೆ ಮಾಡಿರುವ ಬಣ್ಣ ತುಂಬಿ ಸಿರುವ ಮೂರ್ತಿಗಳಾಗಿವೆ. ಅಭಿಷೇಕಾದಿಗಳನ್ನು ಆ ಮೂರ್ತಿಗಳ ಪ್ರತಿರೂಪವಾದ ಲೋಹಮೂರ್ತಿಗಳಿಗೆ ಸಲ್ಲಿಸುತ್ತಾರೆ.

ವಾರ್ಷಿಕ ರಥೋತ್ಸವವು ರಾಜರಾಜೇಶ್ವರಿಯ ಪರವಾಗಿ ಸುಬ್ರ ಹ್ಮಣ್ಯನಿಗೆ ಸಲ್ಲುವುದು ಅಲ್ಲಿನ ಮತ್ತೊಂದು ವಿಶೇಷ. ಆ ಕಾಲದಲ್ಲಿ ಗುಡಿಯ ಎದುರಿನ ಬಯಲಿನಲ್ಲಿ 'ಪೊಳಲಿಚೆಂಡು'' ಎಂದು ಖ್ಯಾತ ವಾಗಿರುವ ಕಾಲುಚೆಂಡಾಟ ಮಗದೊಂದು ವಿಶೇಷ. ದೇವಿಯು ಚಂಡ ಮುಂಡಾಸುರರ ತಲೆಗಳನ್ನು ಚೆಂಡಾಡಿದಳೆಂಬ ಸಂಕೇತವಾಗಿ ಅದು ನಡೆಯುತ್ತದೆ. ಅದರ ವೈಭವವನ್ನು ಬಣ್ಣಿಸಲು 'ಪೊಳಲಿ ಚೆಂಡು ಊರೆಲ್ಲಾ ದಂಡು' ಎಂಬ ಗಾದೆಯೇ ಹುಟ್ಟಿಕೊಂಡಿದೆ. ಈ ಪರಿಯ ಮೃಣ್ಮಯಮೂರ್ತಿ ದೇವಾಲಯವು ಮತ್ತೆಲ್ಲಿಯೂ ಇಲ್ಲ.

**ಧರ್ಮಸ್ಥಳ:** ಬೆಳ್ತಂಗಡಿ ತಾಲ್ಲೂಕಿಗೆ ಸೇರುವ ಧರ್ಮಸ್ಥಳವು ಆಲಯಾಶ್ರಿತ ಗ್ರಾಮವಾಗಿದ್ದು, ಅಲ್ಲಿಂದ ೧೬ ಕಿ.ಮೀ. ದೂರದಲ್ಲಿ ನೇತ್ರಾವತಿನದಿಗೆ ಹೊಂದಿಕೊಂಡಂತಿದ್ದು ಕರ್ನಾಟಕದ ಬಹುದೊಡ್ಡ ಪುಣ್ಯತೀರ್ಥವಾಗಿದೆ. ಮಂಜುನಾಥನೆಂಬ ಶಿವನ ದೇವಾಲಯ ವಿದೆ. ಗಣಪತಿ ಮತ್ತು ಅಮ್ಮನವರೂ ಇದ್ದಾರೆ. ಉಗ್ರಪ್ರತಾಪಿ ಯಾದ ಅಣ್ಣಪ್ಪಸ್ವಾಮಿಯು ಅಲ್ಲಿನ ರಕ್ಷಕದೈವನಾಗಿದ್ದಾನೆ. ''ಮಾತ ನಾಡುವ ಮಂಜುನಾಥ'' ಎಂದೇ ಕೊಂಡಾಡಲ್ಪಡುವ, 'ಖಾವಂ ದರು' ಎಂದು ಹೇಳುವ, ಧರ್ಮಾಧಿಕಾರಿಗಳ ಒಡೆತನದಲ್ಲಿ ಆ ಕ್ಷೇತ್ರವಿದೆ. ಅಲ್ಲಿ ನಿತ್ಯವೂ ಯಾತ್ರೆ, ನಿತ್ಯವೂ ಜಾತ್ರೆ. ಮುಡಿಯೊಪ್ಪಿ ಸುವ ಹರಕೆಗೆ ತುಂಬಾ ಪ್ರಾಶಸ್ತ್ಯವಿದೆ. ಅದನ್ನು ಕನ್ನಡನಾಡಿನ ತಿರು ಪತಿ ಎಂದು ಹೇಳಿದರೂ ಒಪ್ಪುತ್ತದೆ. ಗುಡಿಯೊಳಗಿರುವ 'ಧರ್ಮ ಸಿಂಹಾಸನ'ದಲ್ಲಿ ಧರ್ಮಾಧಿಕಾರಿಗಳು ನಿತ್ಯವೂ ಕುಳಿತು ಭಕ್ತರನ್ನು ಆಶೀರ್ವದಿಸುವುದಲ್ಲದೆ, ಆಣೆ, ವಾಕ್ಯತೀರ್ಮಾನ ಮತ್ತು ಹೊಯ್ಲು ಎಂಬ ನ್ಯಾಯ ವಿತರಣೆಯನ್ನೂ ಮಾಡಿಕೊಡುತ್ತಾರೆ. ನಿತ್ಯವೂ ಅಲ್ಲಿ ಅನ್ನಸಂತರ್ಪಣೆಯ ಹೊಳೆಯೇ ಹರಿಯುತ್ತದೆ. ಸಮೃದ್ಧವಾದ ಭಕ್ತನಿವಾಸಗಳಿವೆ. 'ಮಂಜೂಷಾ' ಎಂಬ ಅಪೂರ್ವವಾದ ವಸ್ತು ಸಂಗ್ರಹಾಲಯವಿದೆ. ಶಿವರಾತ್ರಿ, ನವರಾತ್ರಿ , ಲಕ್ಷದೀಪೋತ್ಸವ, ಸರ್ವ ಧರ್ಮಸಮ್ಮೇಳನ, ರಥೋತ್ಸವ, ದೈವ ಮತ್ತು ಭೂತಗಳಿಗೆ ನೇಮ ಗಳು ಮೊದಲಾದ ವರ್ಣಮಯ ಪರ್ವಗಳು ಶಿಸ್ತಿನಿಂದ ಸಂಪನ್ನ ಗೊಳ್ಳುತ್ತವೆ. ೧೨ ವರ್ಷಗಳಿಗೊಮ್ಮೆ 'ಮಹಾ ನಡಾವಳಿ' ಎಂಬ ಮಹಾಪರ್ವವು ಜರಗುತ್ತದೆ. ಧರ್ಮಸ್ಥಳದಲ್ಲಿ ಎಲ್ಲವೂ ''ಆಕಾಶೋ ತ್ಪತ್ತಿ ಆಕಾಶಲಯ. ಶಿವನೇ ಕೊಡುತ್ತಾನೆ, ಶಿವನೇ ಉಣ್ಣುತ್ತಾನೆ. ಅಲ್ಲಿನ ಸಂಪತ್ತೆಂದರೆ ತಳವಿಲ್ಲದ ಬಾವಿ'' ಎಂದು ಹೇಳಬಹುದು. ಶಿಕ್ಷಣ, ಉದ್ಯೋಗ ತರಬೇತಿ, ದೇವಾಲಯಗಳ ಜೀರ್ಣೋದ್ಧಾರ, ಗ್ರಾಮೀಣ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ದೇವಸ್ಥಾನವು ಧರ್ಮ ಸಾಮ್ರಾಜ್ಯವೆನಿಸಿ ಭರತಖಂಡಕ್ಕೆ ಮಾದರಿಯಾಗಿ ನಿಲ್ಲುವಂತಹ ಸತ್ಕಾರ್ಯಗಳನ್ನೆಸಗುತ್ತಿದೆ.

ಧರ್ಮಸ್ಥಳವು ಒಂದು ಜೈನತೀರ್ಥವೂ ಆಗಿದ್ದು ಚಂದ್ರನಾಥ ಬಸದಿ ಮತ್ತು ೩೯ ಅಡಿ ಎತ್ತರದ ಏಕಶಿಲಾ ಗೊಮ್ಮಟೇಶ್ವರನ ವಿಗ್ರಹ ದಿಂದ ಭಕ್ತಿರಂಜಿತವಾಗಿದೆ.

**ಸುಬ್ರಹ್ಮಣ್ಯ:** ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರದ ಬಳಿ ಘಾಟಿಸುಬ್ರಹ್ಮಣ್ಯವಿದ್ದರೆ, ಇಲ್ಲಿ ತಾಲ್ಲೂಕು ಕೇಂದ್ರ ಸುಳ್ಯದಿಂದ

೪೪ ಕಿ.ಮೀ. ದೂರದಲ್ಲಿ ಕುಕ್ಕೆ ಸುಬ್ರಹ್ಮಣ್ಯ ಎಂದೂ ಕರೆಯುವ ಸುಬ್ರಹ್ಮಣ್ಯ ಕ್ಷೇತ್ರ ಕುಮಾರಧಾರಾ ನದಿಯ ತೀರದಲ್ಲಿದೆ. ಸ್ಕಾಂದ ಪುರಾಣದಲ್ಲಿ ಅದರ ಮಹಿಮಾನುವರ್ಣನೆಯಿದೆ. ಸ್ಕಂದ, ಕುಮಾರ ಸ್ವಾಮಿ ಎಂದು ಕರೆಯಲಾಗುವ ಸುಬ್ರಹ್ಮಣ್ಯನು ಅಲ್ಲಿ ಸರ್ಪರೂಪಿಯಾಗಿ ನೆಲೆಸಿದ್ದಾನೆ. ತಾರಕಾಸುರನೆಂಬ ರಕ್ಕಸನು ''ನನಗೆ ಮರಣವು ಬರುವುದಾದರೆ ಏಳುದಿನಗಳ ಶಿಶುವಿನಿಂದ ಬರಲಿ'' ಎಂದು ಬ್ರಹ್ಮನಿಂದ ವರಪಡೆದುಕೊಂಡು ಹಿಂಸಾರಭಸಮತಿಯಾಗಿದ್ದನು. ಅವನನ್ನು ನಿಗ್ರಹಿಸಲು ಶಿವ-ಗಿರಿಜೆಯರ ಅಂಶದಿಂದ ಕುಮಾರ ಸ್ವಾಮಿಯು ಅವತರಿಸಿದನು. ಹುಟ್ಟಿದ ಏಳು ದಿನಗಳೊಳಗೇ ಬೆಳೆದು ದೇವಸೇನಾಪತಿಯಾದನು. ಇಂದ್ರಾದಿ ದೇವತೆಗಳು ಸೈನ್ಯಸಮೇತರಾಗಿ ಬಂದು ಅಲ್ಲಿನ ಒಂದು ಪರ್ವತಾಗ್ರದಲ್ಲಿ ಸೇನಾಪತಿಪಟ್ಟವನ್ನು ಕಟ್ಟಿದರು. ಆ ಪರ್ವತವು ಕುಮಾರಪರ್ವತವೆನಿಸಿ, ಆಗ ಅಭಿಷೇಕಮಾಡಿದ ಪುಣ್ಯಜಲವು ಕುಮಾರಾಧಾರಾನದಿಯಾಗಿ ಹರಿಯಿತೆಂದು ವರ್ಣಿಸಲಾಗಿದೆ.

ಸುಬ್ರಹ್ಮಣ್ಯ ದೇವಾಲಯಕ್ಕೆ ಸಮೀಪದಲ್ಲಿಯೇ 'ದರ್ಪಣ ತೀರ್ಥ'ವೆಂಬ ಕಿರುತೊರೆಯೊಂದು ಹರಿದುಹೋಗುತ್ತದೆ. ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಅತ್ಯಂತ ಕಟ್ಟುನಿಟ್ಟಿನಿಂದ ನಿತ್ಯಪೂಜಾದಿಗಳು ನಡೆಯುತ್ತವೆ. ಹಲವು ಮಂದಿ ಅರ್ಚಕರಿದ್ದು, ತಮ್ಮ ಪೂಜಾಪರ್ಯಾಯ ಕಾಲದಲ್ಲಿ ಬ್ರಹ್ಮಚರ್ಯದಲ್ಲಿರುತ್ತಾ ದೇವಾಲಯದಲ್ಲಿಯೇ ವಾಸಮಾಡಬೇಕು. ಜಿಲ್ಲೆಗೇ ದೊಡ್ಡದೆನಿಸುವ ಬ್ರಹ್ಮರಥೋತ್ಸವವು ಜರಗುತ್ತದೆ. ಆಗ ಅಲ್ಲಿನ ಅರಣ್ಯಗಳಲ್ಲಿ ಬೆಳೆಯುವ ಎರಡು ಬೆತ್ತಗಳನ್ನು ಕಡಿದು ತಂದು ರಥಕ್ಕೆ ಕಟ್ಟಿ ಎಳೆಯುತ್ತಾರೆ. ಅದು ಮುಗಿಯುತ್ತಿದಂತೆಯೇ ಭಕ್ತರು ಅಲ್ಲಿಂದಲ್ಲಿಗೇ ಒಂದೊಂದು ಚೂರು ಬೆತ್ತವನ್ನು ತುಂಡುಮಾಡಿಕೊಂಡು ವಿಷಚಿಕಿತ್ಸೆಗಾಗಿ ಬಳಸಲು ಕೊಂಡೊಯ್ಯುತ್ತಾರೆ. ಸುಬ್ರಹ್ಮಣ್ಯಮಠ ಎಂದು ಕರೆಯಲಾಗುವ ಮಧ್ವಪರಂಪರೆಯ ಯತಿಗಳ ಮಠವೊಂದಿದೆ. ಅಲ್ಲಿ ನರಸಿಂಹಸ್ವಾಮಿಯ ದೇವಾಲಯವಿದೆ.

## ಉಡುಪಿ

**ಉಡುಪಿ:** 'ರಜತಪೀಠಪುರ' ಎಂದು ಕರೆಯಲಾಗುವ ಉಡುಪಿಯು ಸಮುದ್ರತೀರದಲ್ಲಿದ್ದು ಜಿಲ್ಲಾ ಕೇಂದ್ರವಾದ ಪಟ್ಟಣವಾಗಿದೆ. ಪೊಡವಿಗೊಡೆಯನಾದ ಶ್ರೀಕೃಷ್ಣನ ಪಾವನ ಸನ್ನಿಧಾನದಿಂದಾಗಿ ಉಡುಪಿಯು ಕರ್ನಾಟಕದ ಅತಿಗಣ್ಯ ತೀರ್ಥಕ್ಷೇತ್ರಗಳಲ್ಲೊಂದಾಗಿದೆ. ಮಧ್ವಾಚಾರ್ಯರಿಂದ ಸ್ಥಾಪನೆಗೊಂಡ 'ಶ್ರೀಕೃಷ್ಣಮಠ' ಎಂದು ಕರೆದಿರುವ ಪಟ್ಟಣದ ಹೃದಯಸ್ಥಾನದಲ್ಲಿ ಆ ದೇವರ ಗುಡಿಯಿದೆ. ಗುಡಿಯ ಅಂಗಳದಲ್ಲಿಯೇ ಮಧ್ವಸರೋವರವೆಂಬ ಜೀವಜಲ ಭರಿತವಾದ ಪುಣ್ಯತೀರ್ಥವಿದೆ. ಶ್ರೀಕೃಷ್ಣನ ಪೂಜಾ ಕಾರ್ಯಾದಿಗಳು ಅವಿಚ್ಛಿನ್ನವಾಗಿ ನಡೆಯಬೇಕೆಂಬ ಸಂಕಲ್ಪದಿಂದ ಮಧ್ವಾಚಾರ್ಯರು, ಯತಿ ಪರಂಪರೆಯಿಂದ ಕೂಡಿದ, 'ಅಷ್ಟಮಠಗಳು' ಎಂದು ಖ್ಯಾತವಾಗಿರುವ ೮ ಮಠಗಳನ್ನು ಸ್ಥಾಪಿಸಿದ್ದಾರೆ. ಅವುಗಳಿಗೆ ಫಲಿಮಾರು ಮಠ, ಅದಮಾರು ಮಠ, ಕೃಷ್ಣಪುರ ಮಠ, ಪುತ್ತಿಗೆ ಮಠ, ಶಿರೂರು ಮಠ, ಸೋದೇ ಮಠ, ಕಾಣಿಯೂರು ಮಠ ಮತ್ತು ಪೇಜಾವರ ಮಠ ಎಂಬ ಹೆಸರುಗಳಿವೆ. ಅವೆಲ್ಲವೂ ಗ್ರಾಮ ಕೇಂದ್ರಿತ ಮಠಗಳಾಗಿದ್ದು, ಅವುಗಳ ಯತಿವರ್ಯರ ವಾಸಕ್ಕಾಗಿ ಉಡುಪಿಯಲ್ಲಿಯೂ ಅದೇ ಹೆಸರಿನ ಮಠಗಳಿವೆ.

ಕೃಷ್ಣದೇವರನ್ನು ಯತಿಗಳ ಹೊರತು ಬೇರಾರೂ ಮುಟ್ಟುವಂತಿಲ್ಲ. ಹೀಗಾಗಿ ಅಷ್ಟಮಠಗಳ ಯತಿಗಳೇ ಸರದಿಯ ಪ್ರಕಾರ ಎರಡೆರಡು ವರ್ಷ ಕೃಷ್ಣಪೂಜೆಯನ್ನು ಕೈಗೊಳ್ಳುತ್ತಾರೆ. ಪೂಜಾಧಿಕಾರವನ್ನು ಎರಡು ವರ್ಷಗಳ ಬಳಿಕ ಬೇರೊಬ್ಬ ಮಠಾಧೀಶರಿಗೆ ಹಸ್ತಾಂತರಿಸುವಾಗ 'ಪರ್ಯಾಯ' ಎಂಬ ಹೆಸರಿನ, ಲಕ್ಷಾಂತರ ಭಕ್ತರು ಸೇರುವ ದೊಡ್ಡ ಮಹೋತ್ಸವವು ಜರುಗುತ್ತದೆ. ಅವುಗಳ ಜೊತೆಗೆ ವಾರ್ಷಿಕವಾಗಿ ರಥೋತ್ಸವಗಳು, ವಿಟ್ಲಪಿಂಡಿ ಎಂಬ ಕೃಷ್ಣ ಜನ್ಮೋತ್ಸವ ಮೊದಲಾದವು ವರ್ಣಮಯವಾಗಿ ಜರುಗುತ್ತವೆ. ಪ್ರತಿನಿತ್ಯವೂ ರಾಜ್ಯದ ನಾನಾಕಡೆಗಳಿಂದ ಭಕ್ತರು ಉಡುಪಿಗೆ ಧುಮ್ಮಿಕ್ಕುತ್ತಾರೆ. ಅವರಿಗೆಲ್ಲಾ ನಿತ್ಯ ಸಂತರ್ಪಣೆಯುಂಟು, ತಂಗಲು ಛತ್ರಗಳುಂಟು. ಕೃಷ್ಣಮಠ, ಅಷ್ಟಮಠಗಳು, ಛತ್ರಗಳು ಮುಂತಾದ ಎಲ್ಲವೂ ರಥಬೀದಿ ಎಂದು ಕರೆಯುವ ಪ್ರದಕ್ಷಿಣಪಥದಲ್ಲಿಯೇ ಇವೆ. ಕನಕಪುರಂದರಾದಿ ದಾಸವರೇಣ್ಯರಿಗೆ ಶ್ರೀಕೃಷ್ಣನು ಪ್ರಾಣಪ್ರಿಯನಾಗಿದ್ದನು. ಕನಕದಾಸರು ಶ್ರೀಕೃಷ್ಣನನ್ನು ದರ್ಶನಮಾಡಿದ 'ಕನಕನಕಿಂಡಿ'ಯು ಅವರನ್ನು ನೆನಪಿಸುತ್ತದೆ. ಕೃಷ್ಣನಿಗೂ ಹಿಂದಿನ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯಗಳೂ ಉಡುಪಿಯಲ್ಲಿದ್ದು, ಅಲ್ಲಿಯೂ ನಿತ್ಯಪೂಜಾದಿಗಳು ನೆರವೇರುತ್ತವೆ.

**ಕೊಲ್ಲೂರು:** ಕುಂದಾಪುರ ತಾಲ್ಲೂಕಿಗೆ ಸೇರಿರುವ ಕೊಲ್ಲೂರು ಅಲ್ಲಿಂದ ೪೨ ಕಿ.ಮೀ. ದೂರದಲ್ಲಿರುವ ಆದಿಶಕ್ತಿ ಮೂಕಾಂಬಿಕೆಯ ಪರಮಪವಿತ್ರ ನೆಲೆಯಾಗಿದೆ. ಸೌಪರ್ಣಿಕಾ ಎಂಬ ನದಿಯ ತೀರದಲ್ಲಿದೆ. ಕೋಲಮುನಿಗಳೆಂಬ ಮಹಾತ್ಮರಿಗೆ ಅದು ಪುಣ್ಯಭೂಮಿಯಾಗಿದೆ. ಮೂಕಾಸುರನೆಂಬ ದುಷ್ಟರಕ್ಕಸನ್ನು ಸಂಹರಿಸಿದ ಬಳಿಕ ಆ ದೇವಿಯು ಕೋಲಮುನಿಗಳ ಪ್ರಾರ್ಥನೆಯಂತೆ ಕೊಲ್ಲೂರಿನಲ್ಲಿ ನೆಲೆಸಿದ್ದಾಳೆ. ದೇವಾಲಯಕ್ಕೆ ಸಮೀಪದಲ್ಲಿಯೇ ಅಗ್ನಿತೀರ್ಥವೆಂಬ ಚಿಕ್ಕ ತೊರೆಯಿದೆ. ಮೂಕಾಂಬಿಕೆಯು ಲಿಂಗರೂಪದಲ್ಲಿ ಪೂಜಿತಳಾಗುತ್ತಿದ್ದಾಳೆ. ಆದಿಶಂಕರಾಚಾರ್ಯರು ಆ ಕ್ಷೇತ್ರಕ್ಕೆ ಭೇಟಿಕೊಟ್ಟು, ದೇವಿಯ ಪಂಚಲೋಹದ ವಿಗ್ರಹವನ್ನು ಆ ಲಿಂಗದ ಹಿಂಬದಿಯಲ್ಲಿ ಶ್ರೀಚಕ್ರಸಹಿತವಾಗಿ ಪ್ರತಿಷ್ಠಾಪಿಸಿದ್ದಾರೆ. ರಥೋತ್ಸವವೇ ಆದಿಯಾಗಿ



ಭಾರತದ ಶಕ್ತಿಕ್ಷೇತ್ರಗಳಲ್ಲಿ ಕೊಲ್ಲೂರಿಗೆ ಅನನ್ಯವಾದ ಸ್ಥಾನವಿದೆ. ಕೇರಳೀಯರಿಗೆ ಅದು ಅತ್ಯಂತ ಪ್ರಿಯವಾದ ತಾಣವಾಗಿದ್ದು, ಅಲ್ಲಿಂದ ಭಕ್ತರು ಬಾರದ ದಿನವೇ ಇಲ್ಲ. ನಿತ್ಯವೂ ಅಲ್ಲಿ ಯಾತ್ರಿಕರು ಮುತ್ತಿಮೊರೆಯುತ್ತಿರುತ್ತಾರೆ. ಕೊಲ್ಲೂರಿಗೆ ೨೨ ಕಿ.ಮೀ. ದೂರದಲ್ಲಿ ಕೊಡಚಾದ್ರಿ ಎಂಬ ಅತ್ಯುನ್ನತವಾದ ಪರ್ವತ ಸ್ತೋಮವಿದೆ. ಸೌಪರ್ಣಿಕಾ ನದಿ ಅಲ್ಲಿಯೇ ಹುಟ್ಟುತ್ತದೆ. ಅಲ್ಲಿ ಸರ್ವಜ್ಞಪೀಠ, ಚಿತ್ರಮೂಲ ಎಂಬ ರೋಮಾಂಚಕಾರಿಯಾದ ತಾಣಗಳಿವೆ. ಹಲವು ಬುಗ್ಗೆಗಳೂ ಜಲಪಾತಗಳೂ ಅಲ್ಲಿವೆ. ಮೂಕಾಂಬಿಕೆಗೆ ಅದು ಮೂಲಸ್ಥಾನವಾಗಿದೆ. ಅಲ್ಲಿಯೇ ಕೆಲವು ದೇವಾಲಯಗಳಿವೆ.

## ಹಾವೇರಿ

**ಚೌಡದಾನಪುರ:** ರಾಣೆಬೆನ್ನೂರು ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೨೨ ಕಿ.ಮೀ.ಗಳ ದೂರದಲ್ಲಿರುವ ಚೌಡದಾನಪುರವು ತುಂಗಭದ್ರಾತೀರದ ಪುಣ್ಯತೀರ್ಥವಾಗಿದೆ. ತುಂಗಭದ್ರೆಯು ಅಲ್ಲಿ ಪಶ್ಚಿಮವಾಹಿನಿಯಗಿ ಹರಿದು ಆ ಕ್ಷೇತ್ರಕ್ಕೆ ಹೆಚ್ಚಿನ ಪವಿತ್ರ್ಯವನ್ನು ತಂದುಕೊಟ್ಟಿದೆ. ಮುಕ್ತಿನಾಥನೆಂಬ ಶಿವನ ದೇವಾಲಯವು ಒಂದು ತೀರ್ಥಕ್ಷೇತ್ರವಾಗಿರುವುದಲ್ಲದೆ, ಶಿಲ್ಪಕಲಾದೃಷ್ಟಿಯಿಂದಲೂ ಗಮನಾರ್ಹ ತಾಣವಾಗಿದೆ. ಅಂಬಿಗರ ಚೌಡಯ್ಯನೆಂಬ ಶಿವಶರಣನು ಅಲ್ಲಿ ಮುಕ್ತನಾಗಿದ್ದು, ಅವನದೊಂದು ಗದ್ದುಗೆಯ ಗುಡಿಯು ಅಂಬಿಗರ ಯಾತ್ರಾಸ್ಥಳವಾಗಿದೆ. ಅವನ ಜಾತ್ರೆಯಕಾಲದಲ್ಲಿ ನಡೆಯುವ ತೆಪ್ಪೋತ್ಸವವು ಅತ್ಯಂತ ಆಕರ್ಷಕವಾಗಿರುತ್ತದೆ. ಅಂಬಿಗರ ಒಂದು ಗುರುಪೀಠವೂ ಅಲ್ಲಿದೆ.

**ದೇವರಗುಡ್ಡ:** ರಾಣೆಬೆನ್ನೂರು ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೧೩ ಕಿ.ಮೀ.ಗಳ ದೂರದಲ್ಲಿದೆ. ಮೈಲಾರಲಿಂಗನೆಂಬ ಶಿವನ ಬಹು ದೊಡ್ಡ ಯಾತ್ರಾಕೇಂದ್ರವಾಗಿ ದೇವರಗುಡ್ಡಕ್ಕೆ ಹೆಚ್ಚಿನ ಮಹತ್ವವು ಸಂದಾಯವಾಗಿದೆ. ಶಿವನು ಮಾರ್ತಾಂಡಭೈರವ ರೂಪನಾಗಿ ಮಣಿಕಾಸುರ, ಮಲ್ಲಾಸುರ ಎಂಬ ರಾಕ್ಷಸರನ್ನು ಸಂಹರಿಸಿ, ಮೈಲಾರಲಿಂಗನಾಗಿ ಆ ಕ್ಷೇತ್ರದಲ್ಲಿ ಆಗಮೋಕ್ತಪ್ರಕಾರದ ನಿತ್ಯಪೂಜೆಗಳನ್ನು ಸ್ವೀಕರಿಸುತ್ತಿದ್ದಾನೆ. ಪ್ರತಿ ಹುಣ್ಣಿಮೆಗೆ ಚಿಕ್ಕ ಜಾತ್ರೆ ಮತ್ತು ವಾರ್ಷಿಕವಾಗಿ ದೊಡ್ಡ ಜಾತ್ರೆಗಳು ನಡೆದು, ಆಗ ಹೆಚ್ಚು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುತ್ತಾರೆ. ಮೈಲಾರಲಿಂಗನ ಭಕ್ತರಾಗಿ ದೀಕ್ಷೆಯನ್ನು ಸ್ವೀಕರಿಸಿದವರು 'ಗೊರವರು' ಎಂದೆನಿಸಿ, ಅವರಿಂದ 'ಗೊರವರ ಕುಣಿತ' ಎಂಬ ನೃತ್ಯಸೇವೆಯು ಆ ಸ್ವಾಮಿಗೆ ಸಂದಾಯವಾಗುತ್ತದೆ.

**ಹಾವನೂರು:** ರಾಣೆಬೆನ್ನೂರು ತಾಲ್ಲೂಕಿಗೆ ಸೇರುವ ಹಾವನೂರು ಗ್ರಾಮವು ಅಲ್ಲಿಂದ ೩೫ ಕಿ.ಮೀ. ದೂರದಲ್ಲಿದ್ದು ಜನಪ್ರಿಯ ಯಾತ್ರಾಸ್ಥಳವಾಗಿದೆ. ತ್ರಿಪುರಾಂತಕೇಶ್ವರನೆಂಬ ಶಿವನ ದೇವಾಲಯವು ಅಲ್ಲಿನ ಕೇಂದ್ರಬಿಂದುವಾಗಿದೆ. ವೆಂಕಟೇಶ್ವರದೇವಾಲಯ, ವಾದಿರಾಜಸ್ವಾಮಿಗಳ ಮೃತ್ತಿಕಾ ಬೃಂದಾವನ, ಚಿದಂಬರ ಮಂದಿರಗಳು ಅಲ್ಲಿನ ಇನ್ನಿತರ ಪುಣ್ಯಕ್ಷೇತ್ರಗಳಾಗಿವೆ. ಗ್ರಾಮದೇವತೆ ದ್ಯಾಮವ್ವನ ಜಾತ್ರೆಯು ಆ ಸುತ್ತಿಗೆಲ್ಲ ಅತ್ಯಂತ ದೊಡ್ಡ ಮಹೋತ್ಸವವಾಗಿದೆ.

**ಹಾವೇರಿ:** ಜಿಲ್ಲಾಕೇಂದ್ರವಾದ ಹಾವೇರಿಯು ಕೂಡ ಪವಿತ್ರ ಪಟ್ಟಣವಾಗಿದೆ. ನಳಮಹಾರಾಜನು ಅದನ್ನು ಸ್ಥಾಪಿಸಿದನೆಂಬ ಐತಿಹ್ಯದ ಹಿನ್ನೆಲೆಯಲ್ಲಿ ಅದು 'ನಳಪುರಿ'ಯೆನಿಸಿತ್ತು. ಅಲ್ಲಿರುವ ಸಿದ್ಧೇಶ್ವರದೇವಾಲಯವು ಮಹತ್ವದ ಕ್ಷೇತ್ರವಾಗಿದೆ. ಸಿದ್ಧೇಶ್ವರನಲ್ಲದೆ ಆ ದೇವಾಲಯದಲ್ಲಿ ಲಿಂಗವನ್ನು ಹಿಡಿದಿರುವ ಮಹಾವಿಷ್ಣು, ಉಮಾಮಹೇಶ್ವರ, ನೃತ್ಯಭಂಗಿಯಲ್ಲಿರುವ ಸಪ್ತಮಾತೃಕೆಯರು, ನಾಗನಾಗಿಣಿಯರು ಮೊದಲಾದ ಅಪೂರ್ವ ಶಿಲ್ಪಗಳಿವೆ. ಹಾವೇರಿಯ ಹುಕ್ಕೇರಿಮಠವು ವೀರಶೈವರ ಶ್ರದ್ಧಾ ಕೇಂದ್ರವಾಗಿದೆ. ನಳ ಚಕ್ರವರ್ತಿಯೇ ನಿರ್ಮಿಸಿದನೆಂದು ಹೇಳುವ ದೊಡ್ಡದಾದ ಜಲಾಶಯವೊಂದಿದ್ದು ಅದಕ್ಕೆ ಪವಿತ್ರತೀರ್ಥವೆಂಬ ಪ್ರಶಸ್ತಿ ಸಂದಾಯವಾಗಿದೆ. ವಿಶೇಷ ದಿನಗಳಲ್ಲಿ ಆಸ್ತಿಕರು ಅಲ್ಲಿಗೆ ಪುಣ್ಯಸ್ನಾನಕ್ಕಾಗಿ ಆಗಮಿಸುತ್ತಾರೆ.

**ಕಾಗಿನೆಲೆ:** ಬ್ಯಾಡಗಿ ತಾಲ್ಲೂಕಿಗೆ ಸೇರುವ ಕಾಗಿನೆಲೆಯು ಭಕ್ತಾಗ್ರೇಸರ ಕನಕದಾಸರ (೧೫೫೦) ಮುಕ್ತಿಕ್ಷೇತ್ರವಾಗಿ ಶ್ರೇಷ್ಠವಾದ ಯಾತ್ರಾಸ್ಥಳವಾಗಿದೆ. ಕನಕದಾಸರ ಆರಾಧ್ಯ ದೈವವಾದ ಆದಿಕೇಶವನ ದೇವಾಲಯವು ಅಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಅದು ಪರಮಾದ್ಭುತವಾಗಿ ಜೀರ್ಣೋದ್ಧಾರಗೊಂಡಿದ್ದು ಯಾತ್ರಿಕರನ್ನು ಬೆರಗುಗೊಳಿಸುವಂತಿದೆ. ಅಲ್ಲೊಂದು ತೀರ್ಥವು ಇದೆ. ಹಾಲುಮತ ಕುರುಬ ಸಮುದಾಯಕ್ಕೆ ಸೇರಿದ ಯತಿಪರಂಪರೆಯಿರುವ ಕನಕ ಪೀಠ ಮಹಾ ಸಂಸ್ಥಾನವಿದೆ.

**ಗಾಯತ್ರೀ ತಪೋವನ:** ಶಿಗ್ಗಾವಿ ತಾಲ್ಲೂಕಿಗೆ ಸೇರುವ ತಡಸ ಕ್ರಾಸು ಎಂಬಲ್ಲಿ ''ಗಾಯತ್ರೀ ತಪೋವನ'' ಎಂಬ ಪುಣ್ಯಕ್ಷೇತ್ರವಿದೆ. ವಿಶಾಲವಾದ ಉದ್ಯಾನವನದ ನಡುವೆ ಗಾಯತ್ರಿದೇವಿಯ ದೇವಾಲಯವಿದೆ. ಅಲ್ಲೊಂದು ಪುಣ್ಯಪುಷ್ಕರಿಣಿಯಿದೆ. ಸನಾತನ ಹಿಂದೂಧರ್ಮದ ಸಂರಕ್ಷಣೆಗೆ ಪೋಷಕವಾಗುವ ಅನೇಕ ಕಾರ್ಯಕ್ರಮಗಳು ಅಲ್ಲಿ ನಡೆಯುತ್ತವೆ.

**ಗಳಗನಾಥ:** ಗಳಗನಾಥವು ಹಾವೇರಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೪೦ ಕಿ.ಮೀ. ದೂರದಲ್ಲಿದೆ. ತುಂಗಭದ್ರಾ ಮತ್ತು ವರದಾ ನದಿಗಳ ಸಂಗಮಸ್ಥಾನದಲ್ಲಿ ಈ ಪುಣ್ಯತೀರ್ಥವಿದೆ. ಅಲ್ಲಿ ಗಳಗೇಶ್ವರನೆಂಬ ವಿಶಿಷ್ಟ ವಾಸ್ತು ಶೈಲಿಯ ಶಿವದೇವಾಲಯವಿದೆ.

**ಹಾನಗಲ್ಲು:** ತಾಲ್ಲೂಕು ಕೇಂದ್ರವಾಗಿರುವ ಹಾನಗಲ್ಲು ಪಟ್ಟಣವು ಮಹಾಭಾರತ ಕಾಲದ ವಿರಾಟನಗರವೆನಿಸಿ ಪಾಂಡವರು ಅಜ್ಞಾತವಾಸವನ್ನು ಅನುಭವಿಸಿದ ಪುಣ್ಯತೀರ್ಥವಾಗಿದೆ. ಅದರ ಕುರುಹಾಗಿ ಕೀಚಕನ ಗರಡಿ, ಕುಂತೀದಿಬ್ಬಗಳಿವೆ. ಹಾವೇರಿ ಜಿಲ್ಲೆಗೇ ಅತಿ ದೊಡ್ಡದಾದ ತಾರಕೇಶ್ವರ ಶಿವನ ದೇವಾಲಯವು ಅಲ್ಲಿದೆ. ಅಷ್ಟದಿಕ್ಪಾಲಕರ ನೃತ್ಯಗಾರ್ತಿಯರ ಕಲಾತ್ಮಕವಾದ ಕೆತ್ತನೆಗಳಿವೆ. ದೀಪಾವಳಿಯ ಪ್ರತಿಪದೆಯಂದು ಸೂರ್ಯನಕಿರಣಗಳು ತಾರಕೇಶ್ವರ ಲಿಂಗದ ಮೇಲೆ ಬೀಳುವುದು ಅಲ್ಲಿನ ವಿಶೇಷವಾಗಿದೆ. ಧರ್ಮಾನದಿಯ ತೀರದಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ.

**ಕೂಡಲ:** ಹಾನಗಲ್ಲು ತಾಲ್ಲೂಕಿಗೆ ಸೇರುವ ಕೂಡಲವು ಅಲ್ಲಿಂದ ೨೮ ಕಿ.ಮೀ. ದೂರದಲ್ಲಿದ್ದು ವರದಾನದಿ ಮತ್ತು ಧರ್ಮಾನದಿಗಳ ಸಂಗಮಸ್ಥಾನವಾಗಿ ಪುಣ್ಯತೀರ್ಥವಾಗಿದೆ. ಸಂಗಮೇಶ್ವರನೆಂಬ ಶಿವನ ಆಲಯವಿದೆ. ಅಲ್ಲಿರುವ ಗುರುನಂಜೇಶ್ವರ ಮಠವೂ ಒಂದು ಪುಣ್ಯ ತಾಣವಾಗಿದೆ.

## ಗದಗ

**ಕಾಲಕಾಲೇಶ್ವರ:** ರೋಣ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩೪ ಕಿ.ಮೀ.ಗಳ ದೂರದಲ್ಲಿ ಜಾಲೇಂದ್ರ ಪರ್ವತವೆನಿಸಿದ ಅತ್ಯಂತ ಪುರಾತನ ತೀರ್ಥಕ್ಷೇತ್ರವಿದೆ. ತನ್ನ ಭವ್ಯತೆಯಿಂದ ಮೊದಲ ನೋಟದಲ್ಲೇ ಭಕ್ತರನ್ನು ಮಂತ್ರಮುಗ್ಧರನ್ನಾಗಿಸುವ ಪರ್ವತದ ಮಧ್ಯದಲ್ಲಿ ಕಾಲಕಾಲೇಶ್ವರನೆಂಬ ಶಿವನ ಗುಹಾಲಯವಿದೆ. ಶಿವನಿಗೂ ವಿಷ್ಣುವಿನಂತೆಯೇ ದಶಾವತಾರಗಳು ಉಂಟೆಂದೂ, ಅವುಗಳಲ್ಲಿ ಕಾಲಕಾಲೇಶ್ವರಾವತಾರವೇ ಮೊದಲನೆಯದೆಂದೂ ಸ್ಕಾಂದಪುರಾಣದ ಮಾಹೇಶ್ವರಖಂಡದಲ್ಲಿ ವಿವರಿಸಲಾಗಿದೆ. ಪರ್ವತದ ಗರ್ಭದಿಂದ ಸುರಿಯುವ ಅಂತರಗಂಗೆಯ ಜಲಧಾರೆಯಿಂದ ಆ ಕ್ಷೇತ್ರವು ಪರಮ ಪಾವನವಾಗಿದೆ. ಆ ಪರಿಸರದಲ್ಲಿ ನಂದಿಯ ವಿಗ್ರಹವಿದ್ದು ಅದನ್ನು ವಿಧವೆಯರೇ ಪೂಜಿಸುವ ಸಂಪ್ರದಾಯವಿದೆ. ಇಂತಹ ರುದ್ರ ರಮಣೀಯ ಪುಣ್ಯಕ್ಷೇತ್ರವು ಆ ಜಿಲ್ಲೆಯಲ್ಲಿ ಮತ್ತಾವುದೂ ಇಲ್ಲ.

**ಹೊಳೆಆಲೂರು:** ವಟಪುರವೆಂದು ಖ್ಯಾತವಾಗಿರುವ ಹೊಳೆ ಆಲೂರು ಪಟ್ಟಣವು ರೋಣದಿಂದ ೨೫ ಕಿ.ಮೀ.ಗಳ ದೂರದಲ್ಲಿ ಮಲಪ್ರಭಾ ನದಿಯ ದಂಡೆಯಲ್ಲಿರುವ ಜಾಗೃತ ಪುಣ್ಯತೀರ್ಥವಾಗಿದೆ. ಎಚ್ಚರೇಶ್ವನೆಂಬ ವಿಶ್ವಕರ್ಮಪವಾಡಪುರುಷನ ಐಕ್ಯಭೂಮಿಯಾಗಿ ಬಹುದೊಡ್ಡ ಕ್ಷೇತ್ರವಾಗಿದೆ. ಆ ಸ್ವಾಮಿಯ ಭವ್ಯವಾದ ಗದ್ದುಗೆ ದೇವಾಲಯವಿದೆ. ಅಲ್ಲಿ ನಡೆಯುವ ವಾರ್ಷಿಕ ರಥೋತ್ಸವದಲ್ಲಿ ಎಲ್ಲ ಜಾತಿಯ ಜನರೂ ಪಾಲ್ಗೊಳ್ಳುತ್ತಾರೆ. ಸಂಕ್ರಾಂತಿ ಹಬ್ಬದಿಂದ ನಡೆಯುವ ಮಲಪ್ರಭಾನದಿಯ ತೀರ್ಥಸ್ನಾನದಲ್ಲಿ ಸಾವಿರಾರು ಭಕ್ತರು ಪಾಲ್ಗೊಳ್ಳುತ್ತಾರೆ.

**ಗದಗ:** ಜಿಲ್ಲಾ ಕೇಂದ್ರವಾದ ಗದಗ ಪಟ್ಟಣವು ಕ್ರತುಪುರವೆಂಬ ಪುರಾಣನಾಮದಿಂದ ಖ್ಯಾತವಾಗಿದೆ. 'ಭವಿಷ್ಯೋತ್ತರಪುರಾಣ'ದಲ್ಲಿ ಅದರ ಮಾಹಾತ್ಮ್ಯದ ವರ್ಣನೆಯಿದೆ. ಅಲ್ಲಿರುವ ವೀರನಾರಾಯಣ ಸ್ವಾಮಿಯ ದೇವಾಲಯದಿಂದಾಗಿ ಗದಗದ ಕೀರ್ತಿಯು ದಿಗಂತ ವಿಶ್ರಾಂತವಾಗಿದೆ. ಆಳೆತ್ತರದ ಸ್ವಾಮಿಯ ವಿಗ್ರಹವು ಅತ್ಯಂತ ಕಲಾತ್ಮಕವಾದ ಶಿಲ್ಪವಾಗಿದೆ. ಕುಮಾರವ್ಯಾಸ ಕವಿಯು ವೀರನಾರಾಯಣನ ಕಿಂಕರನಾಗಿ 'ಗದುಗಿನಭಾರತ'ವೆಂಬ ಮಹಾಕಾವ್ಯವನ್ನು ಈ ದೇವಾಲಯದಲ್ಲೇ ಕುಳಿತು ರಚಿಸಿದನೆಂದು ತಿಳಿದುಬಂದಿದೆ. ಮಹಾಭಾರತದ ಭೀಷ್ಮಾಚಾರ್ಯರು ಗದಗದಲ್ಲೊಂದು ಯಜ್ಞ ಮಾಡಿದ್ದರಿಂದ, ಅದರ ಕುರುಹಾಗಿ ಪಟ್ಟಣದಲ್ಲೊಂದು 'ಭೀಷ್ಮಕೆರೆ' ಎಂಬ ಹೆಸರಿನ ಜಲಾಶಯವಿದೆ. ಜಗದ್ಗುರು ತೋಂಟದಾರ್ಯ ಮಠ, ವೀರೇಶ್ವರಪುಣ್ಯಾಶ್ರಮ ಮತ್ತು ಮಹಾಂತಶಿವಯೋಗಿಗಳ ಆನಂದಾಶ್ರಮಗಳು ಸದ್ಭಕ್ತರ ಆತ್ಮೀಯವಾದ ಶ್ರದ್ಧಾಕೇಂದ್ರಗಳಾಗಿವೆ.

## ಧಾರವಾಡ

**ಧಾರವಾಡ:** ಜಿಲ್ಲಾಕೇಂದ್ರವಾದ ಧಾರವಾಡವೂ ಒಂದು ಪುಣ್ಯಕ್ಷೇತ್ರವಾಗಿದೆ. ಅದು ಶಾಲ್ಮಲಾ ನದಿಯ ಉಗಮಸ್ಥಾನವಾಗಿದ್ದು, ಅಲ್ಲಿ ಸೋಮೇಶ್ವರ ದೇವಾಲಯವಿದೆ. ಮಕರ ಸಂಕ್ರಾಂತಿಯಂದು ಅಲ್ಲಿ ಉತ್ಸವವು ನೆರವೇರುತ್ತದೆ. ಮುರುಘಾಮಠ ಎಂಬುದು ಧಾರವಾಡದ ಮತ್ತೊಂದು ಪಾವನಕ್ಷೇತ್ರವಾಗಿದ್ದು ಮಾಘಮಾಸದಲ್ಲಿ ಅಲ್ಲಿ ರಥೋತ್ಸವವು ಮೃತ್ಯುಂಜಯ ಶಿವಯೋಗಿಗಳ ಹೆಸರಿನಲ್ಲಿ ನಡೆಯುತ್ತದೆ. ಧಾರವಾಡದ ಮಾಳಮಡ್ಡಿ ಎಂಬಲ್ಲಿ ಉಳವಿ ಚೆನ್ನಬಸವೇಶ್ವರ ದೇವಾಲಯವೆಂದು ವಿಶಾಲ ದೇವಾಲಯವಿದೆ. ಕಲ್ಯಾಣದಿಂದ ಚೆನ್ನಬಸವಣ್ಣನವರು ಉ.ಕ. ಜಿಲ್ಲೆಯ ಉಳವಿಗೆ ಧಾವಿಸುವ ವೇಳೆಯಲ್ಲಿ ಅವರು ಸ್ವಲ್ಪಕಾಲ ಈ ಜಾಗದಲ್ಲಿ ತಂಗಿದ್ದರಿಂದ ಅದು ಪುಣ್ಯಕ್ಷೇತ್ರವಾಗಿದೆ. ಧಾರವಾಡದಲ್ಲಿ 'ತಪೋವನ' ಎಂಬ ದಿವ್ಯ ದೇವಾಲಯವನ್ನು ಕುಮಾರಸ್ವಾಮಿಗಳೆಂಬ ವಿಶ್ವವಿಖ್ಯಾತ ತತ್ವಜ್ಞಾನಿಗಳೂ, ಯೋಗಿಗಳೂ ಆದ ಮಹಾತ್ಮರು ೧೯೬೫ ರಲ್ಲಿ ಸ್ಥಾಪಿಸಿದ್ದು ಅದೊಂದು ಅಪೂರ್ವ ಕ್ಷೇತ್ರವಾಗಿದೆ. ಅಲ್ಲಿ ವಿಗ್ರಹಗಳೇನೂ ಇಲ್ಲದ 'ದಿವ್ಯದೇವಾಲಯ'ವಿದೆ. ''ಹೇ ಪ್ರಭೋ ಪ್ರಸೀದ ಓಂ'' ಎಂಬುದೇ ಅಲ್ಲಿನ ದಿವ್ಯಮಂತ್ರವಾಗಿದೆ. ಅಲ್ಲಿ ಆ ಸದ್ಗುರುಗಳ ಸಮಾಧಿ ಮಂದಿರವೂ ಇದೆ. ಆ ದಿವ್ಯ ದೇವಾಲಯದಲ್ಲಿ ಸಿದ್ಧಪುರುಷರು ಸೂಕ್ಷ್ಮ ಶರೀರದಿಂದ ವಾಸಿಸುತ್ತಾರೆಂದು ನಂಬಲಾಗಿದೆ. ಪ್ರತಿ ಭಾನುವಾರ ಅಲ್ಲಿ ಭಜನೆ, ಸತ್ಸಂಗಗಳು ನಡೆಯುತ್ತವೆ.

**ಹುಬ್ಬಳ್ಳಿ:** ತಾಲ್ಲೂಕು ಕೇಂದ್ರವಾದ ಹುಬ್ಬಳ್ಳಿಯಲ್ಲಿ ಸಿದ್ಧಾರೂಢರೆಂಬ(೧೮೩೭-೧೯೨೯) ವಿಭೂತಿ ಪುರುಷರ ಅತ್ಯಂತ ಭವ್ಯವಾದ, ಕಲಾತ್ಮಕವಾದ ಮಠವೊಂದಿದ್ದು ಅದೊಂದು ಪಾವನತಮ ಪುಣ್ಯಕ್ಷೇತ್ರವಾಗಿದೆ. ಅದ್ವೈತವನ್ನು ಬೋಧಿಸುವ, ಜಾತಿಮತಗಳ ಭೇದವನ್ನೆಣಿಸದ 'ಮಾನವಜಾತಿ ತಾನೊಂದೆ ವಲಂ' ಎಂಬ ವಿಶಾಲ ಭಾವನೆಯಿಂದ ಕೂಡಿದ ''ಆರೂಢಸಂಪ್ರದಾಯ'' ಎಂಬ ಭಕ್ತಿಪಂಥಕ್ಕೆ ಸಿದ್ಧಾರೂಢರು ಮೂಲ ಪುರುಷರಾಗಿದ್ದಾರೆ. ಮಠದಲ್ಲಿ ಹಲವು ಸಂನ್ಯಾಸಿಗಳಿದ್ದರೆ. ನಿತ್ಯಾನ್ನದಾನ, ನಿತ್ಯಭಜನೆ, ನಿತ್ಯ ಆಧ್ಯಾತ್ಮಿಕ ಪ್ರವಚನ ಅಲ್ಲಿನ ವೈಶಿಷ್ಟ್ಯವೆಂದು ಹೇಳಬಹುದು. ಸಿದ್ಧಾರೂಢರ ಗದ್ದುಗೆಯು ಅವರ ಅತಿ ಸಹಜಶೈಲಿಯ ಪ್ರತಿಮೆಯಿಂದೊಡಗೂಡಿದೆ. ಓಂ ನಮಃ ಶಿವಾಯ ಎಂಬ ದಿವ್ಯ ಮಂತ್ರವನ್ನು ಹಗಲೆನ್ನದೆ ಇರುಳೆನ್ನದೆ ೨೪ ಗಂಟೆಗಳೂ ದೀಕ್ಷಾವಂತರಾದ ಅವರು, ಸರದಿಯ ಪ್ರಕಾರ ವೀಣೆ ಮಿಡಿಯುತ್ತಾ ನಿಂತುಕೊಂಡು, ಮೆಲುದನಿಯಲ್ಲಿ ಜಪಿಸುವ ಸಾಧನೆಯು ಸಿದ್ಧಾರೂಢರ ಕಾಲದಿಂದಲೂ ಅಲ್ಲಿ ನಡೆದುಬರುತ್ತಿರುವುದು ಅಪೂರ್ವಸಂಗತಿಯಾಗಿದೆ. ವಾರ್ಷಿಕವಾಗಿ ಸಿದ್ಧಾರೂಢ ರಥೋತ್ಸವವೇ ಆದಿಯಾಗಿ ಹಲವು ಪರ್ವಗಳು ಜರಗುತ್ತವೆ. ಹುಬ್ಬಳ್ಳಿಗೆ ಹೋದವರಾರೂ ಸಿದ್ಧರೂಢ ಮಠದ ದರ್ಶನ ಮಾಡದೆ ಹಿಂತಿರುಗುವುದಿಲ್ಲ.

ಉತ್ತರ ಕರ್ನಾಟಕದಾದ್ಯಂತ ಅಲ್ಲಲ್ಲಿ ಭಕ್ತರು ಸಿದ್ಧಾರೂಢರ ಹೆಸರಿನಲ್ಲಿ ಮಠಗಳನ್ನು ತಮ್ಮಷ್ಟಕ್ಕೇ ತಾವು ಸ್ಥಾಪಿಸಿಕೊಂಡು ಭಕ್ತಿಪ್ರಸಾರ ಮಾಡುತ್ತಿದ್ದಾರೆ. ಅವುಗಳಲ್ಲಿ ಕೆಲವು ಮಠಗಳು ಸನ್ಯಾಸಿ ಪರಂಪರೆಯನ್ನು ಒಳಗೊಂಡಿವೆ. ಹುಬ್ಬಳ್ಳಿಯಲ್ಲಿರುವ 'ಮೂರು ಸಾವಿರ ಮಠ' ಎಂಬ ಹೆಸರಿನ ಮಠವೂ ಒಂದು ಪುಣ್ಯಕ್ಷೇತ್ರವಾಗಿದ್ದು, ಜಗದ್ಗುರು ಗುರುಸಿದ್ಧೇಶ್ವರ ಸಮಾಧಿಮಂದಿರವು ಅಲ್ಲಿದೆ. ಅವರ ರಥೋತ್ಸವವೂ ಜರುಗುತ್ತದೆ. ಶೈಕ್ಷಣಿಕ ಮತ್ತು ಸಾಮಾಜಿಕ ಸೇವಗಾಗಿ ಆ ಮಠವು ತನ್ನನ್ನು ಅರ್ಪಿಸಿಕೊಂಡಿದೆ.

**ಅಣ್ಣಿಗೇರಿ:** ತಾಲ್ಲೂಕು ಕೇಂದ್ರವಾದ ಅಣ್ಣಿಗೇರಿಯು ತನ್ನಲ್ಲಿಟ್ಟು ಕೊಂಡಿರುವ ಅಮೃತೇಶ್ವರ ದೇವಾಲಯದಿಂದಾಗಿ ದೊಡ್ಡ ಯಾತ್ರಾ ಕೇಂದ್ರವಾಗಿದೆ. ಬ್ರಹ್ಮದೇವನೇ ಅಲ್ಲಿ ಅಮೃತೇಶ್ವರನನ್ನು ಸ್ಥಾಪಿಸಿ ಪೂಜಿಸಿ ಎಲ್ಲರಿಗೂ ಅನ್ನಸಂತರ್ಪಣೆ ಮಾಡಬೇಕಲ್ಲಾ ಎಂದು ಸಂಕ ಲ್ಪಿಸಿಕೊಳ್ಳುತ್ತಿದ್ದಂತೆಯೇ, ಅಲ್ಲಿ ಅನ್ನದಗಿರಿಯೇ ಎದ್ದು ನಿಂತಿತು. ಅಂತಾಗಿ ಆ ಕ್ಷೇತ್ರವು ಅನ್ನಗಿರಿಯಾಗಿ ಅಣ್ಣಿಗೇರಿಯಾಯಿತು. ಅದು ಕನ್ನಡದ ಆದಿಕವಿ ಪಂಪನ ಜನ್ಮಭೂಮಿಯಾಗಿ ಒಂದು ಸ್ಮಾರಕವೂ ಇದೆ.

**ವರೂರು:** ಹುಬ್ಬಳ್ಳಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೧೬ ಕಿಲೋಮೀಟರ್ ದೂರದಲ್ಲಿ 'ನವಗ್ರಹತೀರ್ಥ' ಎಂಬ ಹೆಸರಿನಲ್ಲಿ ಅತಿದೊಡ್ಡ ಜೈನಕ್ಷೇತ್ರವೊಂದು ರೂಪುಗೊಂಡು ಸರ್ವಜನಾದರ ಣೀಯವಾಗಿದೆ. ಜಿನೇಶ್ವರರ ಎತ್ತರೆತ್ತರವಾದ ಮೂರ್ತಿಗಳು ಅಲ್ಲಿವೆ.

**ನವಲಗುಂದ:** ತಾಲ್ಲೂಕು ಕೇಂದ್ರವಾಗಿದ್ದು, ವಿಶ್ವಕರ್ಮ ಸಮು ದಾಯದ ಅಜಾತ ನಾಗಲಿಂಗಸ್ವಾಮಿ ಎಂಬ ಪವಾಡಪುರುಷನ ದೊಡ್ಡ ದಾದ ಗದ್ದುಗೆಯಿಂದ ಕೂಡಿದ ಮಠವೊಂದಿದ್ದು, ಧಾರವಾಡ ಜಿಲ್ಲೆಗೇ ಹಿರಿದೆನಿಸುವ ೫ ದಿನಗಳ ಆರಾಧನಾಮಹೋತ್ಸವವೊಂದು ಅಲ್ಲಿ ಜರುಗುತ್ತದೆ. ಆಗ ಅಲ್ಲಿನ ಪೀಠಾಧಿಪತಿಗಳು ಕುದಿಯುವ ಕಡಾಯಿ ದಿಂದ ಗಟ್ಟಿಪಾಯಸವನ್ನು ಬರಿಬೊಗಸೆಯಿಂದ ಮೇಲೆತ್ತಿ, ನಾಗ ಲಿಂಗಸ್ವಾಮಿಗೆ ನೈವೇದ್ಯ ಮಾಡುವ ಪವಾಡವೊಂದು ನಡೆಯುತ್ತದೆ. ಸಮೀಪದ ಯಮನೂರು ಕೂಡ ದೊಡ್ಡ ತೀರ್ಥವಾಗಿದೆ.

**ಹೆಬ್ಬಳ್ಳಿ:** ಹುಬ್ಬಳ್ಳಿ ತಾಲ್ಲೂಕಿಗೆ ಸೇರುವ ಹೆಬ್ಬಳ್ಳಿಯು ಅಲ್ಲಿಂದ ೧೨ ಕಿಲೋಮೀಟರ್ ದೂರದಲ್ಲಿದ್ದು, ನೋಡಿ ಮುಗಿಸಲಾರದಷ್ಟು ದೇವಾಲಯಗಳಿಂದಲೂ ಮಠಗಳಿಂದಲೂ ತುಂಬಿ ತುಳುಕುತ್ತಿದೆ. ಅಭಿನವ ಗೋಂದಾವಳಿಯೆಂದೇ ಖ್ಯಾತವಾಗಿ, ಬ್ರಹ್ಮಚೈತನ್ಯ ಸದ್ಗುರು ಮಹಾರಾಜರೆಂಬ ಮಹಾತ್ಮರ ದೊಡ್ಡದೊಂದು ದೇವಾಲಯವು ಅಲ್ಲಿದೆ. ಅಲ್ಲೊಂದು ಅವಧೂತ ಪರಂಪರೆಯ ಪೀಠವಿದ್ದು, ಆ ಮಹಾತ್ಮರೇ ಅಲ್ಲಿನ ಆಚರಣೆಗಳನ್ನೆಲ್ಲಾ ನಿರ್ದೇಶಿಸುತ್ತಾರೆ.

## ಕೊಪ್ಪಳ

**ಕೊಪ್ಪಳ:** ತುಂಗಭದ್ರಾನದಿಯ ಉಪನದಿಯಾದ ಹಿರೇಹಳ್ಳ ವೆಂಬ ನದಿಯ ತೀರದ, ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳವು ಮಹಾಕೊಪಣನಗರ, ಆದಿಮಹಾತೀರ್ಥ ಎಂಬ ನಾಮಗಳಿಂದ ಒಡಗೂಡಿದ ಅತಿ ಪುರಾತನ ಪುಣ್ಯತೀರ್ಥವಾಗಿದೆ. ಇಂದಿಗೂ ಅದೊಂದು ಜೈನತೀರ್ಥವಾಗಿದೆ. ಅಲ್ಲಿ ಅಶೋಕನ ಶಾಸನಗಳೂ ಇವೆ. ಚಿತ್ರವಿಚಿತ್ರ ಆಕೃತಿಗಳ ಕೋಡುಬಂಡೆಗಳಿಂದೊಡಗೂಡಿದ, ನೋಡಿದೊಡನೆಯೇ ಬೆಚ್ಚಿಬೀಳಿಸುವಂತಿರುವ ಕಡಿದಾದ ಪರ್ವತ ಗಳ ನಡುವೆ ಕೊಪ್ಪಳವು ಹಬ್ಬಿಕೊಂಡಿದೆ. ಆ ಪರ್ವತವು ಮಹಾ ಭಾರತ ಕಾಲದ ಇಂದ್ರಕೀಲ ಪರ್ವತವೆಂದೂ, ಅರ್ಜುನನು ಅಲ್ಲಿ ಯೇ ಶಿವನನ್ನು ಮೆಚ್ಚಿಸಿ ಪಾಶುಪತಾಸ್ತ್ರವನ್ನು ಪಡೆದನೆಂದೂ ಕಥೆ ಯಿದೆ. ಅದರ ಕುರುಹಾಗಿ ಬೆಟ್ಟದ ಮೇಲೆ ಅರ್ಜುನನ ಗುಂಡು, ಮಳೆಮಲ್ಲೇಶ್ವರ ದೇವಾಲಯಾದಿಗಳಿವೆ. ಮಳೆ ಮಲ್ಲೇಶ್ವರ ಲಿಂಗದ ಹಿಂದೆ ಸರ್ವಋತುಗಳಲ್ಲೂ ನೀರುಕ್ಕಿಸುವ ಒಂದು ಬುಗ್ಗೆ ತೀರ್ಥ ವಿದೆ. ಕೊಪ್ಪಳದ ಕೀರ್ತಿಗೆ ಅಲ್ಲಿರುವ ಗವಿಸಿದ್ದೇಶ್ವರರೆಂಬ ಮಹಾತ್ಮ ರಿಂದ ಸ್ಥಾಪನೆಗೊಂಡ ಗವಿಮಠವು ತಿಲಕವಿಟ್ಟಂತಿದೆ. ಗುರುವಿಗೆ, ಲಿಂಗಕ್ಕೆ, ಜಂಗಮಕ್ಕೆ ಕ್ರಮವಾಗಿ ತನು, ಮನ, ಧನಗಳನ್ನು ಸಮರ್ಪಿ ಸುವ 'ತ್ರಿವಿಧ ದಾಸೋಹ' ಕ್ಕೆ ಗವಿಮಠವು ಖ್ಯಾತಿವೆತ್ತಿದೆ. ವರ್ಣನೆಗೆ ಮೀರಿದಷ್ಟು ವೈಭವದಿಂದ, ಶ್ರದ್ಧಾಭಕ್ತಿಗಳಿಂದ ಅಲ್ಲಿ ನಡೆಯುವ ದಾಸೋಹವು ಭಕ್ತಕೋಟಿಯನ್ನೆಲ್ಲಾ ಜಂಗಮವೆಂದು ಕಾಣುವ ಭವ್ಯಪರಂಪರೆಗೆ ಸಾಕ್ಷಿಯಾಗಿದೆ.

**ಕನಕಗಿರಿ:** ಗಂಗಾವತಿ ತಾಲ್ಲೂಕಿಗೆ ಸೇರುವ ಕನಕಗಿರಿಯು ಅಲ್ಲಿಂದ ೨೨ ಕಿಲೋಮೀಟರ್‌ಗಳ ದೂರದಲ್ಲಿದೆ. ಕನಕಋಷಿ ಗಳೆಂಬ ಯೋಗೀಶ್ವರರು ಅಲ್ಲಿ ತಪಸ್ಸು ಮಾಡಿ ಚಿನ್ನದ ಮಳೆಗರೆ ಯಿಸಿದರೆಂಬ ಕಾರಣದಿಂದ ಅದು ಕನಕಗಿರಿಯೆನಿಸಿದೆ. ಪುಷ್ಪಾ ಮತ್ತು ಜಯಂತಿ ಎಂಬೆರಡು ತೊರೆಗಳು ಅಲ್ಲಿ ಸಂಗಮಿಸಿ, ಕನಕ ಗಿರಿಯನ್ನು ತೀರ್ಥವಾಗಿಸಿವೆ. ಕನಕಗಿರಿಯು ದೇವಾಲಯಗಳ ಬೀಡಾಗಿದ್ದು, ಕನಕಾಚಲಪತಿಯೆಂಬ ಲಕ್ಷ್ಮೀನರಸಿಂಹನ ದೊಡ್ಡ ದೊಂದು ಸನ್ನಿಧಾನವೇ ಅಲ್ಲಿ ಪ್ರಧಾನವಾದುದಾಗಿದೆ. ದೇವಾಲಯ ವನ್ನೆಲ್ಲ ಶಿಲ್ಪಕಲೆಯ ಬೆಡಗು ಆವರಿಸಿಕೊಂಡಿದೆ. ಗಿರಿಜಾಕಲ್ಯಾಣ, ಸೀತಾಕಲ್ಯಾಣ, ರುಕ್ಮಿಣೀಕಲ್ಯಾಣಾದಿ ಪೌರಾಣಿಕ ಸನ್ನಿವೇಶಗಳಿಂದ ಒಡಗೂಡಿದ ರಮಣೀಯವಾದ ಶಿಲ್ಪಗಳಿವೆ. ಅವುಗಳ ದೆಸೆ ಯಿಂದಾಗಿ 'ಕಣ್ಣಿದ್ದವರಿಗೆ ಕನಕಗಿರಿ, ಕಾಲಿದ್ದವರಿಗೆ ಹಂಪಿ' ಎಂದು ಗಾದೆಯೇ ಜನಿಸಿದೆ. ಹಂಪಿಯು ಅತ್ಯಂತ ವಿಸ್ತಾರಕ್ಕೆ ಹಬ್ಬಿ ಕೊಂಡಿರುವುದರಿಂದ ಅದನ್ನೆಲ್ಲಾ ತಿರುವಾಗಿ ನೋಡಲು ಕಾಲು ಗಟ್ಟಿಯಾಗಿರಬೇಕು ಎಂಬುದು 'ಕಾಲಿದ್ದವರಿಗೆ ಹಂಪಿ' ಎಂಬುದರ ಅರ್ಥ. ವೆಂಕಟಾಚಲಪತಿಯ ವಾರ್ಷಿಕ ತೇರು ಅತ್ಯಂತ ವಿಜೃಂ ಭಣೆಯಿಂದ ನಡೆಯುತ್ತದೆ. ದಕ್ಷಿಣಭಾರತದ ಅತಿ ದೊಡ್ಡ ತೇರು ಗಳಲ್ಲಿ ಅದೂ ಒಂದಾಗಿದ್ದು, ಐದು ಅಂತಸ್ತುಗಳಾಗಿ ಕಟ್ಟಿದಾಗ ತಲೆಯೆತ್ತಿ ನೋಡಬೇಕಾಗುತ್ತದೆ. ಊರಂಚಿನಲ್ಲಿ ತಿರುಪತಿಯದನ್ನೇ ಹೋಲುವ, 'ವೆಂಕಟಾಚಲಪತಿಬಾವಿ' ಯೆಂಬ ಪುಣ್ಯಪುಷ್ಕರಿಣಿ ಯಿದೆ. ಅದರ ಸುತ್ತ ಕೆಲವು ಗುಡಿಗಳಿವೆ. ಚಿದಾನಂದಾವಧೂತ ರೆಂಬ ಅಂಬಾಮಠದ ಸ್ಥಾಪಕರಾದ ಯೋಗೀಶ್ವರರ ಸಮಾಧಿ ಮಂದಿರವೂ ಕನಕಗಿರಿಯಲ್ಲಿದ್ದು, ಅಲ್ಲಿನ ತೀರ್ಥಮಹಿಮೆಗೆ ಪೂರಕ ವಾಗಿದೆ.

**ಆನೆಗೊಂದಿ:** ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆ ಯು ತುಂಗಭದ್ರಾ ತೀರದ ಈಚೆಯ ದಂಡೆಯಲ್ಲಿದ್ದರೆ ಆನೆ ಗೊಂದಿಯು ಆಚೆಯ ದಂಡೆಯಲ್ಲಿದೆ. ಮೊದಲು ಆ ಸಾಮ್ರಾಜ್ಯವು ಆನೆಗೊಂದಿಯಲ್ಲಿಯೇ ಸ್ಥಾಪನೆಗೊಂಡು, ತರುವಾಯ ಹಂಪೆಗೆ ವರ್ಗಾವಣೆಗೊಂಡಿತು. ಆನೆಗೊಂದಿಯು ರಾಮಾಯಣಕಾಲದ ಕಿಷ್ಕಿಂಧೆಯೆಂದು ನಂಬಲಾಗಿದೆ. ಊರಿನೊಳಗೆ ಕೆಲವು ಮಹತ್ವದ ದೇವಾಲಯಗಳೂ, ಮಠಗಳೂ ಇದ್ದು ಅವೆಲ್ಲವೂ ಯಾತ್ರಾಸ್ಥಳ ಗಳಾಗಿವೆ. ನದಿಯ ಹರಿವಿನಲ್ಲಿಯೇ ೬೪ ಕಂಬಗಳ ಕಲಾತ್ಮಕ ಮಂಟಪವಿದೆ. ಅದಕ್ಕೆ ಸನಿಹದ ನಡುಗಡ್ಡೆಯೊಳಗೆ 'ನವಬೃಂದಾ ವನ' ವೆಂದು ಖ್ಯಾತವಾದ, ಮಧ್ವಪರಂಪರೆಯ ೯ ಯತೀಶ್ವರರ ಸಮಾಧಿಗಳು ಪವಿತ್ರತೀರ್ಥಗಳಾಗಿವೆ. ಅಲ್ಲಿಯೇ ಯೋಗಮುದ್ರೆ

ಯಲ್ಲಿರುವ ಬಾಲಾಂಜನೇಯಸ್ವಾಮಿಯ ಅಪೂರ್ವವಾದ ವಿಗ್ರಹದ ಗುಡಿಯಿದೆ. ರಾಮಾಯಣಕಾಲದ 'ಪಂಪಾಸರೋವರ'ವೂ ಆನೆಗೊಂದಿಯಲ್ಲಿದೆ.

ಆನೆಗೊಂದಿಯ ಪುಣ್ಯಕ್ಷೇತ್ರಗಳಲ್ಲಿ ಅಂಜನಾದ್ರಿಯೆಂಬ ಪರ್ವತಕ್ಕೆ ಅನನ್ಯವಾದ ಸ್ಥಾನವಿದೆ. ಅದು ಆಂಜನೇಯಸ್ವಾಮಿಯ ಜನ್ಮಕ್ಷೇತ್ರವಾಗಿದೆ. ಬೆಟ್ಟದ ಪಾದದಲ್ಲಿ ಪಂಪಾಪತಿಯೆಂಬ ಶಿವಾಲಯವಿದೆ. ಶಿಖರದಲ್ಲಿ ಆಂಜನೇಯನ ಗುಡಿಯಿದೆ. ಅಯೋಧ್ಯೆಯಲ್ಲಿ ರಾಮನ ದರ್ಶನ ಮಾಡಿದವರು ಅದರ ಪೂರ್ಣಫಲವು ಲಭಿಸಬೇಕಾದರೆ ಅಂಜನಾದ್ರಿಯನ್ನೂ ಬಳಿಕ ತಮಿಳುನಾಡಿನ ರಾಮೇಶ್ವರವನ್ನೂ ಸಂದರ್ಶಿಸಬೇಕೆಂಬ ಕಟ್ಟಳೆಯಿರುವುದರಿಂದ, ಉತ್ತರದ ರಾಜ್ಯಗಳಿಂದ ಪ್ರತಿನಿತ್ಯವೂ ಭಕ್ತವೃಂದವು ಧುಮ್ಮಿಕ್ಕುತ್ತಲೇ ಇರುತ್ತದೆ. ಉತ್ತರದೇಶದ ರಾಮಪಂಥೀಯರೇ ಅಲ್ಲಿಗೆ ಅರ್ಚಕರು. ಕನ್ನಡನಾಡಿನ ವಿವಿಧ ಭಾಗಗಳಿಂದ ಭಕ್ತರು ಪಾದಯಾತ್ರೆಯಲ್ಲಿ ಅಲ್ಲಿಗೆ ಹೋಗುವ ಪರಿಪಾಠವೂ ಬೆಳೆದುಬಂದಿದೆ.

**ಮುದೇನೂರು:** ಕುಷ್ಟಗಿ ತಾಲ್ಲೂಕಿಗೆ ಸೇರಿದ ಮುದೇನೂರು ಅಲ್ಲಿಂದ ೨೦ ಕಿಲೋಮೀಟರ್ ದೂರದಲ್ಲಿದೆ. ಅಲ್ಲಿನ ಚಂದ್ರಮೌಳೇಶ್ವರ ದೇವಾಲಯವು ಪುಣ್ಯಕ್ಷೇತ್ರವಾಗಿದೆ. ಪಾರ್ವತೀ ರಥೋತ್ಸವ, ಗೌರೀ ರಥೋತ್ಸವಗಳ ಎರಡು ದಿನಗಳ ಮಹೋತ್ಸವದಲ್ಲಿ ಕ್ರಮವಾಗಿ ಮಹಿಳೆಯರೇ, ಕುಮಾರಿಯರೇ ರಥವನ್ನು ಎಳೆದು, ಎಲ್ಲ ಸಾಂಸ್ಕೃತಿಕ ಸಭಾಕಾರ್ಯಗಳನ್ನೂ ಅವರೇ ನಿರ್ವಹಿಸುವುದು ಅಲ್ಲಿನ ವೈಶಿಷ್ಟ್ಯ. ಪುರುಷರು ಕೇವಲ ಭಕ್ತರಾಗಿ ವೀಕ್ಷಿಸುತ್ತಾರೆ.

**ಪುರ:** ಕುಷ್ಟಗಿ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೨೦ ಕಿಲೋಮೀಟರ್ ಅಂತರದಲ್ಲಿ ಪುರವೆಂಬ ಅಪೂರ್ವವಾದ 'ಕೋಟಿಲಿಂಗ ದೇವಾಲಯ' ವೆಂಬ ಶಿವಾಲಯವಿದೆ. ಸೋಮೇಶ್ವರ ದೇವಾಲಯವು ಅಲ್ಲಿನ ಪ್ರಧಾನ ತೀರ್ಥವಾಗಿದೆ. ಅದರ ಸುತ್ತಲೂ ಸಣ್ಣ ಸಣ್ಣ ಗುಡಿಗಳು ಮತ್ತು ಹಜಾರದಲ್ಲಿ ಒಂದೊಂದು ದೊಡ್ಡಲಿಂಗದಲ್ಲಿಯೂ ಬೇಕಾದಷ್ಟು ಲಿಂಗಗಳನ್ನು ಕೆತ್ತಿ ನಿರ್ದಿಷ್ಟ ವಿನ್ಯಾಸದಲ್ಲಿ ಸ್ಥಾಪಿಸಿದ್ದಾರೆ. ಅದನ್ನೆಲ್ಲ ನೋಡುತ್ತಿದ್ದರೆ ಕರ್ನಾಟಕದಲ್ಲಿ ಈ ಪರಿಯ ಒಂದು ಕ್ಷೇತ್ರವೂ ಉಂಟೆ ಎಂದು ಮೂಕವಿಸ್ಮಿತರಾಗಿ ನಿಲ್ಲುತ್ತೇವೆ. ಎಲ್ಲವೂ ಸೇರಿ ೧ ಕೋಟಿ ೮ ಲಿಂಗಗಳಿವೆಯೆಂದು ಎಣಿಕೆ ಮಾಡಿದ್ದಾರೆ. ಈ ಹಿಂದೆ ಒಂದು ಲಿಂಗ ''ನನಗೆ ನೈವೇದ್ಯ ತೋರಿಸಲಿಲ್ಲ'' ಎಂದು ಮುನಿಸಿಕೊಂಡು ಗುಡಿಯಿಂದ ಹೊರಬಂದು ಬೇವಿನಮರದ ಬುಡದಲ್ಲಿ ಕುಳಿತುಬಿಟ್ಟಿತು. ಈಗಲೂ ಅಲ್ಲಿಯೇ ಪೂಜೆಗೊಳ್ಳುತ್ತಿದ್ದು 'ಮುನಿಸುಲಿಂಗ' ಎಂದು ಹೆಸರಾಗಿದೆ. ಅದರಿಂದ ಈಗ ಎತ್ತರವಾದ ಕಂಬದಮೇಲೆ ತಿರುಗಣೆ ತಟ್ಟೆಯೊಂದಿದ್ದು, ಅದರ ಮೇಲೆ ನೈವೇದ್ಯವನ್ನಿಟ್ಟು ನಿಧಾನವಾಗಿ ಒಂದು ಸುತ್ತು ತಿರುಗಿಸಿ, ಎಲ್ಲ ಲಿಂಗಗಳೂ ಒಪ್ಪುವಂತೆ ಸಮರ್ಪಿಸುತ್ತಾರೆ.

## ರಾಯಚೂರು

**ಕುರುವಪುರ:** ರಾಯಚೂರು ಜಿಲ್ಲಾಕೇಂದ್ರದಿಂದ ೨೦ ಕಿಲೋಮೀಟರ್ ದೂರದಲ್ಲಿ ಕೃಷ್ಣಾನದಿಯ ಮಧ್ಯದಲ್ಲಿರುವ ಒಂದು ಪುಟ್ಟದಾದ ದ್ವೀಪಕ್ಷೇತ್ರವಾಗಿ ಕುರುವಪುರವು ಶೋಭಿಸುತ್ತಲಿದೆ. ಅದನ್ನು 'ಕುರುಗಡ್ಡೆ' ಯೆಂದೂ ಕರೆಯುತ್ತಾರೆ. ನದಿಯ ಅಂಚಿಗೇ ಇರುವ ನಯನಾಭಿರಾಮವಾದ ಎತ್ತರವಾದ ತಾಣದಲ್ಲಿ ಪ್ರಥಮ ದತ್ತಾವತಾರಿಗಳೆನಿಸಿದ ಶ್ರೀಪಾದ ಶ್ರೀವಲ್ಲಭರೆಂಬ (೧೩೨೦) ಸಿದ್ಧಪುರುಷರ ದೇವಾಲಯವಿದೆ. ಅವರು ಕೃಷ್ಣಾನದಿಗಿಳಿದು ಕಣ್ಮರೆಯಾಗಿ ಅವತಾರ ಸಮಾಪ್ತಿ ಮಾಡಿದುದರಿಂದ, ಅವರ ಸಮಾಧಿಯೇನೂ ಅಲ್ಲಿಲ್ಲ. ಶ್ರೀಗುರುದತ್ತಾತ್ರೇಯರನ್ನು ಕುರಿತಂತೆ 'ಗುರುಚರಿತ್ರೆ'ಯೆಂಬ ಪಾರಾಯಣ ಗ್ರಂಥವಿರುವಂತೆಯೇ ಈ ಮಹಾತ್ಮರನ್ನು ಕುರಿತಂತೆಯೂ 'ಶ್ರೀಪಾದಶ್ರೀವಲ್ಲಭರ ದಿವ್ಯಚರಿತಾಮೃತ' ಎಂಬ ೫೩ ಅಧ್ಯಾಯಗಳ ಪುಣ್ಯಪಾರಾಯಣಚರಿತೆಯಿದೆ. ಶ್ರೀಪಾದ ಶ್ರೀವಲ್ಲಭ ಜಯಂತಿ, ಗುರುದ್ವಾದಶಿ, ದತ್ತಜಯಂತಿ, ಗುರುಪ್ರತಿಪದಾ, ಮಹಾಶಿವರಾತ್ರಿ, ಶ್ರಾವಣದೀಪ ಮುಂತಾದ ವಾರ್ಷಿಕ ಮಹೋತ್ಸವಗಳಲ್ಲದೆ ಪುಷ್ಪಾಲಂಕಾರ, ಪಲ್ಲಕ್ಕಿ ಉತ್ಸವ, ದೀಪೋತ್ಸವ, ಭಜನೆ, ನಾಟ್ಯ ಎಂಬುವು ನಡೆಯುತ್ತಲೇ ಇರುತ್ತವೆ. ಅವೆಲ್ಲವೂ ಆಸ್ತಿಕರನ್ನು ಭಕ್ತಿಸಾಗರದಲ್ಲಿ ಅವಗಾಹನಗೊಳಿಸುತ್ತವೆ. ''ದಿಗಂಬರಾ ದಿಗಂಬರಾ ಶ್ರೀಪಾದ ವಲ್ಲಭ ದಿಗಂಬರಾ ದಿಗಂಬರಾ ದಿಗಂಬರಾ ದತ್ತಾತ್ರೇಯ ದಿಗಂಬರಾ'' ಎಂಬುದೇ ಅಲ್ಲಿನ ದಿವ್ಯ ಮಂತ್ರ.

**ನಾರದಗಡ್ಡೆ:** ಕುರುಗಡ್ಡೆಯಂತೆಯೇ ಕೃಷ್ಣಾನದಿಯೊಳಗೆ ನಾರದ ಮಹರ್ಷಿಗಳ ತಪೋಭೂಮಿಯಾದ ನಾರದಗಡ್ಡೆ ಎಂಬ ಪುಣ್ಯಕ್ಷೇತ್ರವಿದೆ. ನಾರದರು ಕೈಲಾಸದ ಶಿವನ ಸಭೆಗೆ ಹೋಗುವಾಗ, ಗಾನರಸದಲ್ಲಿ ಮೈಮರೆತಿದ್ದ ಅವರು, ತಮ್ಮ ಕಾಲನ್ನು ಗಣಾಧೀಶನೊಬ್ಬನಿಗೆ ತಾಗಿಸಿಬಿಟ್ಟರು. ಕುಪಿತನಾದ ಗಣಾಧೀಶನು 'ನೀನು ದೇವಲೋಕ ವಂಚಿತನಾಗು' ಎಂದು ಶಪಿಸಿದನು. ಅದರ ಪರಿಹಾರಾರ್ಥವಾಗಿ ನಾರದರು ಆ ಕ್ಷೇತ್ರದಲ್ಲಿ ತಪಸ್ಸು ಮಾಡಿ ಶಾಪಮುಕ್ತರಾದರು. ಅದರ ಕುರುಹಾಗಿ ಅಲ್ಲಿ ನಾರದಮುನಿಗಳ ಒಂದು ದೇವಾಲಯವಿದೆ. ಅದರ ಜೊತೆಗೆ ವೈರಾಗ್ಯನಿಧಿಗಳೆನಿಸಿದ ಚನ್ನಬಸವಸ್ವಾಮಿಗಳೆಂಬ (೧೫೫೦) ಮಹಾತ್ಮರು ಸ್ಥಾಪಿಸಿದ ವೀರಶೈವ ಮಠವೊಂದಿದೆ. ಅಲ್ಲಿ ವಾರ್ಷಿಕವಾಗಿ ನಡೆಯುವ ೭ ದಿನಗಳ ಜಾತ್ರೆಯು 'ನಾರದಗಡ್ಡೆ ಮಹಾಜಾತ್ರೆ' ಯೆಂದೇ ಖ್ಯಾತವಾಗಿ, ಲಕ್ಷಾವಧಿ ಭಕ್ತರನ್ನು ಬರಮಾಡಿಕೊಳ್ಳುತ್ತದೆ.

**ಜಲದುರ್ಗ:** ಲಿಂಗಸುಗೂರು ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೨೭ ಕಿಲೋಮೀಟರುಗಳ ದೂರದಲ್ಲಿದೆ. ಕೃಷ್ಣಾ ನದಿಯ ನಡುವಣ ನಿಸರ್ಗನಿರ್ಮಿತ ರಮಣೀಯ ತೀರ್ಥವಾಗಿದೆ. ೭ ಸುತ್ತಿನ ಕೋಟೆಯಿಂದಾವೃತವಾಗಿದೆ. ಅಲ್ಲಿರುವ ಕೃಷ್ಣಾನದಿಯಲ್ಲಿ ಬ್ರಹ್ಮತೀರ್ಥ, ವಿಷ್ಣುತೀರ್ಥ, ರುದ್ರತೀರ್ಥ ಮುಂತಾದ ನಾಮಾಂಕಿತ ೧೮ ತೀರ್ಥಗಳಿವೆ. ಅಕ್ಷಯತೃತೀಯದಂದು ತೀರ್ಥಸ್ನಾನದ ದೊಡ್ಡಜಾತ್ರೆ ಜರುಗುತ್ತದೆ.

**ನವಲಿ:** ಗಂಗಾವತಿ ತಾಲ್ಲೂಕಿಗೆ ಸೇರಿದ ನವಲಿಯು ಅಲ್ಲಿಂದ ೩೫ ಕಿಲೋಮೀಟರ್ ದೂರದಲ್ಲಿದ್ದು ಜಡೆಶಂಕರ, ವೀರಭದ್ರ, ಭೋಗಾಪುರೇಶ ಗುಡಿಗಳಿಂದೊಡಗೂಡಿದ ಪುಣ್ಯತೀರ್ಥವಾಗಿದೆ. ಭೋಗಾಪುರೇಶನೆನಿಸಿದ ಹನುಮಂತನು ಸ್ವಲ್ಪ ಭಿನ್ನನಾಗಿದ್ದರೂ ಪೂಜಿಸುತ್ತಿರುವುದು ವಿಶೇಷ ಸಂಗತಿಯಾಗಿದೆ. ಶ್ರೀರಾಮಕೃಷ್ಣ ಪರಮಹಂಸರ ಕಾಲದಲ್ಲಿ ದಕ್ಷಿಣೇಶ್ವರದಲ್ಲಿ ಭಿನ್ನವಾದ ದೇವವಿಗ್ರಹಗಳನ್ನು ಪೂಜಿಸಬಹುದೇ ಎಂಬ ಪ್ರಶ್ನೆ ಉದ್ಭವಿಸಿತ್ತು. ಆಗ ಪರಮಹಂಸರು ''ನಿಮ್ಮ

ತಂದೆತಾಯಿಗಳ ಕೈಕಾಲೇನಾದರೂ ಮುರಿದುಹೋಗಿದ್ದರೆ ಅವರನ್ನು ರಕ್ಷಿಸದೆ ಬೀದಿಪಾಲು ಮಾಡಿಬಿಡುತ್ತೀರಾ'' ಎಂದು ಪ್ರಶ್ನಿಸುತ್ತಲೇ ಭಿನ್ನಮೂರ್ತಿ ಪೂಜೆಯನ್ನು ಸಮರ್ಥಿಸಿದ್ದಾರೆ.

**ಕಾಡಲೂರು:** ರಾಯಚೂರು ತಾಲ್ಲೂಕು ಕಾಡಲೂರು ಕೃಷ್ಣಾ ಮತ್ತು ಭೀಮಾನದಿಗಳ ಸಂಗಮಸ್ಥಾನವಾಗಿ ಅತ್ಯಂತ ಪುಣ್ಯ ತೀರ್ಥ ವಾಗಿದೆ. ವಿಜಯನಗರ ಸಾಮ್ರಾಜ್ಯದ ಅರಸರೂ ಅಲ್ಲಿಗೆ ಪುಣ್ಯ ಸ್ನಾನಕ್ಕಾಗಿ ಯಾತ್ರೆ ಹೋಗುತ್ತಿದ್ದರು.

**ಇಟಗಿ:** ಯಲಬುರ್ಗಿ ತಾಲ್ಲೂಕಿನ ಇಟಗಿಯು ಅಲ್ಲಿಂದ ೨೩ ಕಿಲೋಮೀಟರ್ ದೂರದಲ್ಲಿದ್ದ ಪುರಾತನ ವಿದ್ಯಾಕೇಂದ್ರವೂ ತೀರ್ಥ ಕೇಂದ್ರವೂ ಆಗಿದ್ದು, ಅಲ್ಲಿರುವ ಮಹಾದೇವ ದೇವಾಲಯವು ತನ್ನ ಶಿಲ್ಪಗಾಂಭೀರ್ಯದಿಂದಾಗಿ 'ದೇವಾಲಯಗಳ ಚಕ್ರವರ್ತಿ' ಯೆನಿಸಿದೆ.

**ಕೊಪ್ಪರ:** ದೇವದುರ್ಗ ತಾಲ್ಲೂಕಿನ ಕೊಪ್ಪರವು ಕೃಷ್ಣಾನದಿಯ ತೀರದ ತೀರ್ಥಕ್ಷೇತ್ರವಾಗಿ ನರಸಿಂಹಸ್ವಾಮಿಯ ಸನ್ನಿಧಿಯಿಂದ ರಾರಾಜಿಸುತ್ತಿದೆ.

## ಬಳ್ಳಾರಿ

**ಕುಮಾರಸ್ವಾಮಿ ಕ್ಷೇತ್ರ:** ತಾಲ್ಲೂಕು ಕೇಂದ್ರವಾದ ಸಂಡೂರಿನಿಂದ ೧೬ ಕಿಲೋಮೀಟರ್ ದೂರದಲ್ಲಿರುವ ಕುಮಾರಸ್ವಾಮಿ ಕ್ಷೇತ್ರವು ಲೋಹಗಿರಿ, ಸ್ಕಂದಗಿರಿ ಎಂದು ಕರೆಯಲಾಗಿರುವ ರಮ್ಯವಾದ ಪರ್ವತದ ಮೇಲಿದೆ. ಕಾರ್ತಿಕೇಯ, ಸುಬ್ರಹ್ಮಣ್ಯ, ಸ್ಕಂದ, ಷಣ್ಮುಖ ಎಂಬ ವಿವಿಧ ನಾಮಗಳಿಂದ ರಂಜಿಸುವ ಆ ಸ್ವಾಮಿಯು ತಾರಕಾಸುರನ ಸಂಹಾರಕ್ಕಾಗಿ ಅವತರಿಸಿ, ದೇವಸೇನಾನಿಯಾಗಿ ಮುಂದೆನಿಂತು ಆ ರಕ್ಕಸನನ್ನು ಸಂಹರಿಸಿ ಆ ಲೋಹಗಿರಿಯಲ್ಲಿ ನೆಲೆಯಾಗಿದ್ದಾನೆ. ಶ್ರೀಕೃಷ್ಣನು ಗೀತೆಯಲ್ಲಿ ತನ್ನ ವಿಭೂತಿಗಳನ್ನು ಹೇಳುವಾಗ 'ಸೇನಾನಿಗಳಲ್ಲಿ ನಾನು ಸ್ಕಂದನಾಗಿದ್ದೇನೆ' ಎಂದು ಎತ್ತಿ ಹಿಡಿದಿದ್ದಾನೆ. ಸ್ವಾಮಿಯು ಅಲ್ಲಿನ ದೇವಾಲಯದಲ್ಲಿ ಏಕಮುಖ ದ್ವಿಬಾಹು ರೂಪನಾಗಿ ಪೂಜಿತನಾಗುತ್ತಿದ್ದಾನೆ. ಪಾರ್ವತೀ ದೇವಾಲಯ, ಹರಿಶಂಕರ ದೇವಾಲಯಗಳೂ ಅಲ್ಲಿವೆ. ಜೀವ ಜಲಧಾರೆಯಿಂದ ಕೂಡಿದ ಅನೇಕ ಪುಣ್ಯತೀರ್ಥಗಳಿದ್ದು, ಆ ಪೈಕಿ ಅಗಸ್ತ್ಯತೀರ್ಥವೆಂಬ ಕಲ್ಯಾಣಿಯು ನಾಲ್ಕು ದಿಕ್ಕುಗಳಿಂದಲೂ ಮೆಟ್ಟಿಲುಗಳಿಂದೊಡಗೂಡಿ ತುಂಬಾ ಸುಂದರವಾಗಿವೆ. ಲೋಹಗಿರಿಯು ಅಗಸ್ತ್ಯರ ತಪೋಭೂಮಿಯೂ ಹೌದು. ಕಾರ್ತಿಕಮಾಸ, ಹುಣ್ಣಿಮೆ ಮತ್ತು ಕೃತ್ತಿಕಾ ನಕ್ಷತ್ರ – ಈ ಮೂರೂ ಕೂಡಿದಾಗ ಆ ಸ್ವಾಮಿಯ ಜಾತ್ರೆ ನೆರವೇರುತ್ತದೆ. ಅದು ೫ ವರ್ಷಗಳ ಅವಧಿಯಲ್ಲಿ ಎರಡು ಬಾರಿ ಘಟಿಸುತ್ತದೆ. ಈ ಸುಬ್ರಮಣ್ಯನನ್ನು ಈ ಹಿಂದೆ ಸ್ತ್ರೀಯರು ದರ್ಶನ ಮಾಡುವಂತಿರಲಿಲ್ಲ. ಆದರೆ ಈಗ ಅವರಿಗೂ ದರ್ಶನ ಭಾಗ್ಯ ಪ್ರಾಪ್ತವಾಗಿದೆ. ಈ ಹೊತ್ತಿನಲ್ಲಿ ನಾವು ಘಾಟಿಸುಬ್ರಹ್ಮಣ್ಯ ಮತ್ತು ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಗಳನ್ನೂ ಸ್ಮರಿಸಬಹುದು.

**ಕೊಟ್ಟೂರು:** ತಾಲ್ಲೂಕು ಕೇಂದ್ರವಾಗಿರುವ ಕೊಟ್ಟೂರು ಹೆಮ್ಮೆಯ ವೀರಶೈವ ಪುಣ್ಯಕ್ಷೇತ್ರವಾಗಿದೆ. ಬಸವಲಿಂಗ ಸ್ವಾಮಿಗಳೆಂಬ (ಸು.೧೫೫೦) ಪವಾಡಪುರುಷರು, ದೇಶ ಸಂಚಾರ ಮಾಡುತ್ತಾ ಕೊಟ್ಟೂರಿಗೆ ಬಂದು, ಅಲ್ಲಿಯೇ ನೆಲೆಸಿ, ಧರ್ಮ ಪ್ರಚಾರ ಮಾಡಿ, ಜೀವಸಮಾಧಿ ಪಡೆದುಕೊಂಡರು. ಹೀಗಾಗಿ ಅದೊಂದು ಜಾಗೃತಕೇಂದ್ರವಾಗಿದೆ. ಕೊಟ್ಟೂರು ಅವರ ಲೀಲಾಭೂಮಿಯಾದುದರಿಂದ ಕೊಟ್ಟೂರೇಶ್ವರ ಎಂದೂ ಕರೆಯಲ್ಪಟ್ಟಿದ್ದಾರೆ. ಈಗ ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರರು ಸ್ಥಾಪಿಸಿ ಪೂಜಿಸಿದ ಲಿಂಗವಿರುವ 'ಮೂರ್ಕಲ್ಲುಮಠ' ಎಂಬ ತ್ರಿಕೂಟಾಚಲ ದೇವಾಲಯವಿದೆ. ಅವರ ಪೂಜೆ ನಡೆಯುವ ಲಿಂಗದಗುಡಿಯು 'ದೊಡ್ಡ ಮಠ' ವೆನಿಸಿದೆ. ಅವರು ಮೆರೆದ ಪವಾಡಗಳ ಪ್ರತೀಕವಾಗಿ 'ತೊಟ್ಟಿಲು ಮಠ'ವಿದೆ. ಅಲ್ಲೊಂದು ತೊಟ್ಟಿಲೂ ಇದೆ. ಸಂತಾನವಿಲ್ಲದವರು ಅಲ್ಲಿಗೆ ಹರಕೆ ಹೊತ್ತು ಭಕ್ತಿಯಿಂದ ನಡೆದುಕೊಂಡರೆ ಸಂತಾನವಂತರಾಗುತ್ತಾರೆ. ಅವರು ಯೋಗಸಮಾಧಿಯನ್ನು ಸ್ವೀಕರಿಸಿದ ತಾಣವು 'ಗಚ್ಚಿನಮಠ' ವೆನಿಸಿದೆ. ಹೀಗೆ ಕೊಟ್ಟೂರೇಶ್ವರರ ನಾಲ್ಕು ಪುಣ್ಯಕೇಂದ್ರಗಳು ಕೊಟ್ಟೂರಿನಲ್ಲಿವೆ. ವಾರ್ಷಿಕ ರಥೋತ್ಸವಕ್ಕೆ ಲಕ್ಷಾಂತರ ಭಕ್ತರು ನೆರೆಯುತ್ತಾರೆ. ೧೨೫ ಅಡಿ ಎತ್ತರಕ್ಕೆ ಕಟ್ಟುವ ರಥವು ಆ ಪ್ರಾಂತಕ್ಕೆಲ್ಲಾ ಬಹುದೊಡ್ಡದೆನಿಸಿದೆ. ದೆಹಲಿಯ ದೊರೆಯಾಗಿದ್ದ ಅಕ್ಬರನು ಸಮರ್ಪಿಸಿದ ಮಂಚವೊಂದು ಆ ಕ್ಷೇತ್ರದಲ್ಲಿ ವಿರಾಜಮಾನವಾಗಿದೆ.

**ಉಜ್ಜಿನಿ:** ಕೊಟ್ಟೂರು ತಾಲ್ಲೂಕಿಗೆ ಸೇರುವ ಉಜ್ಜಿನಿಯು ಅಲ್ಲಿಂದ ೧೫ ಕಿಲೋಮೀಟರ್ ದೂರದಲ್ಲಿದೆ. ವೀರಶೈವ ಪಂಚಪೀಠ ಪರಂಪರೆಗಳಲ್ಲೊಂದಾದ 'ಸದ್ಧರ್ಮಸಿಂಹಾಸನ' ವೆಂಬ ದಾರುಕಾಚಾರ್ಯರ ಪೀಠದಿಂದಾಗಿ ಉಜ್ಜಿನಿಯು ಗಣ್ಯವಾದ ಯಾತ್ರಾಸ್ಥಳವಾಗಿದೆ. ಮಠದೊಳಗೆ ಮರುಳುಸಿದ್ದೇಶ್ವರ ದೇವಾಲಯವಿದೆ. ಅಲ್ಲೊಂದು ಭಾರಿ ಗಾತ್ರದ ನಂದಿಯ ವಿಗ್ರಹವಿದೆ. ನೋಡುಗರನ್ನು ಚಕಿತಗೊಳಿಸುವ ಶಿಲ್ಪಕಲಾ ಸೌಂದರ್ಯವು ಆ ಮಠದಲ್ಲಿದೆ. ಅದರಿಂದಾಗಿ ''ಹಂಪೆಯನ್ನು ಹೊರಗೆ ನೋಡು ಉಜ್ಜಿನಿಯನ್ನು ಒಳಗೆ ನೋಡು'' ಎಂಬ ಗಾದೆಯೇ ಇದೆ.

## ವಿಜಯನಗರ

**ಹಂಪೆ:** ಹಂಪೆಯು ರಾಮಾಯಣಯುಗದ ಕಿಷ್ಕಿಂಧಾಪಟ್ಟಣವೆಂಬ ಕೀರ್ತಿಗೆ ಪಾತ್ರವಾಗಿದೆ. ತುಂಗಭದ್ರಾನದಿಯ ದಂಡೆಯಲ್ಲಿರುವ ಆ ಪಟ್ಟಣವು ವಿವಿಧ ಪರ್ವತಾವಳಿಗಳ ನಡುವೆ ಬೆಳೆದು ನಿಂತಿದೆ. ಶೃಂಗೇರಿಮಠದ ಜಗದ್ಗುರುಗಳು ಆಗಿದ್ದ ವಿದ್ಯಾರಣ್ಯ ಮುನಿಗಳು ಹಕ್ಕಬುಕ್ಕರೆಂಬ ವೀರಯೋಧರನ್ನು ಆಶೀರ್ವದಿಸಿ, ತಮ್ಮ ತಪೋಬಲದಿಂದ ಅವರಿಗೆ ಚಿನ್ನದ ಮಳೆಯನ್ನು ಸುರಿಸಿಕೊಟ್ಟು, ಸಾಮ್ರಾಜ್ಯ ನಿರ್ಮಾಣದ ಕಾರಣಪುರುಷರಾದರು. ೧೩೩೬ರಲ್ಲಿ ಸ್ಥಾಪನೆಗೊಂಡ ಆ ಸಾಮ್ರಾಜ್ಯವು ೩೦೦ ವರ್ಷಗಳ ಕಾಲ ಬಾಳಿಬದುಕಿ ಮೊಗಲರ ದಾಳಿಗಳಿಂದಾಗುತ್ತಿದ್ದ ದಾರುಣ ವಿಪತ್ತನ್ನು ತಡೆಗಟ್ಟಿ, ಹಿಂದೂಧರ್ಮದ ಪುನರುಜ್ಜೀವನವನ್ನು ಸಾಧಿಸಿತು. ಕೃಷ್ಣದೇವರಾಯನ ಕಾಲಕ್ಕೆ (೧೫೧೦) ತನ್ನ ವೈಭವದ ತುತ್ತತುದಿಯನ್ನೇರಿತು. ತರುವಾಯ ಮೊಗಲರ ಆಕ್ರಮಣಕ್ಕೆ ತುತ್ತಾಗಿ ನೆಲಸಮವಾಗಿ ಬಿಟ್ಟಿತು. ಆದರೆ ಅಲ್ಲಿನ ಭಕ್ತಿಸಾಮ್ರಾಜ್ಯವು ಮಾತ್ರ ನಾಶವಾಗದೆ ಇಂದಿನವರೆಗೂ ಉಳಿದುಕೊಂಡು ಬಂದಿದೆ. ಹತ್ತಾರು ಚದರ ಮೈಲಿಗಳ ವಿಸ್ತೀರ್ಣಕ್ಕೆ ವ್ಯಾಪಿಸಿರುವ ಆ ಪಟ್ಟಣವು ಅಗಣಿತ ವಿಸ್ಮಯಗಳನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡಿದೆ.

ವಿಜಯನಗರದ ಅರಸರ ಕುಲದೈವವಾದ ಪಂಪಾಪತಿ ಅಥವಾ ವಿರೂಪಾಕ್ಷ ದೇವಾಲಯವೇ ಹಂಪೆಯ ಪ್ರಮುಖ ತೀರ್ಥಕ್ಷೇತ್ರ

ವೆಂದು ಹೇಳಬಹುದು. ೧೧ ಅಂತಸ್ತುಗಳ ಕಣ್ಸೆಳೆಯುವ ರಾಜಗೋಪುರದಿಂದ ಕೂಡಿದ ಆ ದೇವಾಲಯವು ಶಿಲ್ಪಕಲೆಯ ದೃಷ್ಟಿಯಿಂದಲೂ ಶ್ರೇಷ್ಠ ಕಲಾಕೃತಿಯಾಗಿದೆ. ಆ ರಾಜಗೋಪುರದ ನೆರಳು ಸಮೀಪದ ಒಂದು ಗೋಡೆಯ ಮೇಲೆ ತಲೆಕೆಳಕಾಗಿ ಬೀಳುವುದು, ಯುಗಾದಿ ಪಾಡ್ಯದ ಉದಯರವಿಯ ಕಿರಣಗಳು ಗರ್ಭಗುಡಿಯ ವಿರೂಪಾಕ್ಷ ಲಿಂಗದ ಮೇಲೆ ಬೀಳುವುದು ಎಂಬ ವಾಸ್ತು ಚಮತ್ಕಾರಗಳು ಅಲ್ಲಿವೆ. ಪಂಪಾಂಬಿಕೆಯೆಂಬ ಪಾರ್ವತಿಯದೇವಾಲಯ, ಭುವನೇಶ್ವರಿಯೆಂಬ ಕನ್ನಡಾಂಬೆಯ ದೇವಾಲಯಗಳು ಆ ಪ್ರಾಕಾರದೊಳಗೇ ಇವೆ. ಅಲ್ಲಿನ ಕಲ್ಯಾಣಮಂಟಪದಲ್ಲಿ ಸೊಗಸಾದ ಭಿತ್ತಿಚಿತ್ರಗಳಿವೆ. ಚೈತ್ರಪೂರ್ಣಿಮೆಯಂದು ಅಲ್ಲಿ ಭವ್ಯವಾದ ರಥೋತ್ಸವವು ಜರುಗುತ್ತದೆ. ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿ ವಿದ್ಯಾರಣ್ಯರ ಸಮಾಧಿಮಂದಿರವೂ ಇದೆ.

ಹಂಪೆಯಲ್ಲಿ ಹಲವಾರು ದೇವಾಲಯಗಳಿದ್ದು ಅವೆಲ್ಲವೂ ಮೊಗಲರ ದಾಳಿಯಿಂದ ವಿರೂಪಗೊಂಡಿವೆಯಾದರೂ, ಹೇಗೋ ಜೀವ ಹಿಡಿದುಕೊಂಡು ನಿಂತಿವೆ. ಅಲ್ಲಿನ ವಿಜಯವಿಟ್ಠಲ ದೇವಾಲಯವನ್ನು ಒಂದೇ ಹೆಬ್ಬಂಡೆಯಲ್ಲಿ ಕಡೆದಿರುವ ಕೌಶಲ ಲೋಕೋತ್ತರವಾಗಿದೆ. ಅಲ್ಲಿರುವ ಭವ್ಯಸಭಾಮಂಟಪದ ಶಿಲಾಸ್ತಂಭಗಳನ್ನು ಮಿಡಿದರೆ ಸಾಕು, ಅವು ಸಂಗೀತದ ಸಪ್ತಸ್ವರಗಳನ್ನು ಹೊಮ್ಮಿಸುತ್ತವೆ! ಆ ದೇವಾಲಯಕ್ಕೆ ಸಮೀಪದ ಬಯಲುಮಂಟಪಗಳಲ್ಲಿರುವ ಸಾಸಿವೆ ಕಾಳುಗಣಪತಿ, ಕಡಲೆಕಾಳು ಗಣಪತಿಗಳು ೧೨ ಅಡಿ ಎತ್ತರದ ಭವ್ಯಮೂರ್ತಿಗಳಾಗಿದ್ದು, ಆ ಹೆಸರಿಗಿಂತ ಬೇರೆಯೇ ಆಗಿವೆ. ಅಂತೆಯೇ ಅಲ್ಲಿರುವ ೨೨ ಅಡಿ ಎತ್ತರದ ಪದ್ಮಾಸನಸ್ಥ ಲಕ್ಷ್ಮೀನರಸಿಂಹಮೂರ್ತಿಯೂ ರುದ್ರಗಂಭೀರವಾಗಿದ್ದು, ದಾಳಿಕೋರರು ಲಕ್ಷ್ಮೀದೇವಿಯನ್ನು ಭಗ್ನಗೊಳಿಸಿದ್ದಾರೆ. ಕೋದಂಡರಾಮದೇವಾಲಯದಲ್ಲಿ ರಾಮಸೀತಾಲಕ್ಷ್ಮಣಸುಗ್ರೀವರ ಮೂರ್ತಿಗಳನ್ನು ಒಂದೇ ಬಂಡೆಯಲ್ಲಿ ಕೊರೆದಿದ್ದಾರೆ. ಹೀಗೆಯೇ ಹಂಪೆಯ ಅಚ್ಯುತರಾಯ ದೇವಾಲಯ, ಹಜಾರರಾಮ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ಗಾಣಗಿತ್ತಿ ಜೈನ ದೇವಾಲಯ, ಉದ್ದಾನವೀರಭದ್ರ ದೇವಾಲಯ, ಚಂದ್ರಶೇಖರ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಪಟ್ಟದ ಎಲ್ಲಮ್ಮ ದೇವಾಲಯ – ಎಂಬಿವೆಲ್ಲವೂ ಅಲ್ಲಿನ ಭಕ್ತಿಸಾಮ್ರಾಜ್ಯದ ಪ್ರತಿನಿಧಿಗಳಾಗಿವೆ. ಈ ಪರಿಯಲ್ಲಿಯೇ ಶಿವರಾಮಾವಧೂತರ ಆಶ್ರಮ, ವ್ಯಾಸರಾಯಮಠ, ದೇವಾಂಗ ಜನಾಂಗದ ಹೇಮಕೂಟ ಗಾಯತ್ರಿಪೀಠ ಮುಂತಾದ ಭಕ್ತಿಕೇಂದ್ರಗಳು ಹಂಪಿಯನ್ನಲಂಕರಿಸಿವೆ.

ಈ ದೇವಾಲಯಗಳಲ್ಲದೆ ಎದುರುಬಸವ, ಚಕ್ರತೀರ್ಥ, ಕೋಟಿಲಿಂಗ, ಬಡವಿಲಿಂಗ, ಸುಗ್ರೀವಗವಿ, ವಾಲಿದಿಬ್ಬ, ಮಾನವಮಿದಿಬ್ಬ, ಸೀತೆಯಸೆರಗು, ತುಲಾಭಾರ ಮಂಟಪ, ಪುರಂದರಮಂಟಪ, ಕಮಲ್‌ಮಹಲ್ – ಎಂಬಂತೆ ಬೇಕಾದಷ್ಟು ದರ್ಶನೀಯ ಪುಣ್ಯಸ್ಮಾರಕಗಳಿವೆ. ಚಕ್ರತೀರ್ಥವೆಂಬುದು ಪವಿತ್ರ ಪುಷ್ಕರಿಣಿಯಾಗಿದ್ದು, ಅದರ ಸಮೀಪದ ವಿಶಾಲವಾದ ಹಾಸುಬಂಡೆಯಮೇಲೆ, ಒಂದು ದೊಡ್ಡದಾದ ಲಿಂಗವನ್ನು ಕಡೆದು, ಅದರ ಸುತ್ತ ಸಾಲುಸಾಲಾಗಿ ಸಾವಿರಲಿಂಗಗಳನ್ನು ಕಡೆದಿರುವ ತಾಣವೇ 'ಕೋಟಿಲಿಂಗ'ವೆನಿಸಿದೆ. ಅಲ್ಲಿ ಶಿವರಾತ್ರಿಗೆ ಮಾತ್ರವೇ ಪೂಜೆ. ಬಡಹೆಂಗಸೊಬ್ಬಳ ಮುಗ್ಧಭಕ್ತಿಗೊಲಿದ ಶಿವನು ಬೃಹದಾಕಾರದ ಲಿಂಗರೂಪದಲ್ಲಿ ದರ್ಶನ ಕೊಟ್ಟುದೇ 'ಬಡವಿಲಿಂಗ' ವೆನಿಸಿ ಅದಕ್ಕೂ ಶಿವರಾತ್ರಿಯ ಪೂಜೆ ಸಲ್ಲುತ್ತದೆ. ಅದು ಬೃಹತ್ತಿನಲ್ಲಿ ದಕ್ಷಿಣ ಭಾರತದಲ್ಲಿಯೇ ಎರಡನೆಯ ಅತಿದೊಡ್ಡ ಲಿಂಗವೆಂಬ ಗೌರವಕ್ಕೆ ಪಾತ್ರವಾಗಿದೆ. ತುಲಾಭಾರ ಮಂಟಪದಲ್ಲಿ ಅಂದಿನ ದೊರೆಗಳು ಚಿನ್ನದಿಂದಲೇ ತುಲಾಭಾರವನ್ನು ತೂಗಿಸಿಕೊಂಡು ದೇವರಿಗೆ ಸಮರ್ಪಿಸುತ್ತಿದ್ದರು.

ಹಂಪೆಯಲ್ಲೀಗ ಒಂದು ಕನ್ನಡ ವಿಶ್ವವಿದ್ಯಾನಿಲಯವೇ ಇದೆ. ಹಂಪೆಯು ಈಗ ವಿಶ್ವಪರಂಪರೆಗೆ ಸೇರಿದ ಪಟ್ಟಣವಾಗಿದ್ದು, ನಿತ್ಯವೂ ದೇಶವಿದೇಶಗಳ ಯಾತ್ರಿಕರು ಅಲ್ಲಿಗೆ ಧುಮ್ಮಿಕ್ಕುತ್ತಲೇ ಇರುತ್ತಾರೆ. ಹಂಪೆಗೆ ಸಂಬಂಧಿಸಿದಂತೆ, ವಿದೇಶಿಯಾತ್ರಿಕರ ಬರವಣಿಗೆಗಳೂ ಸೇರಿದಂತೆ ಹತ್ತಾರು ಸಾವಿರಪುಟಗಳ ಪ್ರಾಚೀನಕಾಲದ ಮತ್ತು ನವೀನ ಕಾಲದ ಸಾಹಿತ್ಯವು ರಚಿತವಾಗಿದೆ. ಅವು ಇಂಗ್ಲಿಷ್, ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿವೆ. ಭರತಖಂಡದ ಯಾವುದೇ ಕ್ಷೇತ್ರಕ್ಕೂ ಇಷ್ಟು ವಿಶಾಲವಾದ ಸಾಹಿತ್ಯವಿಲ್ಲ.

**ಮೈಲಾರ:** ಹೂವಿನಹಡಗಲಿ ತಾಲ್ಲೂಕಿಗೆ ಸೇರಿದ ಮೈಲಾರವು ಅಲ್ಲಿಂದ ೩೩ ಕಿಲೋಮೀಟರುಗಳ ದೂರದಲ್ಲಿದೆ. ಕರ್ನಾಟಕದಲ್ಲಿ ಸುಮಾರು ೧೪ ಮೈಲಾರಕ್ಷೇತ್ರಗಳಿದ್ದು, ಆ ಪೈಕಿ ಈ ಹೂವಿನಹಡಗಲಿಯ ಮೈಲಾರವೇ ಅವುಗಳಿಗೆಲ್ಲ ಕಿರೀಟಪ್ರಾಯವಾದುದಾಗಿದೆ. ಇಲ್ಲಿ ಕ್ಷೇತ್ರಾಧಿಪತಿಯಾಗಿ ಮೈಲಾರನು ನೆಲೆಸಿದ್ದು, ಅವನನ್ನು ಮಾರ್ತಾಂಡ ಭೈರವ, ಮಲ್ಲಾರಿ, ಮಾಲತೇಶ ಎಂದೆಲ್ಲ ಕರೆಯುತ್ತಾರೆ. ಮಣಿಸುರ, ಮಲ್ಲಾಸುರ ಎಂಬ ದುಷ್ಟದಾನವರನ್ನು ಸಂಹರಿಸಿದ ಮೈಲಾರನು ಶಿವನ ಅವತಾರಿಯಾಗಿದ್ದಾನೆ.

ಮೈಲಾರದ ದೇವಾಲಯದ ಗರ್ಭಗೃಹದಲ್ಲಿ ಉದ್ಭವ ಮೈಲಾರ ಲಿಂಗವಿದೆ. ಅದರ ಹಿಂಬದಿಗೆ ಮೈಲಾರನ ಆಳೆತ್ತರದ ಮಣ್ಣಿನಿಂದ ಮಾಡಿ ಪ್ರತಿಷ್ಠಾಪಿಸಿದ ಚತುರ್ಭುಜ ಮೂರ್ತಿಯಿದೆ. ನಮ್ಮ ನಾಡಿನಲ್ಲಿರುವ ಕಂಸಾಳೆ ಗುಡ್ಡರ ಸಂಪ್ರದಾಯ, ನೀಲಗಾರರ ಸಂಪ್ರದಾಯ ಎಂಬ ಜಾನಪದ ಮೂಲದ ಭಕ್ತಿಸಂಪ್ರದಾಯಗಳಂತೆ, ಗೊರವರ ಸಂಪ್ರದಾಯವೆಂಬ ಭಕ್ತಿಸಂಪ್ರದಾಯಕ್ಕೆ ಮೈಲಾರವೇ ಮೂಲಸ್ಥಾನವಾಗಿದೆ. ಅಲ್ಲಿ ದೀಕ್ಷಿತರಾದವರು 'ಗೊರವರು' ಎನಿಸಿಕೊಳ್ಳುತ್ತಾರೆ. ಅವರ ವೇಷಭೂಷಣಗಳು ವರ್ಣಮಯವಾಗಿದ್ದು, 'ಗೊರವರ ಕುಣಿತ' ಎಂಬ ಅವರ ನರ್ತನ ಸೇವೆಯೂ ಅಷ್ಟೇ ಆಕರ್ಷಕವಾಗಿರುತ್ತದೆ. ಇಲ್ಲೊಂದು ವಿಶೇಷವೆಂದರೆ ಬ್ರಾಹ್ಮಣರೇ ಆದಿಯಾಗಿ ಎಲ್ಲ ಹಿಂದೂಜಾತಿಜನಾಂಗಗಳಲ್ಲಿಯೂ ಮೈಲಾರನ ಒಕ್ಕಲಿನವರಿದ್ದಾರೆ.

ಪ್ರತಿ ಹುಣ್ಣಿಮೆಗೂ ಮೈಲಾರದಲ್ಲಿ ಸಾವಿರಾರು ಭಕ್ತರು ನೆರೆದು ಅದೊಂದು ಚಿಕ್ಕಜಾತ್ರೆಯೇ ಆಗುತ್ತದೆ. ವಾರ್ಷಿಕ ಜಾತ್ರೆಯ ಸಂಭ್ರಮವಂತೂ ಅವರ್ಣನೀಯ. ಆ ಹೊತ್ತಿನಲ್ಲಿ ದಪ್ಪಗಾತ್ರದ ಸುಮಾರು ೧೦೦ ಅಡಿ ಉದ್ದದ ಕಬ್ಬಿಣದ ಸರಪಳಿಯೊಂದನ್ನು ಆಧಾರಕ್ಕೆ ಬಂಧಿಸಿ, ಗೊರವಯ್ಯ ಶ್ರೇಷ್ಠನೊಬ್ಬನು ಅದರ ಇನ್ನೊಂದು ತುದಿಯನ್ನು ಕೈಲಿ ಹಿಡಿದು, ಜಗ್ಗಿಸಿಜಗ್ಗಿಸಿ ಎಳೆದೇ ಎರಡು ತುಂಡು ಮಾಡಿಬಿಡುವ ಪವಾಡವು ನೋಟಕರನ್ನು ಉಸಿರು

ಬಿಗಿಹಿಡಿದು ನಿಲ್ಲುವಂತೆ ಮಾಡುತ್ತದೆ. ಅಂತೆಯೇ ಅನೇಕ ಗೊರವಯ್ಯಗಳು ತಮ್ಮ ನಾಲಗೆ, ಕೆನ್ನೆಗಳು, ಗಂಟಲು, ಹೊಟ್ಟೆ, ಕೈಕಾಲುಗಳ ಮಾಂಸಖಂಡಗಳು ಮೊದಲಾದ ಅಂಗಗಳಿಗೆ ಅತ್ತಿಂದಿತ್ತ ಬರುವಂತೆ ನೀಳವಾದ ಕಬ್ಬಿಣದ ಕೋಲುಗಳನ್ನು ಚುಚ್ಚಿಕೊಂಡು ಎಳೆಯುವ 'ಶಸ್ತ್ರಪವಾಡ' ವನ್ನೂ ಮೆರೆಯುತ್ತಾರೆ. ಆ ಜಾತ್ರೆಯ ವೇಳೆಯಲ್ಲಿ ನಡೆಯುವ 'ಕಾರಣಿಕೋತ್ಸವ'ವೇ ಎಲ್ಲಕ್ಕಿಂತ ಪ್ರಧಾನವಾದುದು. ಆಗ ವಿಸ್ತಾರವಾದ ಬಯಲಿನ ನಡುವೆ ಹೂಡುವ ಸುಮಾರು ೨೦ ಅಡಿ ಎತ್ತರದ ಮೈಲಾರದೇವರ 'ಬಿಲ್ಲುಗಂಬ'ವನ್ನು ಪ್ರಧಾನ ಗೊರವಯ್ಯನೊಬ್ಬನು ಏರಿಹೋಗುತ್ತಾನೆ. ತುದಿಮುಟ್ಟಿದ ಬಳಿಕ, ರಾಷ್ಟ್ರದ ವರ್ಷಭವಿಷ್ಯದ ರೂಪದಲ್ಲಿ ಒಗಟಿನಂತಹ 'ಕಾರಣಿಕವಾಕ್ಯ' ವನ್ನು ದೈವಾವೇಶದಿಂದ ಉಚ್ಚಕಂಠದಿಂದ ಘೋಷಿಸಿ, ಧೊಪ್ಪನೆ ಕೆಳಕ್ಕೆ ಬಿದ್ದುಬಿಡುತ್ತಾನೆ. ಆಗ ಕೆಳಗೆ ನಿಂತವರು ಅವನನ್ನು ಆತುಹಿಡಿದು ಗುಡಿಗೊಯ್ದು ಶೈತ್ಯೋಪಚಾರ ಮಾಡುತ್ತಾರೆ. ಆ ಹೊತ್ತಿನಲ್ಲಿ ಲಕ್ಷಾಂತರ ಜನರು ನೆರೆದಿದ್ದರೂ ಕಾರಣಿಕ ವಾಕ್ಯವನ್ನಾಲಿಸಲು, ನೆಲಕ್ಕೊಂದು ಸೂಜಿಬಿದ್ದರೆ ಉಂಟಾಗುವ ಸದ್ದು ಕೂಡ ಕೇಳಿಸುವಂತಹ ಕಡುಮೌನವು ಆವರಿಸಿಬಿಡುತ್ತದೆ. ಹಳೆಯ ಕಾಲದಲ್ಲಿ ಹೇಗೋ ಹಾಗೆಯೇ ಭಕ್ತರು ರಾಜ್ಯದ ನಾನಾ ದಿಕ್ಕುಗಳಿಂದ ಎತ್ತಿನಬಂಡಿಗಳಲ್ಲಿಯೇ ರೊಟ್ಟಿ ಬುತ್ತಿಗಳ ಸಹಿತರಾಗಿ ಬಯಲಿನಲ್ಲಿ ಬೀಡುಬಿಟ್ಟು ಜಾತ್ರಾನಂದವನ್ನು ಸವಿಯುತ್ತಾರೆ. ಏಳು ಕೋಟಿ ಮೈಲಾರ ಎಂದು ಉಗ್ಗಡಿಸುವ ಆ ಕ್ಷೇತ್ರಮಹಾತ್ಮ್ಯವನ್ನು ಹೇಳುವ 'ಮೈಲಾರ ಮಹಾತ್ಮೆ' ಎಂಬ ಗ್ರಂಥವೇ ಇದೆ.

**ಮದಲಗಟ್ಟಿ:** ಹೂವಿನಹಡಗಲಿಗೇ ಸೇರುವ ಮದಲಗಟ್ಟಿಯು ೧೦ ಕಿಲೋಮೀಟರ್ ದೂರದಲ್ಲಿ ತುಂಗಭದ್ರಾತಟದಲ್ಲಿದೆ. ಅದೊಂದು ರಮ್ಯತಾಣವೂ ಪುಣ್ಯತಾಣವೂ ಆಗಿದೆ. ಅಲ್ಲಿರುವ ಆಂಜನೇಯಸ್ವಾಮಿಯ ದೇವಾಲಯದಿಂದಾಗಿ ಅದೊಂದು ಮಹತ್ವದ ಯಾತ್ರಾಸ್ಥಳವೂ ರಥೋತ್ಸವದಿಂದೊಡಗೂಡಿದ ಜಾತ್ರಾಸ್ಥಳವೂ ಆಗಿದೆ. ವಿಜಯನಗರದ ಅರಸರ ಕಾಲದಲ್ಲಿ ಹಡಗಲಿಯ ಸುತ್ತಮುತ್ತಲಿನ ತೋಟಗಳಿಂದ ಮಲ್ಲಿಗೆಯೇ ಮೊದಲಾದ ಶ್ರೇಷ್ಠ ಜಾತಿಯ ಹೂವುಗಳನ್ನು ಪೊಟ್ಟಣಗಳಲ್ಲಿ ಕಟ್ಟಿ ಮದಲಗಟ್ಟಿಯ ತುಂಗಭದ್ರೆಯಲ್ಲಿ ತೇಲಿಬಿಡುತ್ತಿದ್ದರು. ಹಂಪೆಯಲ್ಲಿ ಕಾದಿರುತ್ತಿದ್ದ ರಾಜಭಟರು ಅವುಗಳನ್ನು ಸಂಗ್ರಹಿಸಿಕೊಂಡು ಅರಮನೆಗೂ ವಿವಿಧ ದೇವಾಲಯಗಳಿಗೂ ತಲುಪಿಸುತ್ತಿದ್ದರು. ಹೀಗಾಗಿ ಹಡಗಲಿಗೆ ಹೂವಿನಹಡಗಲಿ ಎಂಬ ಕೀರ್ತಿಯು ಕೂಡಿಕೊಂಡಿತು.

## ಬಾಗಲಕೋಟೆ

**ಬಾದಾಮಿ:** ತಾಲ್ಲೂಕು ಕೇಂದ್ರವಾಗಿರುವ ಬಾದಾಮಿಯು ಪುರಾಣಕಾಲದ ಇಲ್ವಲ ಮತ್ತು ವಾತಾಪಿಗಳೆಂಬ ರಕ್ಕಸಸಹೋದರರ ವಾಸಸ್ಥಾನವಾಗಿತ್ತು. ಮುನಿಮಹರ್ಷಿಗಳನ್ನು ಮರೆಮೋಸದಿಂದ ಕೊಂದು ತಿನ್ನುತ್ತಿದ್ದ ಆ ರಕ್ಕಸರನ್ನು ಅಗಸ್ತ್ಯರು ನಿಗ್ರಹಿಸಿ ಎರಡು ಬೆಟ್ಟಗಳನ್ನಾಗಿ ಮಾಡಿ ಬೀಸಿ ಎಸೆದರು. ಇಲ್ವಲನು ಐಹೊಳೆ ಎಂಬ ಕ್ಷೇತ್ರದ ಬೆಟ್ಟವಾದರೆ ವಾತಾಪಿಯು ಬಾದಾಮಿಯಲ್ಲಿರುವ ಬೆಟ್ಟವಾಗಿ ಇಬ್ಬರೂ ಸಾರ್ಥಕತೆಗೆ ಪಾತ್ರರಾದರು. ಬಾದಾಮಿ ಪಟ್ಟಣದಲ್ಲಿ ಅನೇಕ ದೇವಾಲಯಗಳಿವೆ. ಪಟ್ಟಣಕ್ಕೆ ಹೊಂದಿಕೊಂಡಂತಿರುವ ಬೆಟ್ಟದ ತಪ್ಪಲಿನಲ್ಲಿ ಅಗಸ್ತ್ಯತೀರ್ಥವೆಂಬ ವಿಶಾಲವಾದ ಸರೋವರವಿದೆ. ಅದು ೪೫ ಎಕರೆ ವಿಸ್ತೀರ್ಣಕ್ಕೆ ಪಸರಿಸಿದೆ.

ಬಾದಾಮಿಯ ಪರ್ವತವನ್ನೇರಿ ಹೋದರೆ, ಆ ಪರ್ವತವನ್ನೇ ಕೊರೆದು ನಿರ್ಮಿಸಿರುವ ಜಗದ್ವಿಖ್ಯಾತವಾದ ನಾಲ್ಕು ಗುಹಾಂತದೇವಾಲಯಗಳಿವೆ. ಅಲ್ಲಿನ ಒಂದೊಂದು ಗುಹೆಯಲ್ಲಿಯೂ ಅಲ್ಲಿನ ಬಂಡೆಗಳೊಳಗೇ ಕಡೆದಿರುವ ದೇವತಾಮೂರ್ತಿಗಳನ್ನು ನೋಡಿಬಿಟ್ಟರೆ ಸಾಕು, ಆ ಶಿಲ್ಪಿಗಳೆಲ್ಲ ದೇವಲೋಕದ ವಿಶ್ವಕರ್ಮಸ್ವರೂಪಿಗಳಲ್ಲದೆ ಬೇರೆಯಲ್ಲ ಎಂಬುದು ಮನದಟ್ಟಾಗಿಬಿಡುತ್ತದೆ. ಉಜ್ವಲವಾದ ಒಂದೆರಡನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ. ಮೊದಲನೆಯ ಗುಹೆಯಲ್ಲಿ ಅಷ್ಟಾದಶಭುಜಗಳ ನಟರಾಜ ಮತ್ತು ಮಹಿಷಾಸುರಮರ್ದಿನಿ, ಎರಡನೆಯ ಗುಹೆಯಲ್ಲಿ ವರಾಹಾವತಾರ ಮತ್ತು ವಾಮನಾವತಾರಗಳು, ಮೂರನೆಯ ಗುಹೆಯಲ್ಲಿ ಅಷ್ಟಭುಜಗಳ ಶಿವಮಹಾದೇವ, ನಾಲ್ಕನೆಯ ಗುಹೆಯಲ್ಲಿ ಜೈನತೀರ್ಥಂಕರರು – ಇವರುಗಳನ್ನು ನೋಡಿಬಿಟ್ಟರೆ ಸಾಕು, ಈ ಗುಹಾಲಯಗಳು ಪರಮಾತ್ಮನ ವಿಭೂತಿಯಲ್ಲದೆ ಬೇರೆಯಲ್ಲ ಎಂಬುದು ಗೊತ್ತಾಗಿಬಿಡುತ್ತದೆ.



**ಬನಶಂಕರಿ:** ಬನಶಂಕರಿಯು ಬಾದಾಮಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೬ ಕಿಲೋಮೀಟರುಗಳ ಅಂತರದಲ್ಲಿರುವ ಮಹೋನ್ನತ ತೀರ್ಥಕ್ಷೇತ್ರವಾಗಿದೆ. ಅದು ಚೊಳಚಗುಡ್ಡ ಎಂಬ ಗ್ರಾಮದ ಉಪಗ್ರಾಮವಾಗಿದೆ. ಪೂರ್ವಕಾಲದಲ್ಲಿ ಅತ್ಯಂತ ಕಠಿಣವಾದ ಕ್ಷಾಮವೊಂದು ಆ ಪ್ರಾಂತವನ್ನೆಲ್ಲಾ ಕಾಡಿತು. ಭಕ್ತರು ಮೊರೆಯಿಟ್ಟಾಗ ವನದೇವಿಯು ಪಾತಾಳದಿಂದ ದಿವ್ಯಜಲವನ್ನುಕ್ಕಿಸಿ, ಹಲವು ತೀರ್ಥಗಳನ್ನು ಉಂಟುಮಾಡಿದಳು. ತನ್ನ ಶರೀರದಿಂದಲೇ ಹಣ್ಣುತರಕಾರಿಗಳನ್ನು ಸೃಷ್ಟಿಸಿ ಅವರನ್ನೆಲ್ಲಾ ಕಾಪಾಡಿದಳು. ಆಮೇಲೆ ಅಲ್ಲಿಯೇ ಬನಶಂಕರಿಯಾಗಿ ನೆಲೆಸಿದಳು. ಅಲ್ಲಿರುವ ದೇವಾಲಯದಲ್ಲಿ ಬನಶಂಕರಿಯು ಅಷ್ಟಭುಜೆಯಾಗಿ, ಸಿಂಹವಾಹಿನಿಯಾಗಿ ರಾರಾಜಿಸುತ್ತಿದ್ದಾಳೆ. ಬೇರೊಂದು ಗುಡಿಯಲ್ಲಿ ಕೇದಾರೇಶ್ವರನೆಂಬ ಶಿವನಿದ್ದಾನೆ. ದೇವಾಲಯದ ಮಗ್ಗುಲಲ್ಲಿಯೇ ಸರಸ್ವತಿಯೆಂಬ ತೊರೆಯೊಂದು ಹರಿದು ಹೋಗುತ್ತದೆ. ಸುತ್ತಗೋಡೆಗಳಿಂದಲೂ ಮಂಟಪಗಳಿಂದಲೂ ಕೂಡಿರುವ 'ಹರಿದ್ರಾತೀರ್ಥ' ವೇ ಅಲ್ಲಿನ ಪ್ರಮುಖ ತೀರ್ಥವಾಗಿದೆ. ವಾರ್ಷಿಕ ರಥೋತ್ಸವದ ಹೊತ್ತಿನಲ್ಲಿ ನಡೆಯುವ

ತೆಪ್ಪೋತ್ಸವವು ಆ ಹರಿದ್ರಾತೀರ್ಥದಲ್ಲಿ ವರ್ಣಮಯವಾಗಿ ಸಾಗುತ್ತದೆ. ಆ ವೇಳೆಯಲ್ಲಿ ದೇವಿಗೆ ಹರಕೆ ಹೊತ್ತ ಭಕ್ತರು ಬಾಳೆಯ ದಿಂಡಿನಿಂದ ತೆಪ್ಪವನ್ನು ಮಾಡಿ, ಪುಟ್ಟ ಕೂಸುಗಳನ್ನು ಅದರಲ್ಲಿರಿಸಿ, ಆ ತೀರ್ಥದ ಮೇಲೆ ತೇಲಾಡಿಸುತ್ತಾರೆ. ಜಾತ್ರೆಯಾದರೋ ಒಂದು ತಿಂಗಳಿನಷ್ಟು ದೀರ್ಘಕಾಲ ನಡೆಯುತ್ತದೆ. ಆಗ ಕಟ್ಟುವ ಜಾತ್ರೆಯಲ್ಲಿ ಮನೆಯ ಕಿಟಕಿ, ಬಾಗಿಲು ಮುಂತಾದ ವಸ್ತುಗಳೇ ಆದಿಯಾಗಿ ಸಕಲ ವಸ್ತುಗಳೂ ಮಾರಾಟಕ್ಕಿರುತ್ತವೆ. ನಮ್ಮ ನಾಡಿನ ನಾಲ್ಕೂ ವರ್ಣದ ಅನೇಕ ಕುಟುಂಬಗಳಿಗೆ ಬನಶಂಕರಿಯೇ ಕುಲದೇವತೆಯಾಗಿದ್ದಾಳೆ. ಬೆಂಗಳೂರೇ ಆದಿಯಾಗಿ ಬನಶಂಕರಿಯ ದೇವಾಲಯಗಳು ನಮ್ಮ ನಾಡಿನಲ್ಲಿ ನೂರಾರು ಕಡೆಗಳಲ್ಲಿವೆ.

**ಮಹಾಕೂಟ:** ಬಾದಾಮಿಗೇ ಸೇರಿರುವ ಮಹಾಕೂಟವು ಅಲ್ಲಿಂದ ೧೦ ಕಿಲೋಮೀಟರುಗಳ ದೂರದಲ್ಲಿದೆ. ನಂದಿಕೇಶ್ವರ ಎಂಬ ಗ್ರಾಮಕ್ಕೆ ಸೇರಿದ್ದಾಗಿದೆ. ಎರಡು ಬೆಟ್ಟಗಳ ನಡುವಣ ಕಣಿವೆಯಲ್ಲಿ ನೆಲೆಸಿರುವ ಆ ಕ್ಷೇತ್ರವು ಅತ್ಯಂತ ಪ್ರಶಾಂತ ರಮಣೀಯವಾದ ಪುಣ್ಯತಮ ತೀರ್ಥವಾಗಿದೆ. ಅದ್ಭುತ, ಪರಮಾದ್ಭುತ, ದಿವ್ಯ, ಭವ್ಯ ಎಂಬ ಎಷ್ಟೆಷ್ಟು ಅಲಂಕಾರಿಕ ಶಬ್ದಗಳನ್ನು ಬಳಸಿದರೂ ಆ ಕ್ಷೇತ್ರದ ಘನತೆಯನ್ನು ವರ್ಣಿಸುವುದು ಸಾಧ್ಯವಾಗುವುದಿಲ್ಲ. ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನೇಶ್ವರ ದೇವಾಲಯಗಳು ಅಲ್ಲಿನ ಕೇಂದ್ರಬಿಂದುಗಳಾಗಿವೆ. ಮಹಾಕೂಟೇಶ್ವರನು ಲಿಂಗರೂಪಿಯಾಗಿ ಗರ್ಭಗೃಹದೊಳಗಿದ್ದಾನೆ. ಅಲ್ಲಿಯೇ ಪ್ರತ್ಯೇಕವಾಗಿ ಊರ್ಧ್ವರೇತೇಶ್ವರನೆಂಬ ಶಿವನ ದಿಗಂಬರ ಮೂರ್ತಿ ಮತ್ತು ಶಿವಶಕ್ತಿಯರ ಸಂಗಮರೂಪವಾದ ಅರ್ಧನಾರೀಶ್ವರ ಮೂರ್ತಿಗಳು ಮನಮೋಹಕವಾಗಿದೆ. ಮಿಕ್ಕಂತೆ ಪ್ರತ್ಯೇಕ ಗುಡಿಗಳಲ್ಲಿ ವಿರೂಪಾಕ್ಷೇಶ್ವರ, ಕಾಲಕಾಲೇಶ್ವರ, ಕಪಿಲೇಶ್ವರ, ಲಕುಲೀಶ್ವರ, ವೀರಭದ್ರೇಶ್ವರರಿದ್ದಾರೆ. ಹಲವು ದೇವರುಗಳು ಹೀಗೆ ಒಂದೇ ಕಡೆ ಕೂಟವಾಗಿ ಕೂಡಿರುವುದರಿಂದ ಆ ಕ್ಷೇತ್ರವು 'ಮಹಾಕೂಟ' ವೆನಿಸಿದೆ.

ದೇವಾಲಯಗಳ ಮಧ್ಯದಲ್ಲಿ ಶಿವಪುಷ್ಕರಿಣಿಯೆಂಬ ಸದಾಕಾಲ ಜೀವಜಲವು ಉಕ್ಕುವ ಪುಣ್ಯಪುಷ್ಕರಿಣಿಯಿದೆ. ಪುಣ್ಯಸ್ನಾನಕ್ಕೆ ಅದು ಹೇಳಿ ಮಾಡಿಸಿದಂತಿದೆ. ಆ ಪುಷ್ಕರಿಣಿಯ ಮಧ್ಯದಲ್ಲಿ ಮಂಟಪವೊಂದಿದ್ದು, ಅದರಲ್ಲಿ ನಾಲ್ಕು ದಿಕ್ಕುಗಳಿಗೂ ಶಿವನ ಮುಖವನ್ನು ಕಡೆದಿರುವ ಚತುರ್ಮುಖಲಿಂಗವೆಂಬ ಅಪೂರ್ವ ಕಲಾಕೃತಿಯಿದೆ. ಆ ಪುಷ್ಕರಿಣಿಯ ವಾಯುವ್ಯಮೂಲೆಯಲ್ಲಿ 'ಕೋಣೆ ಶಂಕರಲಿಂಗ' ವೆಂಬ ಸನ್ನಿಧಿಯಿದ್ದು, ಆ ಲಿಂಗದ ದರ್ಶನ ಪಡೆಯಬೇಕಾದರೆ ಪುಷ್ಕರಿಣಿಯ ಜಲದಲ್ಲಿ ಮುಳುಗಾಡಿಕೊಂಡೇ ಹೋಗಬೇಕು. ವೈಶಾಖಪೂರ್ಣಿಮೆಯ ವಾರ್ಷಿಕ ಮಹೋತ್ಸವದ ಕಾಲದಲ್ಲಿ ಆ ದಿನದಂದೇ, ನಿಶ್ಚಿತ ಮುಹೂರ್ತಕ್ಕೆ ಆ ಪುಷ್ಕರಿಣಿಯಲ್ಲಿ ತೀರ್ಥೋದ್ಭವವಾಗಿ ನೀರಿನ ಮಟ್ಟದಲ್ಲಿ ಏರಿಕೆಯಾಗುತ್ತದೆ. ನಾವು ಕೊಡಗಿನ ತಲಕಾವೇರಿಯನ್ನು ನೆನೆಯಬಹುದು.

ಮಹಾಕೂಟದ ಬೆಟ್ಟಗಳ ವಲಯದಲ್ಲಿ ಅಲ್ಲಲ್ಲಿ ಲಿಂಗಗಳಿವೆ. ಆ ಗುಂಪಿನಲ್ಲಿ 'ಸೆಗಣೇಶ್ವರ' ಲಿಂಗವೂ ಒಂದು. ಆ ಸುತ್ತಿನಲ್ಲಿ ಕೃಷಿಕರು ಬೆಟ್ಟಗುಡ್ಡಗಳಲ್ಲಿ ಮೇಯಲು ಹೋದ ದನಕರುಗಳು ಕಾಣೆಯಾದರೆ ಸೆಗಣೇಶ್ವರನಿಗೆ ಹರಕೆ ಹೊರುತ್ತಾರೆ. ಆಗ ಅವು ಮರಳಿಬರುತ್ತವೆ. ಆಮೇಲೆ ಕೃಷಿಕರು ಅವು ಹಾಕಿದ ಸಗಣಿಯನ್ನೊಯ್ದು ಸೆಗಣೇಶ್ವರನಿಗೆ ಲೇಪಿಸಿ ಹರಕೆ ತೀರಿಸುತ್ತಾರೆ.

**ಐಹೊಳೆ:** ಬಾಗಲಕೋಟೆ ಜಿಲ್ಲೆಯ ಜನರು ಅದೇನು ಪುಣ್ಯ ಮಾಡಿದ್ದಾರೋ, ಭಾರತೀಯ ಶಿಲ್ಪಕಲೆಯ ಮಹೋನ್ನತ ಕ್ಷೇತ್ರಗಳಾದ ಐಹೊಳೆ, ಪಟ್ಟದಕಲ್ಲುಗಳು ಆ ಜಿಲ್ಲೆಯಲ್ಲಿಯೇ ಇವೆ. ಐಹೊಳೆಯು ಹುನಗುಂದ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೨೬ ಕಿಲೋಮೀಟರ್ ದೂರದಲ್ಲಿ ಮಲಪ್ರಭಾನದಿಯ ತೀರದ ಪುಣ್ಯತೀರ್ಥವಾಗಿದೆ. ಕ್ಷತ್ರಿಯ ದೊರೆ ಕಾರ್ತವೀರ್ಯಾರ್ಜುನನು ಜಮದಗ್ನಿ ಮುನಿಗಳನ್ನು ಕೊಂದುದೇ ಕಾರಣವಾಗಿ, ತಂದೆಯ ಸಾವಿನ ಸೇಡನ್ನು ತೀರಿಸಿಕೊಳ್ಳಲು ಪರಶುರಾಮನು ತನ್ನ ಕೊಡಲಿಯಿಂದ ಕ್ಷತ್ರಿಯ ಕುಲವನ್ನೇ ಕೊಚ್ಚಿಹಾಕಿದನು. ರಕ್ತದಿಂದ ತೊಯ್ದು ಹೋದ ಆ ಕೊಡಲಿಯನ್ನು ಪರಶುರಾಮನು ಐಹೊಳೆಯ ಮಲಪ್ರಭಾನದಿಯಲ್ಲಿ ತೊಳೆದು, ತಾನೂ ಮಿಂದು, ರಾಮಲಿಂಗೇಶ್ವರನನ್ನು ಸ್ಥಾಪಿಸಿ, ಪೂಜಿಸಿ ಪಾಪಮುಕ್ತನಾದನು. ಆ ರಾಮಲಿಂಗೇಶ್ವರ ದೇವಾಲಯವೀಗ ಪುಣ್ಯಕ್ಷೇತ್ರವಾಗಿದೆ. ಅಲ್ಲೊಂದು ಪರಶುರಾಮ ದೇವರಗುಡಿಯೂ ಇದೆ. ಬಂಡೆಗಳ ಮೇಲೆ ಅವನ ಪಾದ ಚಿಹ್ನೆಗಳೂ ಇವೆ. ಪಾಲ್ಗುಣ ಮಾಸದಲ್ಲಿ ಸಂಭ್ರಮದ ತೇರು ಎಳೆಯುತ್ತಾರೆ. ಅಷ್ಟುಮಾತ್ರವಲ್ಲದೆ ಐಹೊಳೆಯ ಆ ವಲಯದಲ್ಲಿಯೇ ಸುಮಾರು ೧೨೫ ದೇವಾಲಯಗಳಿದ್ದು, ಶಿಲ್ಪಕಲಾ ಸೃಷ್ಟಿ ವೈಭವದ ಹಿನ್ನೆಲೆಯಲ್ಲಿ ೨೨ ಗುಂಪುಗಳನ್ನಾಗಿ ಮಾಡಿ ಅಧ್ಯಯನ ನಡೆಸಿದ್ದಾರೆ. ಅಗಸ್ತ್ಯರು ಬೀಸಿ ಎಸೆದರಲ್ಲಾ, ಆ ಇಲ್ವಲ ರಕ್ಕಸನು ಇಲ್ಲಿ ಬಂದು ಬಿದ್ದು ಒಂದು ಗುಡ್ಡವಾದನಲ್ಲಾ, ಆ ಗುಡ್ಡದ ಮೇಲೂ ಕೆಲವು ದೇವಾಲಯಗಳಿವೆ.

**ಪಟ್ಟದಕಲ್ಲು:** ಪಟ್ಟದಕಲ್ಲು ಬಾದಾಮಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೨೨ ಕಿಲೋಮೀಟರ್ ದೂರದಲ್ಲಿದೆ. ಅದೂ ಮಲಪ್ರಭಾತೀರದ ಪುಣ್ಯಕ್ಷೇತ್ರವೇ ಆಗಿದೆ. ಅಲ್ಲಿ ಕಾಶಿವಿಶ್ವೇಶ್ವರ, ಕಾಡಸಿದ್ದೇಶ್ವರ, ಸಂಗಮೇಶ್ವರ, ಜಂಬುಕೇಶ್ವರ ಮೊದಲಾದ ಹತ್ತು ದೇವಾಲಯಗಳು ಪ್ರಧಾನವಾಗಿವೆ. ಶಿಲ್ಪಕಲೆಯ ಸ್ವರ್ಗವೆನಿಸಿ ಕಲ್ಲೆಲ್ಲ ಕಲೆಯ ಬಲೆಯಾಗಿರುವ ಪಟ್ಟದಕಲ್ಲು ವಿಶ್ವಪರಂಪರೆಯ ಕಲಾಜಗತ್ತಿಗೆ ಸೇರ್ಪಡೆಯಾಗಿದೆ.

**ಕೂಡಲಸಂಗಮ:** ಕಪ್ಪಡಿಸಂಗಮವೆಂದೂ ಕರೆಯಲಾದ ಕೂಡಲಸಂಗಮವು ಹುನಗುಂದ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೧೯ ಕಿಲೋಮೀಟರ್ ದೂರದಲ್ಲಿ ಕೃಷ್ಣಾ ಮತ್ತು ಮಲಪ್ರಭಾನದಿಗಳ ಸಂಗಮಸ್ಥಾನವಾಗಿದ್ದು ಅತಿಪಾವನ ಪುಣ್ಯತೀರ್ಥವಾಗಿದೆ. ಅದು ಭಕ್ತಿಭಂಡಾರಿ ಬಸವಣ್ಣನವರ ವಿದ್ಯಾಕೇಂದ್ರವೂ ಪೂಜಾಕೇಂದ್ರವೂ ಕೊನೆಗೆ ಐಕ್ಯಕೇಂದ್ರವೂ ಆಗಿದ್ದು ಭುವನವಿಶ್ರುತವಾಗಿದೆ. ಬಸವಣ್ಣನವರು ತಮ್ಮ ಬಾಲ್ಯಕಾಲದಲ್ಲಿ ಸಂಗಮದಲ್ಲಿದ್ದ ಜಾತವೇದ ಮುನಿಗಳ ಗುರುಕುಲದ ಶಿಷ್ಯರಾಗಿ ವಿದ್ಯೆ ಕಲಿಯುತ್ತಾ, ಅಲ್ಲಿದ್ದ ಸಂಗಮೇಶ್ವರನ ಪೂಜೆ ಮಾಡುತ್ತಾ, ತರುವಾಯ ಕಲ್ಯಾಣಪಟ್ಟಣಕ್ಕೆ ಹೋಗಿ ವೀರಶೈವಧರ್ಮವನ್ನು ಉಜ್ವಲಗೊಳಿಸಿದರು. ಆದರೆ ಕಾಲಾಂತರದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯು ಸ್ಫೋಟಗೊಂಡು, ಅದರಿಂದ ದುಃಖಿತರಾದ ಬಸವಣ್ಣನವರು ಮರಳಿ ಕೂಡಲ

ಸಂಗಮಕ್ಕೆ ಬಂದು ಅಲ್ಲಿ ತಮ್ಮ ಶರೀರವನ್ನು ಸಮರ್ಪಿಸಿಬಿಟ್ಟರು. ಅದರ ಕುರುಹಾಗಿ ನದಿಯ ತೀರದಲ್ಲಿ ಲಿಂಗಸಹಿತವಾದ ಒಂದು ಐಕ್ಯಮಂಟಪವಿದೆ. ವಾರ್ಷಿಕವಾಗಿ ಸಂಗಮೇಶ್ವರನ ರಥೋತ್ಸವಾದಿಗಳು ಜರುಗುತ್ತವೆ.

ಹೆಚ್ಚೇನೂ ಬೆಳವಣಿಗೆಗಳನ್ನು ಕಾಣದಿದ್ದ ಕೂಡಲಸಂಗಮವು ಇತ್ತೀಚಿನ ವರ್ಷಗಳಲ್ಲಿ ಜಗತ್ತನ್ನೇ ಚಕಿತಗೊಳಿಸುವಂತೆ ಜೀರ್ಣೋದ್ಧಾರಗೊಂಡಿರುವುದನ್ನು ಕಣ್ಣಾರೆ ನೋಡಿಯೇ ಆನಂದಿಸಬೇಕು. ಸಂಗಮೇಶ್ವರ ದೇವಾಲಯವು ಇದ್ದಲ್ಲಿಯೇ ಲಕಲಕಿಸುವಂತೆ ನವ ನಿರ್ಮಾಣಗೊಂಡಿದೆ. ಬಸವಸಾಗರವೆಂಬ ಜಲಾಶಯವೊಂದು ನಿರ್ಮಾಣಗೊಳ್ಳುವ ಹೊತ್ತಿನಲ್ಲಿ ಬಸವಣ್ಣನವರ ಐಕ್ಯಮಂಟಪವು ಹಿನ್ನೀರಿನ ಜಲಸಾಗರದಲ್ಲಿ ಮುಳುಗಡೆಯಾಗುವುದರಲ್ಲಿತ್ತು. ಆದರೆ ಹಿನ್ನೀರಿನೊಳಗಡೆಯೇ, ಇದ್ದಜಾಗದಲ್ಲಿ ಇರುವಂತೆಯೇ, ಬುಡದಿಂದಲೇ ಆ ಐಕ್ಯಮಂಟಪಕ್ಕೆ ವರ್ತುಲಾಕಾರದ ಸುಭದ್ರವಾದ 'ವಜ್ರಗೋಡೆ' ಯೊಂದನ್ನು ಕಟ್ಟಿ ಯಥಾವತ್ತಾಗಿ ಸಂರಕ್ಷಿಸಿರುವುದು ನಮ್ಮ ಕಾಲದ ಇಂಜಿನಿಯರುಗಳ ಮತ್ತು ಕೆಲಸಗಾರರ ಮೇಧಾವಿತನಕ್ಕೊಂದು ಶ್ರೇಷ್ಠ ಮಾದರಿಯಾಗಿದೆ. ಸಂಗಮೇಶ್ವರ ದೇವಾಲಯದಿಂದ ಸೇತುವೆಯ ಮೇಲೆ ನಡೆಯುತ್ತಾ ಕೆಳಕ್ಕಿಳಿದು ಹೋಗಿ ಐಕ್ಯಮಂಟಪದ ದರ್ಶನ ಮಾಡುವುದು ರೋಮಾಂಚಕಾರಿ ಆನಂದಾನುಭವವನ್ನು ನೀಡುತ್ತದೆ.

ಕೂಡಲಸಂಗಮದಲ್ಲೀಗ ಕೆಲವು ಅಭೂತಪೂರ್ವ ನವ ನಿರ್ಮಾಣಗಳೂ ಆಗಿವೆ. ನೂತನವಾದ ಹೆಸರಿಗೆ ತಕ್ಕ 'ಮಹಾ'ದ್ವಾರವಿದೆ. ಪೂಜಾನಿರತ ಬಾಲಬಸವಣ್ಣನವರ ಪ್ರತಿಮೆಯಿದೆ. ೫ ಸಹಸ್ರ ಮಂದಿ ಆಸೀನರಾಗಬಹುದಾದ ಗುಮ್ಮಟಾಕೃತಿಯ ಸಭಾಂಗಣವಿದೆ. 'ಅಂತಾರಾಷ್ಟ್ರೀಯ ಬಸವಕೇಂದ್ರ'ವೆಂಬ ಆರು ಅಂತಸ್ತುಗಳ, ಅಷ್ಟಕೋನಾಕೃತಿಯ ಮನಮೋಹಕ ಗೋಪುರವೊಂದು ವೀರಶೈವದ ಷಟ್‌ಸ್ಥಳ ಮತ್ತು ಅಷ್ಟಾವರಣಗಳಿಗೆ ಸಂಕೇತವಾಗಿದೆ. ಅದರ ಹಿಂಬದಿಗೆ ವಿಸ್ತಾರವಾದ ಬಯಲಿನಲ್ಲಿ ಪೂಜಾವನ, ಬಾಲವನ, ಜಲವನಗಳು ರೂಪುತಳೆದಿವೆ. ಕೂಡಲಸಂಗಮವು ಬಸವಣ್ಣನವರಿಗೆ ಪಂಚಪ್ರಾಣವಾಗಿತ್ತು. ಅವರು ರಚಿಸಿರುವ ವಚನಗಳ ಅಂಕಿತವು ಕೂಡ 'ಕೂಡಲ ಸಂಗಮದೇವ' ಎಂಬುದೇ ಆಗಿದೆ ಎಂಬುದನ್ನು ನಾವು ಗಮನಿಸಬಹುದು.

**ಶೂರ್ಪಾಲಿ:** ಜಮಖಂಡಿ ತಾಲ್ಲೂಕಿಗೆ ಸೇರುವ ಶೂರ್ಪಾಲಿಯು ಅಲ್ಲಿಂದ ೧೦ ಕಿಲೋಮೀಟರ್ ದೂರದಲ್ಲಿದ್ದು ಕೃಷ್ಣಾ ನದಿಯ ತೀರದ ತೀರ್ಥವಾಗಿದೆ. ಪರಶುರಾಮದೇವನು ತಾನು ಮಾಡಿದ ಕೊಲೆಗಳಿಂದ ಜುಗುಪ್ಸಿತನಾಗಿ, ದುಃಖದ ಕಣ್ಣೀರಧಾರೆಯನ್ನೇ ಅಲ್ಲಿ ಹರಿಸಿದನು. ಬಳಿಕ ಅದರ ಮೇಲೆಯೇ ಅಲ್ಲೊಂದು ಅಶ್ವತ್ಥವೃಕ್ಷವು ಬೆಳೆಯಿತು. ಇಂದಿಗೂ ಅದು ತನ್ನ ರೆಂಬೆಕೊಂಬೆಗಳನ್ನು ವಿಸ್ತಾರವಾಗಿ ಚಾಚಿಕೊಂಡು ತ್ರಿಮೂರ್ತಿಗಳ ನೆಲೆಯಾಗಿ ಭಕ್ತರಿಂದ ಪೂಜೆಗೊಳ್ಳುತ್ತಿದೆ. ಅಲ್ಲಿಯೇ ಲಕ್ಷ್ಮೀನರಸಿಂಹದೇವರ ಪುರಾತನ ದೇವಾಲಯವಿದೆ. ಸದಾನಂದಮಠವೂ ಇದ್ದು ಭಕ್ತಜನಪ್ರೇಮಿಯಾಗಿದೆ. ವೈಶಾಖದಲ್ಲಿ ಲಕ್ಷ್ಮೀನರಸಿಂಹದೇವರ ರಥವನ್ನು ಎಳೆಯುತ್ತಾರೆ.

## ವಿಜಯಪುರ

**ಇಂಚಗೇರಿ:** ಇಂಡಿ ತಾಲ್ಲೂಕಿಗೆ ಸೇರಿದ ಇಂಚಗೇರಿಯು ಅಲ್ಲಿಂದ ೪೫ ಕಿಲೋಮೀಟರ್ ದೂರದಲ್ಲಿದೆ. ಉತ್ತರಭಾರತದಲ್ಲಿ 'ನವನಾಥಪರಂಪರೆ' ಯೆಂಬ ಭಕ್ತಿಪಂಥವೊಂದಿದೆ. ಆ ಪಂಥದ ಆರಾಧ್ಯದೇವರುಗಳಲ್ಲಿ ದತ್ತಾತ್ರೇಯ ಗುರುವೂ ಒಬ್ಬನಾಗಿದ್ದಾನೆ. ಆ ಪರಂಪರೆಯಿಂದ ಪ್ರಭಾವಿತರಾಗಿ ಕಾಡಸಿದ್ಧೇಶ್ವರರೆಂಬ ಮಹಾಮಹಿಮರು, ಮಹಾರಾಷ್ಟ್ರದ ಕೊಲ್ಹಾಪುರದ ಸಮೀಪದ ಸಿದ್ಧಗಿರಿಯೆಂಬಲ್ಲಿ ತಪಸ್ಸು ಮಾಡಿ 'ಸಿದ್ಧಗಿರಿ ಸಂಪ್ರದಾಯ' ಎಂದು ಹೇಳುವ ಭಕ್ತಿಪಂಥವೊಂದನ್ನು ಸ್ಥಾಪಿಸಿದ್ದಾರೆ. ತರುವಾಯ ಆ ಪಂಥವು ಇಂಚಗೇರಿ ಗ್ರಾಮವನ್ನು ಕೇಂದ್ರವಾಗಿಸಿಕೊಂಡು ಅಭೂತಪೂರ್ವವಾದ ಬೆಳವಣಿಗೆಯನ್ನು ಸಾಧಿಸಿತು, 'ಇಂಚಗೇರಿ ಸಂಪ್ರದಾಯ' ಎಂದು ಕೀರ್ತಿತವಾಯಿತು. ಅಲ್ಲಿ ಆ ಸಂಪ್ರದಾಯದ ಮಠವಿದೆ. ಅದರ ಜೊತೆಗೆ ಆ ಪರಂಪರೆಯನ್ನು ಬೆಳಗಿಸಿದ ಗುರುಲಿಂಗ ಜಂಗಮ ಮಹಾರಾಜರು, ಭಾವೂ ಸಾಹೇಬಮಹಾರಾಜರು, ಶಿವ ಪ್ರಭು ಮಹಾರಾಜರು ಮೊದಲಾದವರ ಪ್ರತಿಮೆಗಳಿಂದೊಡಗೂಡಿದ 'ಕೋಟಿರವಿಪ್ರಕಾಶದಿಂದ ಕಂಗೊಳಿಸುವ' ಎಂದು ಆಲಂಕಾರಿಕ ಭಾಷೆಯಲ್ಲಿ ಹೇಳಬಹುದಾದ ದೇವಭವನಗಳಿವೆ. ಇಂಡಿಯಿಂದ ೨೦ ಕಿಲೋಮೀಟರ್ ದೂರದಲ್ಲಿರುವ ದೇವರನಿಂಬರಗಿ ಎಂಬಲ್ಲಿ ಗುರುಲಿಂಗ ಜಂಗಮಮಹಾರಾಜರ ಸಮಾಧಿಮಂದಿರವಿದೆ. ಈ ಹಿಂದೆ ಇಲಹಾಬಾದ್ ವಿಶ್ವವಿದ್ಯಾನಿಲಯದ (ಈಗ ಪ್ರಯಾಗರಾಜ) ಉಪಕುಲಪತಿಗಳಾಗಿದ್ದ ಗುರುದೇವ ರಾನಡೆ (೧೯೫೦) ಅವರೂ ಆ ಭಕ್ತಿಪಂಥದ ಪ್ರವರ್ತಕರಲ್ಲೊಬ್ಬರಾಗಿದ್ದಾರೆ. ಇಂಡಿ ತಾಲ್ಲೂಕಿಗೆ ಸೇರುವ, ಅಲ್ಲಿಂದ ೨೨ ಕಿಲೋಮೀಟರ್ ದೂರದಲ್ಲಿರುವ ನಿಂಬಾಳ ಎಂಬಲ್ಲಿ ಅವರು ಮುಕ್ತರಾಗಿ, ಅಲ್ಲಿ ಅವರ ಸಮಾಧಿಮಂದಿರ ಸಹಿತವಾದ ಆಶ್ರಮವೊಂದು ಆ ಗ್ರಾಮವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದೆ. ಹೇಳತೀರಲಾಗದಂತಹ ಶಿಸ್ತುಸಂಯಮಗಳಿಂದ ನಡೆಯುವ ಆ ಆಶ್ರಮವು ಅಧ್ಯಾತ್ಮ ಸಾಧಕರನ್ನು ಸದಾಕಾಲ ಸೂಜಿಗಲ್ಲಿನಂತೆ ಸೆಳೆಯುತ್ತಿರುತ್ತದೆ. ಅಂತೆಯೇ ಬಿಜಾಪುರ ತಾಲ್ಲೂಕಿಗೆ ಸೇರುವ, ಅಲ್ಲಿಂದ ೩೦ ಕಿಲೋಮೀಟರ್ ದೂರದಲ್ಲಿರುವ ಕನ್ನೂರು ಎಂಬ ಗ್ರಾಮಕ್ಕೆ ಸೇರಿದ ಪ್ರತ್ಯೇಕ ವಲಯದಲ್ಲಿ ಗಣಪತಮಹಾರಾಜರೆಂಬ ಬ್ರಹ್ಮಜ್ಞಾನಿಗಳು ಸ್ಥಾಪಿಸಿದ ಆ ಪಂಥದ 'ಶಾಂತಿಕುಟೀರ' ವೆಂಬ ಆಶ್ರಮವಿದೆ. ಅಲ್ಲಿ ದತ್ತಮಂದಿರ ಮತ್ತು ಆ ಮಹಾರಾಜರ ಸಮಾಧಿಮಂದಿರಗಳಿವೆ. ಅಲ್ಲಿ ಮತ್ತು ಆ ಪರಂಪರೆಯ ವಿವಿಧ ಮಠಗಳಲ್ಲಿ ನಡೆಯುವ, ಮಹಾರಾಷ್ಟ್ರ ಭಕ್ತಿಪಂಥಗಳ ಪ್ರಭಾವಕ್ಕೆ ಒಳಗಾಗಿರುವ, ಮರಾಠಿ ಗೀತೆಗಳ ತಾಳ ನರ್ತನಸಹಿತವಾದ ಭಜನೆ, ಸತ್ಸಂಗ, ಧ್ಯಾನ ಮತ್ತು ಪ್ರವಚನಗಳು ಅತ್ಯಂತ ಪರಿಣಾಮಕಾರಿಯಾಗಿರುತ್ತವೆ.

**ಬಸವನ ಬಾಗೇವಾಡಿ:** ತಾಲ್ಲೂಕು ಕೇಂದ್ರವಾಗಿರುವ ಬಸವನ ಬಾಗೇವಾಡಿಯು ಜಗಜ್ಯೋತಿ ಬಸವಣ್ಣನವರ ಸಂಪರ್ಕದಿಂದಾಗಿ ಪುಣ್ಯಕ್ಷೇತ್ರವಾಗಿದೆ. ಬಸವಣ್ಣನವರ ತಂದೆತಾಯಿಗಳಾದ ಮಾದರಸ ಮಾದಲಾಂಬಿಕೆಯರು ಬಾಗೇವಾಡಿಯ ನಿವಾಸಿಗಳಾಗಿದ್ದರು. ಬಾಗೇವಾಡಿಗೆ ಸಮೀಪದ ಇಂಗಳೇಶ್ವರ ಎಂಬ ಗ್ರಾಮವು ಮಾದಲಾಂಬಿಕೆ ತವರುಮನೆಯಾಗಿದ್ದು, ಅಲ್ಲಿ ಬಸವಣ್ಣನವರು ಅವತರಿಸಿದರು.

ತಮ್ಮ ಬಾಲ್ಯಕಾಲದ ಕೆಲವು ವರ್ಷಗಳನ್ನು ಬಾಗೇವಾಡಿಯಲ್ಲಿ ಕಳೆದ ಬಸವಣ್ಣನವರು ಮುಂದಕ್ಕೆ ಗೃಹತ್ಯಾಗ ಮಾಡಿ ಕೂಡಲಸಂಗಮದತ್ತ ಹೊರಟುಹೋದರು. ಬಾಗೇವಾಡಿ ಮತ್ತು ಇಂಗಳೇಶ್ವರಗಳಲ್ಲಿ ಬಸವಸಂಬಂಧಿಯಾದ ಅದ್ಭುತವಾದ ಭಕ್ತಿಭವನಗಳನ್ನು ನೂತನ ವಾಗಿ ನಿರ್ಮಿಸಿ, ಆ ಮಹಾತ್ಮರ ಹೆಸರು ಚಿರಸ್ಥಾಯಿಯಾಗುವಂತೆ ಮಾಡಿದ್ದಾರೆ. ಆ ಎರಡೂ ಕೇಂದ್ರಗಳಲ್ಲಿ ಹಲವು ಪುಣ್ಯತರ ದೇವಾ ಲಯಗಳೂ ವೀರಶೈವ ಮಠಗಳೂ ಇವೆ. ಬಾಗೇವಾಡಿಯಲ್ಲಿ ನಾವು ಈ ಮೊದಲೇ ನೋಡಿದ ಇಂಚಗೇರಿ ಸಂಪ್ರದಾಯದ ಸಿದ್ಧ ರಾಮೇ ಶ್ವರಮಹಾರಾಜರ ಒಂದು ಮಠವೂ ಇದೆ.

## ಬೆಳಗಾವಿ

**ಎಲ್ಲಮ್ಮನ ಗುಡ್ಡ:** ಕರ್ನಾಟಕದ ಪುಣ್ಯಕ್ಷೇತ್ರಗಳಲ್ಲಿ ಎಲ್ಲಮ್ಮನ ಗುಡ್ಡವು ಅಗ್ರಮಾನ್ಯವಾಗಿದೆ. ಅದು ಸವದತ್ತಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೮ ಕಿಲೋಮೀಟರ್‌ಗಳ ಅಂತರದಲ್ಲಿದೆ. ೭ ಪರ್ವತಾ ವಳಿಗಳ ಕಣಿವೆಕೊಳ್ಳಗಳ ಮಧ್ಯದಲ್ಲಿರುವುದರಿಂದ ಏಳುಕೊಳ್ಳದ ಎಲ್ಲಮ್ಮ ಎಂಬ ಖ್ಯಾತಿಯಿದೆ. ಪ್ರತಿನಿತ್ಯವೂ ಹೊಸಹೊಸ ಭಕ್ತರು ಅಲ್ಲಿಗೆ ಧಾವಿಸುತ್ತಲೇ ಇರುತ್ತಾರೆ. ಯಾವದಿನ ಹೊಸಬರು ಈ ಕ್ಷೇತ್ರಕ್ಕೆ ಬರುವುದಿಲ್ಲವೋ, ಆ ದಿನ ನಾನಿಲ್ಲಿ ಇಲ್ಲವೆಂದು ತಿಳಿಯಿರಿ ಎಂದು ದೇವಿಯೇ ಹೇಳಿದ್ದಾಳೆ. ಎಲ್ಲಮ್ಮನೆಂದರೆ ಅವಳು ಜಮದಗ್ನಿ ಮುನಿಗಳ ಮಡದಿ, ಪರಶುರಾಮನ ತಾಯಿ ರೇಣುಕಾಂಬೆಯೇ ಆಗಿದ್ದಾಳೆ. ಆ ಮುನಿಗಳಿಗೆ ಎಲ್ಲಮ್ಮನ ಗುಡ್ಡವೇ ತಪೋಭೂಮಿ ಯಾಗಿತ್ತು ಎಂದು ಅಲ್ಲಿನ ಸ್ಥಳಪುರಾಣದಲ್ಲಿ ಹೇಳಿದೆ. ಅಂತೆಯೇ ವೈದಿಕಪುರಾಣಗಳಲ್ಲಿ ಬರುವ ಕಥೆಗಿಂತ ಜಾನಪದ ಪರಂಪರೆಯ ಕಥೆಯು ಸಾಕಷ್ಟು ಭಿನ್ನವಾಗಿದ್ದು ಆ ಪರಿಸರಕ್ಕೆ ಹೊಂದುವಂತಿದೆ. ಅದನ್ನಿಲ್ಲಿ ನಿರೂಪಿಸುತ್ತೇನೆ.

ರೇಣುಕಾಂಬೆಯು ಜಮದಗ್ನಿಗಳ ನಿತ್ಯಾನುಷ್ಠಾನಗಳಿಗೆ ಬೇಕಾ ಗುವ ಮೀಸಲು ನೀರನ್ನು ಸಮೀಪದ ನವಿಲುತೀರ್ಥದಿಂದ ತಲೆಯ ಮೇಲೆ ಹೊತ್ತುತರುತ್ತಿದ್ದಳು. ಪತಿವ್ರತೆಯಾದ ಅವಳು ಮರಳಿ ನಿಂದಾದ ಕೊಡವನ್ನೂ, ಹಾವಿನ ಸಿಂಬಿಯನ್ನೂ ಮಾಡಿಕೊಂಡಿ ದ್ದಳು. ಒಂದು ದಿನ ನೀರು ತರುವ ದಾರಿಯಲ್ಲಿ ಕಾರ್ತವೀರ್ಯಾ ರ್ಜುನನು ತನ್ನ ರಾಣಿಯರೊಡನೆ ಜಲಕ್ರೀಡೆಯಾಡುತ್ತಿದ್ದನು. ಅದನ್ನು ಕಂಡ ರೇಣುಕಾಂಬೆಯು ಚಂಚಲೆಯಾಗಿಬಿಟ್ಟಳು. ಅದರ ಫಲವಾಗಿ ಮರಳಿನ ಕೊಡವು ಕಳಲಿಹೋಯಿತು, ಸಿಂಬಿಯ ಹಾವು ಜಾರಿಹೋಯಿತು. ಅದೆಲ್ಲಾ ಗೋಚರವಾದಾಗ ಜಮದಗ್ನಿಗಳು ಕನಲಿ ಕೆಂಡವಾಗಿ ಪರಶುರಾಮನನ್ನು ಕುರಿತು 'ನಿನ್ನ ತಾಯಿಯ ತಲೆ ಯನ್ನು ಕಡಿದುಬಿಡು' ಎಂದು ಆಜ್ಞಾಪಿಸಿದರು. ಪರಶುರಾಮನು ಎರಡೆಣಿಸದೆ ಹಾಗೆಯೇ ಮಾಡಿದನು. ಅದರಿಂದ ಸುಪ್ರೀತರಾದ ಮುನಿಗಳು 'ನಿನಗೇನು ಬೇಕೋ ಕೇಳಿಕೋ' ಎಂದರು. ಜಾಣನಾದ ಪರಶುರಾಮನು 'ನನ್ನ ತಾಯಿ ಜೀವಂತಳಾಗಬೇಕೆಂಬುದೇ ನನಗೆ ಬೇಕಾದ ವರ' ಎಂದು ತಾಯಿಯನ್ನು ಬದುಕಿಸಿಕೊಂಡನು. ಜಮ ದಗ್ನಿಗಳ ಬಳಿ ಬೇಡಿದ್ದನ್ನೆಲ್ಲ ಕೊಡುವ ಕಾಮಧೇನುವಿತ್ತು. ಅದನ್ನು ದಕ್ಕಿಸಿಕೊಳ್ಳಬೇಕೆಂದು ಕಾರ್ತವೀರ್ಯನು ಜಮದಗ್ನಿಗಳನ್ನು ಕೊಂದು ಹಾಕಿದನು. ಅದರಿಂದ ಕ್ರೋಧಗೊಂಡ ಪರಶುರಾಮನು ಕಾರ್ತ ವೀರ್ಯನನ್ನು ಕೊಚ್ಚಿಕೊಂದನು. ಆಮೇಲೆ ತಂದೆಯನ್ನು ಬದುಕಿಸಿ ಕೊಳ್ಳುವ ಸಲುವಾಗಿ, ಸ್ವರ್ಗಲೋಕಕ್ಕೆ ಹೋಗಿ, ಬಹಳ ಸಾಹಸಪಟ್ಟು, ದೇವೇಂದ್ರನಿಂದ ಅಮೃತವನ್ನು ಪಡೆದುತಂದು, ಅದರ ಬಲದಿಂದ ತಂದೆಗೆ ಜೀವ ತುಂಬಿದನು. ಹೀಗೆ ಪುಣ್ಯಚರಿತ್ರರಾದ ಅವರೆಲ್ಲ, ದೇವತಾಸ್ವರೂಪರಾಗಿ ಎಲ್ಲಮ್ಮನಗುಡ್ಡದಲ್ಲಿಯೇ ನೆಲೆಸಿ ಭಕ್ತರನ್ನು ಹರಸುತ್ತಿದ್ದಾರೆ.

ಎಲ್ಲಮ್ಮನ ಗುಡ್ಡದಲ್ಲಿ , ಎಲ್ಲಮ್ಮನ ದೇವಾಲಯವೇ ಪ್ರಧಾನ ವಾಗಿದ್ದು, ಅದು ದೇಶೋವಿಶಾಲವೂ ಭವ್ಯವೂ ಆಗಿದೆ. ಅಲ್ಲಿಂದ ಸ್ವಲ್ಪ ಪ್ರತ್ಯೇಕವಾಗಿ ಪರಶುರಾಮ ದೇವಾಲಯ, ಜಮದಗ್ನಿ ದೇವಾ ಲಯ, ಮಾತಂಗಿ ದೇವಾಲಯ, ಕಾಲಭೈರವ ದೇವಾಲಯ ಮುಂತಾ ದವುಗಳಿವೆ. ಕಾಲಭೈರವ ವಿಗ್ರಹದಲ್ಲಿ ಒಂದು ನಾಯಿಯೂ ಕೆತ್ತ ಲ್ಪಟ್ಟಿದೆ. ಗುಡ್ಡದ ಮೇಲೆಯೇ ಅಂತರಗಂಗೆಯಾಗಿ ಕೊಳ್ಳಗಳಿಂದ ಬಂದು ಸೇರುವ ಝರಿಗಳಿಂದಾದ ಎಣ್ಣೆಹೊಂಡ, ಅರಿಶಿನ ಹೊಂಡ, ಕುಂಕುಮಹೊಂಡ ಎಂಬ ತೀರ್ಥಕೊಳಗಳಿವೆ. ಎಲ್ಲಮ್ಮನ ಗುಡಿಯಲ್ಲಿ ನಿತ್ಯವೂ ಜಾತ್ರೆಯೇ; ಆದರೆ ಹುಣ್ಣಿಮೆಯ ದಿನ ಗಳಂತೂ ಜನನಿಬಿಡವಾಗಿರುತ್ತವೆ. ಆ ಪೈಕಿ ಎರಡು ಹುಣ್ಣಿಮೆಗಳು ರಂಡೆಹುಣ್ಣಿಮೆ ಮತ್ತು ಮುತ್ತೈದೆಹುಣ್ಣಿಮೆಗಳೆನಿಸಿ ಆಗ ಭಕ್ತೆಯರು ದಂಡುದಂಡಾಗಿ ಬರುತ್ತಾರೆ. ಜಮದಗ್ನಿಗಳ ಸಾವಿನಿಂದ ಎಲ್ಲಮ್ಮನು ವಿಧವೆಯಾದುದು 'ರಂಡೆಪೂರ್ಣಿಮೆ' ಯಾದರೆ, ಅವರು ಮತ್ತೆ ಜೀವದುಂಬಿ ಮೇಲೆದ್ದುದು 'ಮುತ್ತೈದೆಪೂರ್ಣಿಮೆ' ಎಂಬುದಾಗಿ ಆಚರಿಸಲ್ಪಡುತ್ತದೆ. 'ಭಾರತಹುಣ್ಣಿಮೆ' ಯೆಂಬ ಮಾಘಮಾಸದ ಹುಣ್ಣಿಮೆಯಂದು ನಡೆಯುವ ರಥೋತ್ಸವ ಜಾತ್ರೆಯೇ ಅತ್ಯಂತ ದೊಡ್ಡದು. ಅಂದು ೨ ಲಕ್ಷ ಜನವಾದರೂ ಬಂದು ಸೇರುತ್ತಾರೆ. ಎತ್ತಿನಬಂಡಿಗಳಲ್ಲಿ ಬಂದು ಬೆಟ್ಟದ ಪರಿಸರದಲ್ಲಿ ಬೀಡುಬಿಟ್ಟು, ಅಲ್ಲಿಯೇ ಅಡಿಗೆ ಮಾಡಿಕೊಂಡು ಇದ್ದುಬಿಡುತ್ತಾರೆ. ಆ ಜಾತ್ರೆಯು ಒಂದು ತಿಂಗಳಿನಷ್ಟು ದೀರ್ಘಕಾಲ ನಡೆಯುತ್ತದೆ.

ಮಹದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗಗಳಿಂದ ಒಂದೊಂದು ಜಾನಪದೀಯ ಭಕ್ತಿಪರಂಪರೆಯು ಅವತರಿಸಿರು ವಂತೆಯೇ, ಎಲ್ಲಮ್ಮನೂ ಒಂದು ಭಕ್ತಿಪರಂಪರೆಗೆ ಕಾರಣಕರ್ತ ಳಾಗಿದ್ದಾಳೆ. 'ಜೋಗತಿಯರು' ಎಂದು ಕರೆಯಲಾಗುವ ದೀಕ್ಷೆ ಯನ್ನು ಸ್ತ್ರೀಯರು ಆ ದೇವಾಲಯದ ಮೂಲಕ ಪಡೆದುಕೊಂಡು, ದೇವಿಯ ಭಕ್ತಿಪ್ರಚಾರದಲ್ಲಿ ತೊಡಗುತ್ತಾರೆ. ಅವರಿಗೆಂದೇ ವಿಶೇಷ ಕಟ್ಟುಪಾಡುಗಳು ಆಚರಣೆಗಳೂ ಇವೆ. ಎಲ್ಲಮ್ಮನು ಎಲ್ಲರ ಅಮ್ಮ ನೆನಿಸಿ, ನಮ್ಮ ನಾಡಿನ ನಾಲ್ಕೂ ವರ್ಣದವರು ಅವಳಿಗೆ ನಡೆದು ಕೊಳ್ಳುತ್ತಾರೆ. ಆಂಧ್ರ, ಮಹಾರಾಷ್ಟ್ರಗಳಿಂದಲೂ ಜಾತ್ರಾಕಾಲಕ್ಕೆ ಭಕ್ತರು ಬರುತ್ತಾರೆ. ಎಲ್ಲಮ್ಮನನ್ನು ಕುರಿತು ತಕ್ಕಷ್ಟು ಜನಪದ ಸಾಹಿತ್ಯವೂ ಇದೆ.

**ಶಿರಸಂಗಿ:** ಋಷ್ಯಶೃಂಗಮುನಿಗಳ ತಪೋಭೂಮಿಯೆನಿಸಿದ ಶೃಂಗಗಿರಿಯು, ಶಿರಸಂಗಿಯೆನಿಸಿ ನಮ್ಮ ನಾಡಿನ ಶಕ್ತಿಪೀಠಗಳ ಲ್ಲೊಂದಾಗಿದೆ. ಸವದತ್ತಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೨೧ ಕಿಲೋಮೀಟರ್ ಅಂತರದಲ್ಲಿದೆ. ಸುತ್ತಲೂ ಹಬ್ಬಿದ ಪರ್ವತಾ ವಳಿಗಳ ತಪ್ಪಲಿನ ತೊಟ್ಟಿಲಿನಂತಹ ತಾಣದಲ್ಲಿ ದೇವಾಲಯವಿದೆ.

ಜಗನ್ಮಾತೆಯು ಅಲ್ಲಿ ಕಾಳಿಕಾಂಬೆಯಾಗಿ 'ಆನಂದಾಸನ' ನೆಂಬ ವಿಶೇಷ ಭಂಗಿಯಲ್ಲಿ ಅಷ್ಟಭುಜೆಯಾಗಿ ಆಸೀನಳಾಗಿದ್ದಾಳೆ. ಅಲ್ಲಿ ಭೀಮರಥಿಹೊಂಡ, ಖಡ್ಗತೀರ್ಥಗಳೆಂಬ ಜೀವಜಲಭರಿತವಾದ ಪುಣ್ಯತೀರ್ಥಗಳಿವೆ. ಯುಗಾದಿ ಪಾಡ್ಯದಿಂದ ೫ ದಿನಗಳ ವಾರ್ಷಿಕ ಜಾತ್ರೆಯು ನಿಧಿಸಮರ್ಪಣೆ, ಬುತ್ತಿಹಾರಿಸುವುದು ಮುಂತಾದ ವಿಶಿಷ್ಟ ಆಚರಣೆಗಳಿಂದೊಡಗೂಡಿ ಭವ್ಯವಾಗಿ ಸಾಗುತ್ತದೆ. ಭಕ್ತ ನಿವಾಸಗಳೂ ನಿತ್ಯಾನ್ನಸಂತರ್ಪಣೆಗಳೂ ಅಲ್ಲಿವೆ.

**ಸೊಗಲ:** ಸವದತ್ತಿ ತಾಲ್ಲೂಕಿಗೆ ಸೇರುವ ಸೊಗಲವು ಪಾರ್ವತಿ ಪರಮೇಶ್ವರರ ದಿವ್ಯಧಾಮವೆನಿಸಿ, ಅಲ್ಲಿಂದ ೨೪ ಕಿಲೋಮೀಟರ್ ದೂರದಲ್ಲಿದೆ. ಚಿತ್ರವಿಚಿತ್ರವಾಗಿ ಹಬ್ಬಿದ ಪರ್ವತಾವಳಿಗಳ ನಡುವೆ ಆ ಪುಣ್ಯಕ್ಷೇತ್ರವಿದೆ. ಸೋಮೇಶ್ವರ-ಪಾರ್ವತಿದೇವಿಯರ ಸನ್ನಿಧಾನವಿರುವ ದೇವಾಲಯವಿದೆ. ವಾರ್ಷಿಕ ರಥೋತ್ಸವ, ಗಿರಿಜಾಕಲ್ಯಾಣಗಳು ಅಲ್ಲಿನ ಸಂಭ್ರಮದ ಪರ್ವಗಳಾಗಿವೆ. ಗಿರಿಗರ್ಭದಿಂದ ಉಕ್ಕಿ ಬರುವ ಜಲಧಾರೆಯು ಅಲ್ಲಿ ೫೦ ಅಡಿಗಳ ಸಮತಲಭೂಮಿಗೆ ಜಲಪಾತವಾಗಿ ಧುಮ್ಮಿಕ್ಕುತ್ತದೆ. ಅದಕ್ಕೆ ಮೈಯ್ಯೊಡ್ಡಿ ಮೀಯುವುದೇ ಒಂದು ದಿವ್ಯಾನುಭವ. ಮೈ ಕೈ ನೋವುಗಳು ಮಾಯವಾಗುತ್ತವೆಂಬ ಮಹಿಮೆಯೂ ಅದಕ್ಕಿದೆ.

**ಹಂಡಿಬಡಗನಾಥ:** ಖಾನಾಪುರ ತಾಲ್ಲೂಕಿನ ಕುಂಬರ್ಡಾ ಗ್ರಾಮಕ್ಕೆ ಸೇರುವ ಹಂಡಿಬಡಗನಾಥವು ನಾಥಸಂಪ್ರದಾಯಕ್ಕೆ ಸೇರುವ ಮಠ ಮತ್ತು ದೇವಾಲಯದಿಂದೊಡಗೂಡಿದ, ಪರ್ವತದ ಶಿಖರದಲ್ಲಿರುವ ಶಾಂತ ಸುಂದರ ರಮಣೀಯ ಕ್ಷೇತ್ರವಾಗಿದೆ. ಅಲ್ಲಿ ಹಂಡಿಬಡಗನಾಥ, ಕಾಲಭೈರವ, ಯೋಗಮಾಯಾ ಸನ್ನಿಧಾನಗಳಿವೆ. ಅದರೊಳಗೇ ಒಂದು ಗುಹಾಲಯವಿದೆ. ಸುತ್ತಲೂ ತೀರ್ಥಗಳಿವೆ. ಕನ್ನಡಿಗರಾಗಿಬಿಟ್ಟಿರುವ ಉತ್ತರಭಾರತೀಯಸಾಧುಗಳೇ ಅಲ್ಲಿಗೆ ಅರ್ಚಕರಾಗಿದ್ದಾರೆ. ಮಠಾಧೀಶರೂ ಇದ್ದಾರೆ. ಕದ್ರಿಗೆ ಬಂದ ಝುಂಡಿಯು ಇಲ್ಲಿಗೂ ಬರುತ್ತದೆ. ಶಿವರಾತ್ರಿಯ ಜಾತ್ರೆಯು ದೊಡ್ಡದಾಗಿ ನಡೆಯುತ್ತದೆ.

**ಮನೋಳಿ:** ಮನೋಳಿಯು ಸವದತ್ತಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೧೧ ಕಿಲೋಮೀಟರ್ ದೂರದಲ್ಲಿದೆ. ಮಲಪ್ರಭಾನದಿಯ ದಂಡೆಯ ಪುಣ್ಯತೀರ್ಥವಾಗಿದ್ದು ಹಿಂದೆ ಇದಕ್ಕೆ ಮುನಿಪುರವೆಂಬ ಹೆಸರಿತ್ತು. ನದಿಯ ತೀರದಲ್ಲಿಯೇ ೮ ಶಿವಾಲಯಗಳ ಸಮುಚ್ಚಯವಿದೆ. ಗುರ್ಲ ಹೊಸೂರು ಗ್ರಾಮವು ನವಿಲುತೀರ್ಥದ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿಹೋಗಿದ್ದು, ಅಲ್ಲಿದ್ದ ಚಿದಂಬರ ಗುಡಿಯು ಪರಮಪವಿತ್ರವಾಗಿದ್ದುದರಿಂದ ಅದನ್ನೀಗ ಮನೋಳಿಯಲ್ಲಿ ನೂತನವಾಗಿ ಕಟ್ಟಿದ್ದಾರೆ.

**ರಾಮತೀರ್ಥ:** ಅಥಣಿ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೨೮ ಕಿಲೋಮೀಟರ್ ದೂರದಲ್ಲಿ ರಾಮತೀರ್ಥವೆಂಬ ಪುಣ್ಯಧಾಮವಿದೆ. ರಾಮೇಶ್ವರ ದೇವಾಲಯವು ಅಲ್ಲಿನ ಪುಣ್ಯನೆಲೆಯಾಗಿದೆ. ಅಲ್ಲಿನ ಶಿಲ್ಪಕಲೆಯು ಮೆಚ್ಚುವಂತಿದೆ. ಪಾರ್ವತೀದೇವಿಯು ಆನಂದ ನಾಯಕಿ ಎಂಬ ಹೆಸರಿನಿಂದ ಸಮೀಪದ ಆನಂದ ಪರ್ವತವೆಂಬ ಗುಡ್ಡದ ಚಿಕ್ಕ ಗುಹಾಲಯದಲ್ಲಿ ನೆಲೆಸಿದ್ದಾಳೆ. ಪಾಪವಿನಾಶಿನಿಯೇ ಮೊದಲಾದ ಅಷ್ಟ ತೀರ್ಥಗಳಿವೆ. ಶಿವರಾತ್ರಿಗೆ ೫ ದಿನಗಳ ದೊಡ್ಡ ಜಾತ್ರೆಯಾಗುತ್ತದೆ. ಊರಿನಲ್ಲಿ ತ್ರಿವಿಕ್ರಮ ಸ್ವಾಮಿಗಳೆಂಬ ಮಹಾತ್ಮರ ಸಮಾಧಿಯಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ರಾಮತೀರ್ಥವೆಂಬ ಹೆಸರಿನ ಒಂದು ಪುಣ್ಯತೀರ್ಥವಿದೆ.

**ಸಪ್ತಸಾಗರ:** ಅಥಣಿ ತಾಲ್ಲೂಕಿಗೆ ಸೇರಿದ ತೀರ್ಥವಾಗಿದ್ದು, ಹೆಸರೇ ಅಪೂರ್ವವಾಗಿದೆ. ಕೃಷ್ಣಾನದಿಯ ತೀರದಲ್ಲಿದ್ದು, ನದಿಯು ಅಲ್ಲಿ ಉತ್ತರವಾಹಿನಿಯಾಗಿದೆ. ಮಹಾಭಾರತದ ಜನಮೇಜಯ ರಾಯನು ತಾನು ಕೈಗೊಂಡು ಅಪೂರ್ಣವಾಗಿ ಉಳಿದ ಸರ್ಪಯಾಗವನ್ನು ಸಪ್ತಸಾಗರಕ್ಕೆ ಬಂದು ಬಕದಾಲ್ಭ್ಯ ಮುನಿಗಳ ನೆರವಿನಿಂದ ಪೂರ್ಣಗೊಳಿಸಿಕೊಂಡನೆಂದು ಸ್ಥಳಪುರಾಣದಲ್ಲಿ ಹೇಳಿದೆ. ಆಗ ಸಪ್ತಋಷಿಗಳು ಏಳು ತೀರ್ಥಕುಂಡಗಳನ್ನು ನಿರ್ಮಿಸಿ, ಅವುಗಳಿಗೆ ಸಪ್ತಸಾಗರಗಳಿಂದ ಪುಣ್ಯಜಲವನ್ನು ತಂದು ತುಂಬಿಸಿದುದೇ ಕಾರಣವಾಗಿ ಅದು ಸಪ್ತಸಾಗರವೆನಿಸಿತು. ವಿಟ್ಠಲದೇವರ ದೇವಾಲಯ ಮತ್ತು ಗೋಕಾವಿ ದಾದಾ ಎಂಬ ಸಂತರ ಸಮಾಧಿ ಅಲ್ಲಿನ ಪುಣ್ಯಸ್ಥಳಗಳಾಗಿವೆ.

**ಕಣಕುಂಬಿ:** ಕಣಕುಂಬಿಯು ಖಾನಾಪುರ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩೮ ಕಿಲೋಮೀಟರ್‌ಗಳ ದೂರದಲ್ಲಿದೆ. ಅದು ಕುಲ್ಲಕ ಮುನಿಗಳ ತಪೋಭೂಮಿಯಾಗಿದೆ. ಮಲಪ್ರಭಾ ನದಿಗೆ ಕಣಕುಂಬಿಯು ಉಗಮಸ್ಥಾನವಾಗಿದೆ. ಅಲ್ಲಿ ಕಣಕುಂಬೇಶ್ವರ ಮತ್ತು ಮಾಹುಲಿದೇವಿ ದೇವಾಲಯಗಳಿವೆ.

**ಶಾಂತಿಗಿರಿ:** ಚಿಕ್ಕೋಡಿ ತಾಲ್ಲೂಕಿಗೆ ಸೇರುವ ಶಾಂತಿಗಿರಿಯೆಂಬುದು ಕುಪ್ಪಾನವಾಡಿ ಮತ್ತು ಕೋಥಳಿ ಗ್ರಾಮಗಳ ನಡುವಣ ಒಂದು ಗುಡ್ಡವಾಗಿದೆ. ಅದರ ಮೇಲೆ ಇತ್ತೀಚಿನ ವರ್ಷಗಳಲ್ಲಿ ದೊಡ್ಡದೊಂದು ಜೈನಕೇಂದ್ರವು ನಿರ್ಮಾಣಗೊಂಡಿದೆ. ಆಶ್ರಮ, ಧರ್ಮಶಾಲೆ, ಪ್ರವಚನಮಂದಿರ, ತೀರ್ಥಂಕರ ಸನ್ನಿಧಾನಗಳು ಮುಂತಾದುವೆಲ್ಲ ತುಂಬಾ ವೈಭವಪೂರ್ಣವಾಗಿ ಸ್ಥಾಪನೆಗೊಂಡಿವೆ.

**ಸ್ತವನಿಧಿ:** ಚಿಕ್ಕೋಡಿ ತಾಲ್ಲೂಕಿಗೆ ಸೇರುವ ಸ್ತವನಿಧಿಯೆಂಬುದು ಕೂಡ ಅತಿದೊಡ್ಡ ಜೈನತೀರ್ಥವಾಗಿದೆ. ಪದ್ಮಾವತಿಯಕ್ಷಿಯ ದೇವಾಲಯ, ಸಹಸ್ರಫಣ ಪಾರ್ಶ್ವನಾಥ ಗುರುಕುಲ ಮುಂತಾದುವೆಲ್ಲವೂ ಅಲ್ಲಿವೆ.

## ಕಲ್ಬುರ್ಗಿ

**ಗಾಣಗಾಪುರ:** ಅಫಜಲಪುರ ತಾಲ್ಲೂಕಿಗೆ ಸೇರುವ ಗಾಣಗಾಪುರವು ಅಲ್ಲಿಂದ ೨೫ ಕಿಲೋಮೀಟರ್ ದೂರದಲ್ಲಿ ಭೀಮಾ ನದಿಯ ತೀರದಲ್ಲಿರುವ ಅತ್ಯಮೋಘವಾದ ತೀರ್ಥಕ್ಷೇತ್ರವಾಗಿದೆ. ದತ್ತಾತ್ರೇಯಗುರುವಿನ ಎರಡನೆಯ ಅವತಾರಿಗಳಾದ ನರಸಿಂಹ ಸರಸ್ವತಿಗಳೆಂಬ (೧೪೫೦) ಮಹಾತ್ಮರ ತಪೋಭೂಮಿಯಾಗಿ ಗಾಣಗಾಪುರವು ಭಕ್ತರ ಕಾಮಧೇನುವಾಗಿದೆ. ಈಗ ಅಲ್ಲಿ ನರಸಿಂಹ ಸರಸ್ವತಿಗಳ ಮಠವಿದೆ. ಅವರೇ ಸ್ಥಾಪಿಸಿ ಪೂಜಿಸಿದ ವಾಲುಕಾ ಗಣಪತಿಯಿದೆ. ಅವರು ಅಂತರ್ಧಾನರಾಗಿ ಅವತಾರವನ್ನು ಕೊನೆಗೊಳಿಸಿದ್ದರಿಂದ ಅಲ್ಲಿ ಅವರ ಸಮಾಧಿಯೇನೂ ಇಲ್ಲ. ಮಠದೊಳಗೆ ಅವರ ಸನ್ನಿಧಾನವಿರುವ ಗರ್ಭಗೃಹದಲ್ಲಿ ಅವರೇ ಕರುಣಿಸಿದ ನಿರ್ಗುಣಪಾದುಕೆಗಳು ಪೂಜಿತವಾಗುತ್ತಿವೆ. ಅವುಗಳನ್ನು ದೊಡ್ಡ ಆಕಾರದ ಎರಡು ಬೆಳ್ಳಿಯ ಸಂಪುಟಗಳಲ್ಲಿರಿಸಿದ್ದಾರೆ. ಒಂದು

ಕಿಂಡಿಯ ಮೂಲಕ ಅವುಗಳ ದರ್ಶನ ಪಡೆಯಬೇಕು. ಆಂಧ್ರ, ಮಹಾರಾಷ್ಟ್ರಗಳಿಂದಲೂ ಭಕ್ತರು ಆಗಮಿಸುತ್ತಾರೆ. ಬಡತನ, ರೋಗ ಬಾಧೆ, ಭೂತಬಾಧೆಗಳ ನಿವಾರಣೆಗಾಗಿ ಭಕ್ತರು ಆ ಕ್ಷೇತ್ರವನ್ನು ಆಶ್ರಯಿಸುತ್ತಾರೆ. ವರ್ಷಪೂರ್ತಿ ವಿಧವಿಧವಾದ ನೈಮಿತ್ತಿಕೋತ್ಸವ ಗಳು ಜರುಗುತ್ತಲೇ ಇರುತ್ತವೆ. ಮಾಘಬಹುಳ ಪಾಡ್ಯದಿಂದ ನಾಲ್ಕು ದಿನಗಳ ಕಾಲ ನಡೆಯುವ 'ಗುರುಪಾಡ್ಯಮಿ' ಯೆಂಬ ಮಹಾ ಪರ್ವಕ್ಕೆ ಸದ್ಭಕ್ತರ ಮಹಾಪೂರವೇ ಹರಿದುಬರುತ್ತದೆ.

ಯಾತ್ರೆಯು ಫಲಪ್ರದವಾಗಬೇಕಾದರೆ 'ಮಧುಕರಿ' ಎಂಬ ಆಚರಣೆಯಲ್ಲಿ ಪಾಲ್ಗೊಳ್ಳಬೇಕು. ಸ್ಥಳಪುರೋಹಿತರ ಮನೆಗಳ ಮುಂದೆ ನಿಂತು, ಅನ್ನಭಿಕ್ಷೆಯನ್ನು ಬೇಡಿ ಉಣಬೇಕು. ಅಂತೆಯೇ ಆ ಸ್ಥಳಪುರೋಹಿತರಿಗೆ ದ್ರವ್ಯವನ್ನಿತ್ತು, ಅಡಿಗೆ ಮಾಡಿಸಿ, ನಾವೂ ಮಧುಕರಿಯನ್ನು ಅವರ ಮನೆಯ ಮುಂದೆಯೇ ಹೂಡಿಕೊಂಡು ಮಧ್ಯಾಹ್ನದಲ್ಲಿ ಬೇಡಿಬಂದವರಿಗೆ ಕೈಯಾರೆ ಬಡಿಸಬೇಕು.

ಊರಿನಿಂದ ೨ ಕಿಲೋಮೀಟರ್ ದೂರದಲ್ಲಿ ಭೀಮಾನದಿ ಯೊಡನೆ ಅಮರಜಾ ಎಂಬ ನದಿಯು ಸಂಗಮಿಸುವುದರಿಂದ ಅಲ್ಲಿಯೂ ಒಂದು ಪುಣ್ಯತೀರ್ಥವು ರೂಪು ತಾಳಿದೆ. ಸಂಗಮದ ದಂಡೆಯಲ್ಲಿ ಕೆಲವು ದೇವಾಲಯಗಳಿವೆ. ನರಸಿಂಹ ಸರಸ್ವತಿಗಳು ಆ ತಾಣದಲ್ಲಿಯೂ ಅನುಷ್ಠಾನಗಳೆನ್ನೆಸಗಿದ್ದಾರೆ. ತೆರೆದ ಮಂಟಪಗಳಲ್ಲಿ ವ್ರತಧಾರಿಗಳು ಅಲ್ಲಿಯೇ ಇದ್ದುಕೊಂಡು 'ಗುರುಚರಿತ್ರೆ' ಯೆಂಬ ದತ್ತಾತ್ರೇಯಗುರುವಿನ ಪುಣ್ಯಚರಿತೆಯನ್ನು ವಿಧಿಯಪ್ರಕಾರ ಪಾರಾಯಣ ಮಾಡುತ್ತಾರೆ. ಊರಿನಿಂದ ನದಿಯ ಪಾತ್ರದಲ್ಲಿಯೇ ನಡೆದುಹೋದರೆ, ಸಂಗಮವನ್ನು ತಲುಪುವ ಹೊತ್ತಿಗೆ ಅಷ್ಟ ತೀರ್ಥಗಳ ಮತ್ತು ಕೆಲವು ದೇವಸನ್ನಿಧಿಗಳ ದರ್ಶನವಾಗುತ್ತದೆ. ಯಾತ್ರಿಕರು ಅನವರತವೂ ಹರಿದುಬರುತ್ತಿರುತ್ತಾರಾದ್ದರಿಂದ ಊರ ತುಂಬ ಹಲವಾರು ಛತ್ರಗಳು ಮಠಗಳೂ ಮನೆಮಾಡಿವೆ.

**ಮಳಖೇಡ:** ಸೇಡಂ ತಾಲ್ಲೂಕಿಗೆ ಸೇರಿದ ಮಳಖೇಡವು ಕಾಗಿಣಾನದಿಯ ದಂಡೆಯ ಪುಣ್ಯತೀರ್ಥವಾಗಿದೆ. ಹೊಳೆಯ ತೀರ ದಲ್ಲಿ ಮಧ್ವಪರಂಪರೆಗೆ ಸೇರಿದ ಜಯತೀರ್ಥರು (೧೩೬೦), ಅಕ್ಷೋಭ್ಯತೀರ್ಥರು (೧೩೬೦), ರಘುನಾಥತೀರ್ಥರು (೧೫೦೦), ಸತ್ಯನಿಧಿತೀರ್ಥರು (೧೫೫೦) ಎಂಬ ಯತಿವರ್ಯರ ವೃಂದಾವನ ಗಳಿವೆ. ಅವರ ಆರಾಧನಾಮಹೋತ್ಸವಗಳು ಅಲ್ಲಿನ ದೊಡ್ಡ ಪರ್ವ ಗಳಾಗಿವೆ. ವರ್ಷಪೂರ್ತಿ ನಾಡಿನ ವಿವಿಧ ಭಾಗಗಳಿಂದ ಮಧ್ವಾನು ಯಾಯಿಗಳು ಮಳಖೇಡಕ್ಕೆ ಬಂದು ಸೇವೆಗಳನ್ನು ಮಾಡಿಸಿ ಕೃತಾರ್ಥ ರಾಗುತ್ತಾರೆ. ಊರಿನೊಳಗೆ 'ಕಾರಣಿಕಮುತ್ಯಾ' ಎಂದು ಕರೆಯುವ ಮಹಾತ್ಮನ ಮಠವಿದೆ.

**ಅಂಕಲಗಿ:** ಅಂಕಲಗಿಯು ಜೇವರ್ಗಿ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩೦ ಕಿಲೋಮೀಟರ್ ದೂರದಲ್ಲಿ ಭೀಮಾನದಿಯ ತೀರದ ಪುರಾತನ ಪುಣ್ಯತೀರ್ಥವಾಗಿದೆ. ಶಂಕರಲಿಂಗ, ರಾಮಲಿಂಗ, ಮಹಾ ದೇವ ಎಂಬ ಪುರಾತನ ಶಿವಾಲಯಗಳಿವೆ. ಮಹಾರಾಷ್ಟ್ರದ ಶ್ರೇಷ್ಠ ಸಂತರಾದ, ಛತ್ರಪತಿ ಶಿವಾಜಿ ಮಹಾರಾಜನಿಗೆ ಮಾರ್ಗದರ್ಶಕ ಗುರುಗಳಾಗಿದ್ದ ಸಮರ್ಥರಾಮದಾಸರೆಂಬ ಮಹಾತ್ಮರ ದೇವಾ ಲಯವೊಂದು ಕೂಡ ಅಲ್ಲಿನ ಪುಣ್ಯಕ್ಷೇತ್ರವಾಗಿದೆ.

**ನರೋಣ:** ಆಳಂದ ತಾಲ್ಲೂಕಿಗೆ ಸೇರುವ ನರೋಣ ಕ್ಷೇತ್ರವು, ಅಲ್ಲಿಂದ ೨೫ ಕಿಲೋಮೀಟರ್‌ಗಳ ದೂರದಲ್ಲಿದೆ. ಶ್ರೀರಾಮನು ರಾವಣಸಂಹಾರದ ಪಾಪವನ್ನು ಕಳೆದುಕೊಳ್ಳುವುದಕ್ಕಾಗಿ ನರೋಣಕ್ಕೆ ಬಂದು ಕಾರ್ತಿಕೇಯಲಿಂಗವನ್ನು ಸ್ಥಾಪಿಸಿ ಪೂಜಿಸಿದುದರಿಂದ ಅದೊಂದು ಪುಣ್ಯಕ್ಷೇತ್ರವಾಗಿದೆ. ಕಾರ್ತಿಕೇಯಸ್ವಾಮಿಯ ದೇವಾ ಲಯವಲ್ಲದೆ, ಅಲ್ಲಿ ಕ್ಷೇಮಲಿಂಗೇಶ್ವರನ ದೇವಾಲಯವೂ ಇದೆ. ವರ್ಷದುದ್ದಕ್ಕೂ ತುಂಬಿತುಳುಕುವ ಅಷ್ಟತೀರ್ಥಗಳು ಆ ದೇವಾ ಲಯದ ಪರಿಸರದಲ್ಲಿವೆ. ಆ ಪೈಕಿ ಭವನಾಶಿನಿ ತೀರ್ಥವು ಒಂದು ಗುಹೆ ಯೊಳಗಿದ್ದು, ಅಲ್ಲಿ ಕಾಳಿಕಾದೇವಿ ಮತ್ತು ಭೈರವರ ಸನ್ನಿಧಾನವಿದೆ.

**ಯಾನಾಗುಂದಿ:** ಸೇಡಂ ತಾಲ್ಲೂಕಿನ ಯಾನಾಗುಂದಿಯು ಮಾತಾಮಣಿಕೇಶ್ವರಿಯೆಂಬ (೧೯೩೪) ತಪಸ್ವಿನಿಯೊಬ್ಬರ ಕಾರಣ ದಿಂದಾಗಿ ಆಧುನಿಕಯುಗದ ಪ್ರಶಾಂತ ಪುಣ್ಯತೀರ್ಥವಾಗಿದೆ. ಬಲ ವಂತದ ಬಾಲ್ಯವಿವಾಹಕ್ಕೆ ತುತ್ತಾದ ಮಾತೆಯವರು ಪತಿಗೃಹವನ್ನು ಹೊಕ್ಕಮೇಲೆ "ಸಂಸಾರಬಂಧನಕ್ಕೆ ಸಿಲುಕಿಬಿಟ್ಟೆನಲ್ಲಾ, ನಾನು ಸತ್ತು ಹೋಗಬೇಕು" ಎಂದು ತೀವ್ರವಾದ ಸಂತಾಪಕ್ಕೆ ಗುರಿಯಾಗಿ ಅನ್ನ ನೀರುಗಳನ್ನು ತೊರೆದುಬಿಟ್ಟರು. ಆದರೆ ಮರಣವು ಬರಲಿಲ್ಲ. ಯಾವುದೋ ದಿವ್ಯಶಕ್ತಿಯು ಅವರ ಶರೀರದಲ್ಲಿ ಆವಾಹನೆ ಗೊಂಡುದೇ ಕಾರಣವಾಗಿ, ತಮ್ಮ ಬದುಕಿನ ಪರ್ಯಂತ ಅವರು ಆಹಾರನಿಹಾರಗಳಿಲ್ಲದೆಯೇ ಸಾಧನೆ ಮಾಡುತ್ತಾ, ಭಕ್ತಜನರ ದುಃಖ ದುಮ್ಮಾನಗಳನ್ನು ಪರಿಹರಿಸುತ್ತಾ ಮುಕ್ತರಾದರು. "ಅನ್ನಾಹಾರ ಗಳಿಲ್ಲದೆ ಬದುಕುವುದುಂಟೇ" ಎಂದು ಚಕಿತರಾದವರು, ಅವರನ್ನು ಪರೀಕ್ಷೆಗೂ ಒಳಪಡಿಸಿದ್ದಾರೆ. ಆ ಪರೀಕ್ಷೆಗಳನ್ನೆಲ್ಲಾ ಅವರು ಗೆದ್ದಿ ದ್ದಾರೆ. ಅವರು ದುರ್ಗಾದೇವಿಯ ಅವತಾರವೆಂದು ಭಕ್ತರು ಅವರನ್ನು ಪೂಜಿಸುತ್ತಿದ್ದಾರೆ. ಯಾನಾಗುಂದಿಯಲ್ಲಿರುವ ಗುಡ್ಡ ವೊಂದು ಅವರ ಪಾದಸ್ಪರ್ಶದಿಂದಲೇ ಪುಣ್ಯಭೂಮಿಯಾಗಿ ಮಾಣಿಕ ಗಿರಿಯೆನಿಸಿ ಪವಿತ್ರತೀರ್ಥವಾಗಿದೆ. ಬೆಟ್ಟದಮೇಲೆ ದೇವಾಲಯ, ಆಶ್ರಮ ಮತ್ತು ಪ್ರಸಾದನಿಲಯಗಳಿವೆ. ಬೆಟ್ಟದ ತಪ್ಪಲಿನಲ್ಲಿಯೂ ದೇವಾಲಯವಿದೆ, ತೀರ್ಥವಿದೆ. ಶಿವರಾತ್ರಿಯಲ್ಲಿ ದೊಡ್ಡದಾಗಿ ಅಲ್ಲಿ ಉತ್ಸವಾದಿಗಳು ನಡೆಯುತ್ತವೆ. ಲೀಲಾಲೋಲನಾದ ಭಗವಂತನು ತನ್ನ ಸೃಷ್ಟಿಯ ಒಡಲಿನಲ್ಲಿ ಏನೇನು ವಿಸ್ಮಯಗಳನ್ನಿರಿಸಿದ್ದಾನೋ ಯಾರು ಬಲ್ಲರು!

**ಕಲ್ಬುರ್ಗಿ:** ಜಿಲ್ಲಾ ಕೇಂದ್ರವಾದ ಕಲ್ಬುರ್ಗಿಗೆ ಅದೇ ಪ್ರಾಚೀನ ವಾದ ಹೆಸರು. ಇಸ್ಲಾಮೀಕರಣದ ಹೊಡೆತಕ್ಕೆ ಅಲ್ಲಿನ ಹಿಂದೂಶ್ರದ್ಧಾ ಕೇಂದ್ರಗಳು ನೆಲಕಚ್ಚಿದ್ದಲ್ಲದೆ ನಗರನಾಮಗಳೂ ವಿರೂಪಗೊಂಡುವು. ಗುಲ್ಬರ್ಗಾ ಎಂದು ಬದಲಾಯಿಸಿದ್ದ ಹೆಸರನ್ನೀಗ ಕಲ್ಬುರ್ಗಿ ಎಂದೇ ಈ ಹಿಂದಿನ ರೂಪಕ್ಕೆ ಮರಳಿಸಲಾಗಿದೆ. ಕಲ್ಬುರ್ಗಿಯು ಶರಣ ಬಸವೇಶ್ವರರೆಂಬ ಮಹಾತ್ಮರ ಸಾಧನಾಕೇಂದ್ರವಾಗಿದೆ. ಅವರ ಸಮಾಧಿಮಂದಿರವಿದೆ, ಪೀಠಾಧಿಕಾರಿಗಳಿಂದ ಮಹಾದಾಸೋಹ ಮಠವಿದೆ. ಜೇವರ್ಗಿ ತಾಲ್ಲೂಕಿನ ಅರಳಗುಂಡಿಗಿಯಲ್ಲಿ ಅವತರಿಸಿದ ಶರಣಬಸವೇಶ್ವರರು ಕಲ್ಬುರ್ಗಿಗೆ ಬಂದು ಧರ್ಮಪ್ರಚಾರಮಾಡಿ ಭಕ್ತರನ್ನು ಪರಿಪಾಲಿಸಿದರು. ಚೈತ್ರಬಹುಳಪಂಚಮಿಯಿಂದ ೧೫ ದಿನಗಳು ನಡೆಯುವ 'ಮಹಾದಾಸೋಹ ಜಾತ್ರೆ' ಆ ಸುತ್ತಿಗೆಲ್ಲಾ

ಬಹುದೊಡ್ಡ ಪುಣ್ಯಪರ್ವವಾಗಿದೆ. ಅರಳಗುಂಡಿಗಿಯಲ್ಲಿಯೂ ಶರಣಬಸವೇಶ್ವರರ ದೇವಾಲಯವೊಂದಿದ್ದು ಅಲ್ಲಿಯೂ ವಾರ್ಷಿಕ ಜಾತ್ರೆ ನೆರವೇರುತ್ತದೆ.

## ಯಾದಗಿರಿ

**ತಿಂಥಿಣಿ:** ಸುರಪುರ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೧೯ ಕಿಲೋಮೀಟರ್‌ಗಳ ದೂರದಲ್ಲಿ ಕೃಷ್ಣಾನದಿಯ ನಯನಾಭಿರಾಮವಾದ ತಾಣದಲ್ಲಿ ತಿಂಥಿಣಿಕ್ಷೇತ್ರವಿದೆ. ಮೌನೇಶ್ವರನೆಂಬ (೧೬೫೦) ಪವಾಡಪುರುಷನ ಲೀಲಾಭೂಮಿಯೂ ಐಕ್ಯಭೂಮಿಯೂ ಆಗಿ ತಿಂಥಿಣಿಯು ಜಿಲ್ಲೆಯ ಮಾತ್ರವಲ್ಲ, ಕರ್ನಾಟಕದ ಅತಿ ದೊಡ್ಡ ಯಾತ್ರಾಕೇಂದ್ರಗಳಲ್ಲೊಂದಾಗಿದೆ. ಅವತಾರಸಮಾಪ್ತಿಯ ಕಾಲ ಬಂದಾಗ ಮೌನೇಶ್ವರನು ತಿಂಥಿಣಿಯ ಗವಿಯೊಂದನ್ನು ಹೊಕ್ಕು ಮಾಯವಾಗಿಬಿಟ್ಟನು. ಆ ಗವಿಯನ್ನೇ ಕೇಂದ್ರವಾಗಿಟ್ಟುಕೊಂಡು ಅತ್ಯದ್ಭುತವಾದ ಹಿಂದೂ-ಮುಸ್ಲಿಂಶೈಲಿಯ ದೇವಾಲಯವನ್ನು ನಿರ್ಮಿಸಿದ್ದಾರೆ. ಗವಿಯನ್ನು ಸುಂದರ ನೆಲಮಾಳಿಗೆಯಾಗಿ ರೂಪುಗೊಳಿಸಿದ್ದಾರೆ. ಅದರಲ್ಲಿ ಮೌನೇಶ್ವರನ ಗದ್ದುಗೆಯಿದೆ, ಮೂರ್ತಿಯೇನೂ ಇಲ್ಲ. ಅವನು ಬಳಸುತ್ತಿದ್ದ ಚಪ್ಪಟೆಕೊಡಲಿ, ಪರಶು ಬಟ್ಟಲು, ಹೂಜಿ, ಪರಶುಮಣಿ ಎಂಬ ವಸ್ತುಗಳನ್ನು ಅಲ್ಲಿ ಸ್ಥಾಪಿಸಿ ಪೂಜಿಸುತ್ತಿದ್ದಾರೆ. ಆ ನೆಲಮಾಳಿಗೆಯ ಮೇಲುನೆಲೆಯನ್ನು ಮುಸಲ್ಮಾನರು ತಮ್ಮದಾಗಿಸಿಕೊಂಡು ಮೌನೇಶ್ವರನು ಮೌನುದ್ದೀನ್ ಎಂಬ ಸೂಫಿಸಂತನಾಗಿದ್ದಾನೆ ಎಂದು ಭಾವಿಸಿಕೊಂಡು ಆರಾಧಿಸುತ್ತಿದ್ದಾರೆ. ಮೌನೇಶ್ವರನು ಕವಿಯಾಗಿ ೮೦೦ ವಚನಗಳನ್ನು ರಚಿಸಿದ್ದಾನೆ.

ಮಾಘಮಾಸದಲ್ಲಿ ನಡೆಯುವ ಅವನ ಜಾತ್ರೆಯು, ಕರ್ನಾಟಕದ ಅತಿ ದೊಡ್ಡ ಜಾತ್ರೆಗಳ ಸಾಲಿನಲ್ಲಿ ನಿಲ್ಲುತ್ತದೆ. ರಥೋತ್ಸವಾದಿಗಳ ಕಾಲಕ್ಕೆ ೪ ಲಕ್ಷ ಜನರಾದರೂ ಮೌನೇಶ್ವರ ಸನ್ನಿಧಿಗೆ ಬರುತ್ತಾರೆ. ದರ್ಶನಕ್ಕೆ ಮುನ್ನ ಭಕ್ತರು ಗುಡಿಯ ಮುಂಭಾಗದಲ್ಲಿ 'ಧೂಳುಗಾಯಿ' ಎಂದು ಕರೆಯುವ ತೆಂಗಿನಕಾಯನ್ನು ಈಡುಗಾಯಾಗಿ ಚಚ್ಚಿ ಒಳಕ್ಕೆ ಪ್ರವೇಶಿಸುತ್ತಾರೆ. ಆಗ ಅವುಗಳಿಂದ ಹೊಮ್ಮುವ ಸಿಹಿನೀರು ಚಿಕ್ಕ ಝರಿಯಾಗಿ ದೇವಾಲಯದ ಮುಂದೆ ಹರಿದುಹೋಗುತ್ತದೆ. ೧೫ ದಿನಗಳಷ್ಟು ದೀರ್ಘಕಾಲ ನಡೆಯುವ ಆ ಜಾತ್ರೆಯು ಸರ್ವವಸ್ತುಗಳ ಮಳಿಗೆಯಾಗಿ ಬನಶಂಕರಿಜಾತ್ರೆಯನ್ನು ನೆನಪಿಸುತ್ತದೆ. ವೈದಿಕದೇವಾಲಯಗಳಲ್ಲಿ ನಾವು ಕಾಣಲಾಗದ ಹಲವು ಅಪೂರ್ವ ಆಚರಣೆಗಳಿಗೆ ಆ ಜಾತ್ರೆಯು ಕೇಂದ್ರ ಬಿಂದುವಾಗುತ್ತದೆ. ಮೌನೇಶ್ವರನ ಹೆಸರಿನಲ್ಲಿ ಆ ಜಿಲ್ಲೆಗಳಲ್ಲಿ ಅನೇಕ ಮಠಗಳಿವೆ.

**ಏವೂರು:** ಸುರಪುರಕ್ಕೆ ಸೇರಿದ್ದು, ಅಲ್ಲಿಂದ ೩೨ ಕಿಲೋಮೀಟರ್‌ಗಳ ದೂರದಲ್ಲಿದೆ. ಅಲ್ಲಿ ಸ್ವಯಂಭೂ ಸೋಮೇಶ್ವರನ ದೇವಾಲಯವಿದೆ. ಹಾವುಚೇಳು ಕಚ್ಚಿದರೆ, ಸುಟ್ಟಗಾಯಗಳಾದರೆ, ಅಂತಹವರು ಗುಣಮುಖರಾಗುತ್ತಾರೆ. ಅಶಕ್ತತೆ, ಕಣ್ಣುಬೇನೆ, ತಲೆನೋವು, ಕಿವಿನೋವು, ಉದರಬೇನೆ ಮುಂತಾದ ರೋಗಿಗಳು ಸ್ವಯಂಭೂಸೋಮೇಶ್ವರನ ಪಾದಸ್ಮರಣಮಾತ್ರದಿಂದಲೇ ನಿರೋಗಿಗಳಾಗುತ್ತಾರೆ ಎಂದು ಸಾರುವ ಶಾಸನವೊಂದು ಆ ದೇವಾಲಯದಲ್ಲಿದೆ. ಬಾವಿಬಸವಣ್ಣ, ಸಂಗಮೇಶ್ವರ ಮತ್ತು ಮಲ್ಲಿಕಾರ್ಜುನ ಗುಡಿಗಳು ಅದೇ ವಲಯದಲ್ಲಿವೆ. 'ಕೋಟಿತೀರ್ಥ'ವೆಂಬ ವಿಶಾಲವಾದ ಪುಷ್ಕರಿಣಿಯಿದೆ. ಆ ತೀರ್ಥದ ಸುತ್ತುಗೋಡೆಯ ಒಳಭಾಗದಲ್ಲಿ ರಾಸಲೀಲೆಯಲ್ಲಿ ನಿರತವಾಗಿರುವ ಮಿಥುನಶಿಲ್ಪಗಳು ವಿಸ್ಮಯಕಾರಿಯಾಗಿವೆ. ರಾಮಾಯಣ, ಮಹಾಭಾರತ. ಪಂಚತಂತ್ರ ಮುಂತಾದವುಗಳಲ್ಲಿ ಬರುವ ಕೆಲವು ಘಟನಾವಳಿಗಳನ್ನು ತೋರಿಸುವ ಶಿಲ್ಪಗಳೂ ಆ ಸುತ್ತುಗೋಡೆಯೊಳಗಿವೆ.

**ಭೀಮರಾಯನಗುಡಿ:** ಶಹಾಪುರ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೫ ಕಿಲೋಮೀಟರ್ ದೂರದ ಅಮಲಾಪುರವೆಂಬ ಗ್ರಾಮದ ಉಪಗ್ರಾಮವಾಗಿ ಭೀಮರಾಯನಗುಡಿಯು ಪ್ರಖ್ಯಾತವಾಗಿದೆ. ಆಂಜನೇಯಸ್ವಾಮಿಯನ್ನೇ ಅಲ್ಲಿ ಬಲಭೀಮರಾಯನೆಂದು ಕರೆಯುತ್ತಾರೆ. ಸಂಕ್ರಾಂತಿಯಲ್ಲಿ ನಡೆಯುವ ಎರಡು ದಿನಗಳ ಜಾತ್ರೆ ಬಹಳ ಅಪೂರ್ವವಾಗಿರುತ್ತದೆ. ಹಸರಗುಂಡಗಿಯ ಭೀಮಾನದಿಯಲ್ಲಿ ಸ್ವಾಮಿಯ ಉತ್ಸವಮೂರ್ತಿಗೆ ತೀರ್ಥಸ್ನಾನ, ಶಹಾಪುರದಲ್ಲಿ ರಾತ್ರಿಯೆಲ್ಲಾ ಮೆರವಣಿಗೆ, ಬೆಳಿಗ್ಗೆ ಭೀಮರಾಯನಗುಡಿಯನ್ನು ಮುಟ್ಟಿ ಅಲ್ಲಿ ದೊಡ್ಡದಾದ ಜಾತ್ರೆ – ಇವೆಲ್ಲಾ ಅಭೂತಪೂರ್ವವಾಗಿ ನಡೆಯುತ್ತವೆ. ಭೀಮರಾಯನಗುಡಿಯ ಸಮೀಪದ ಸಗರಾದ್ರಿಪರ್ವತ ಶ್ರೇಣಿಯಲ್ಲಿ ಮುಗಿಲತ್ತ ಮುಖ ಮಾಡಿ ಮಲಗಿರುವಂತೆ ತೋರುವ, ಬುದ್ಧದೇವನ ಮುಖಲಕ್ಷಣಗಳಿಂದ ಕೂಡಿದ, ನಿಸರ್ಗನಿರ್ಮಿತ ಶಿಲಾರಚನೆಯು ದೂರದಿಂದ ನೋಡಿದಾಗ ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ.

**ಛಾಯಾಭಗವತಿ:** ಸುರಪುರ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೬೫ ಕಿಲೋಮೀಟರ್ ದೂರದಲ್ಲಿ ಕೃಷ್ಣಾನದಿಯ ತೀರದಲ್ಲಿರುವ ಛಾಯಾಭಗವತಿಯು ಅತ್ಯಂತ ಮನೋಜ್ಞವಾದ ತೀರ್ಥವಾಗಿದೆ. ಅಲ್ಲಿನ ಆಳವಾದ ಕಣಿವೆಯೊಂದರ ಗುಹಾಲಯದಲ್ಲಿ ಛಾಯಾ ಭಗವತಿಯ ಸನ್ನಿಧಾನವಿದೆ. ಗರ್ಭಗೃಹದ ಪೀಠದಮೇಲೆ ದೇವಿಯ ಪಾದಗಳನ್ನು ಸ್ಥಾಪಿಸಲಾಗಿದ್ದು, ಅದಕ್ಕೇ ಪೂಜೆಸಲ್ಲುತ್ತದೆ. ಮಗ್ಗುಲಲ್ಲಿ ಲಿಂಗವಿದೆ. ವಿಗ್ರಹವೇನೂ ಇಲ್ಲ. ಅಲ್ಲಿ ನದಿಯು ಉತ್ತರವಾಹಿನಿಯಾಗಿದೆ. ವೈಶಾಖಶುದ್ಧ ತದಿಗೆಯಂದು ದೊಡ್ಡದಾದ ಉತ್ಸವ ನಡೆಯುತ್ತದೆ. ಆ ದಿನ ದೇವಿಯ ಆ ಪಾದಗಳ ಮೇಲೆ ಸೂರ್ಯರಶ್ಮಿ ಬೀಳುವುದು ಅಲ್ಲಿನ ಪಾವಿತ್ರ್ಯಕ್ಕೆ ಸಾಕ್ಷಿಯಾಗಿದೆ. ನದಿಯೊಳಗೆ ಬ್ರಹ್ಮಹೃದಯ, ವಿಷ್ಣುವೇಣಿ, ಗೋಮುಖ ಮುಂತಾದ ಹಲವು ತೀರ್ಥಗಳಿವೆ.

**ಘತ್ತರಗಿ:** ಅಫಜಲಪುರ ತಾಲ್ಲೂಕಿಗೆ ಸೇರಿದ್ದು ಅಲ್ಲಿಂದ ೧೪ ಕಿಲೋಮೀಟರ್ ದೂರದಲ್ಲಿ ಭೀಮಾನದಿಯ ತೀರದಲ್ಲಿ ಘತ್ತರಗಿ ಕ್ಷೇತ್ರವಿದೆ. ಅದು ಭಾಗ್ಯಮ್ಮ ಅಥವಾ ಭಾಗ್ಯವಂತಿಯೆಂಬ ಶಕ್ತಿದೇವತೆಯ ಆರಾಧನಾಕೇಂದ್ರವಾಗಿದೆ. ಗರ್ಭಗೃಹದಲ್ಲಿ ಕಾಜು ಎಂಬ ಜಾತಿಯ ಒಂದು ಮರದ ಕಂಬವು ಮಾತ್ರವೇ ಪ್ರತಿಷ್ಠಾಪನೆಗೊಂಡಿದ್ದು, ಭಕ್ತರು ಅದನ್ನೇ ಭಾಗ್ಯವಂತಿದೇವಿಯೆಂದು ಪೂಜಿಸುತ್ತಾರೆ. ಬೇರೆ ವಿಗ್ರಹವಿಲ್ಲ.

**ಸಂಗಮ:** ಶಹಾಪುರ ತಾಲ್ಲೂಕಿಗೆ ಸೇರುವ ಸಂಗಮವು ಗುಂಡಲೂರು ಎಂಬ ಗ್ರಾಮವಲಯಕ್ಕೆ ಸೇರಿದೆ. ಮಹಾರಾಷ್ಟ್ರದ ಭೀಮಾ

ಶಂಕರವೆಂಬಲ್ಲಿ ಹುಟ್ಟಿ ಬರುವ ಭೀಮಾನದಿಯು ಅಲ್ಲಿ ಕೃಷ್ಣಾ ನದಿಯೊಡನೆ ಸಂಗಮಿಸುವುದರಿಂದ ಅದೊಂದು ಪುಣ್ಯತೀರ್ಥ ವಾಗಿದೆ. ಅದು ಗಂಗಾಯಮುನಾ ನದಿಗಳ ಸಂಗಮಸ್ಥಾನದಷ್ಟೇ ಪವಿತ್ರವೆಂದೂ, ದಕ್ಷಿಣಪ್ರಯಾಗವೆಂದೂ ಕೀರ್ತಿತವಾಗಿದೆ. ಅಲ್ಲಿ ಸಂಗಮೇಶ್ವರ ದೇವಾಲಯವಿದೆ.

**ಸನ್ನತಿ:** ಸನ್ನತಿಯು ಚಿತ್ತಾಪುರ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೪೮ ಕಿಲೋಮೀಟರ್ ದೂರದಲ್ಲಿದೆ. ಭೀಮಾನದಿಯ ತೀರದಲ್ಲಿದ್ದು ಪುಣ್ಯಕ್ಷೇತ್ರವಾಗಿದೆ. ಚಂದ್ರಲಾಪರಮೇಶ್ವರಿಯ ದೇವಾಲಯವು ಅಲ್ಲಿನ ಕೇಂದ್ರಬಿಂದುವಾಗಿದೆ. ಶಿಲ್ಪಕಲೆಯ ದೃಷ್ಟಿಯಿಂದ ಕಲಾ ಪ್ರೇಮಿಗಳನ್ನು ತನ್ನತ್ತ ಸೆಳೆಯುವ ಚುಂಬಕಶಕ್ತಿ ಆ ಕ್ಷೇತ್ರಕ್ಕಿದೆ. ಸಂಕ್ರ ಮಣದ ತೀರ್ಥಸ್ನಾನ, ಶ್ರಾವಣಮಾಸದ ಕುಂಕುಮಾರ್ಚನೆ, ನವ ರಾತ್ರಿಯ ದೀಪೋತ್ಸವ ಮತ್ತು ವಾರ್ಷಿಕ ರಥೋತ್ಸವಗಳು ಅಲ್ಲಿನ ವಿಶೇಷ ಪರ್ವಗಳಾಗಿವೆ.

**ಶಹಾಪುರ:** ತಾಲ್ಲೂಕು ಕೇಂದ್ರವಾದ ಶಹಾಪುರವು ಸಗರ ಪರ್ವತವೆಂಬ ವಿಶಾಲವಾಗಿ ಹಬ್ಬಿರುವ ಪರ್ವತ ಪ್ರಾಂತದ ತಪ್ಪಲಿ ನಲ್ಲಿದೆ, ಸಗರಾದ್ರಿಯ ಮೇಲೆ ಹಲವು ತೀರ್ಥಗಳು ಪುಣ್ಯಸ್ಮಾರಕ ಗಳು ಇವೆ. ಪಾಂಡವರಕಲ್ಲು, ಭೀಮನಗವಿ, ಗೊಗ್ಗಮಾಂಬೆಗುಡಿ, ಅಮರಕಲ್ಯಾಣ ಮುಂತಾದುವು ಪವಿತ್ರತಾಣಗಳಾಗಿವೆ. ಮಂದಾ ಕಿನೀತೀರ್ಥ, ನೀಲಮ್ಮನಬಾವಿ, ತಾವರೆಕೆರೆ ಮೊದಲಾದ ಪುಣ್ಯ ತೀರ್ಥಗಳಿವೆ. ಊರಿನೊಳಗೆ ವಿಶ್ವಕರ್ಮ 'ಏಕದಂಡಿಗಿಮಠ' ಮಠವು ಖ್ಯಾತಿವೆತ್ತಿದೆ.

## ಬೀದರ್

**ಬೀದರ್:** ಚಾಮರಾಜನಗರ ಜಿಲ್ಲೆಯು ಕನ್ನಡಾಂಬೆಯ ಪಾದ ಭೂಮಿಯಾದರೆ, ಬೀದರ್ ಜಿಲ್ಲೆಯು ಕನ್ನಡಾಂಬೆಯ ಕಿರೀಟ ವಾಗಿದೆ. ಜಿಲ್ಲಾಕೇಂದ್ರವಾದ ಬೀದರ್‌ನಗರವೇ ಆ ಜಿಲ್ಲೆಯ ಪ್ರಧಾನತೀರ್ಥವಾಗಿದೆ. ಮಹಾಭಾರತದ ವಿದುರನು ಅಲ್ಲಿ ಆಳಿ ದನು. ಅದು ನಳದಮಯಂತಿಯರ ಪ್ರಣಯೋದ್ಯಾನ ವಾಗಿತ್ತು ಎಂಬೆಲ್ಲ ಪೌರಾಣಿಕ ಕೀರ್ತಿಯು ಬೀದರ್‌ಗೆ ಸಂದಾಯವಾಗಿದೆ. ನಮ್ಮ ನಾಡಿಗೇ ದೊಡ್ಡದಾದ, ಸುಸ್ಥಿತಿಯಲ್ಲಿರುವ ಕೋಟೆ ಬೀದರ್ ನಲ್ಲಿದೆ. ಅಲ್ಲಿ ವೀರಸಂಗಯ್ಯನ ಸ್ಮಾರಕ ಮತ್ತು ಭವಾನಿಮಂದಿರ ಗಳು ಪ್ರಮುಖತಾಣಗಳಾಗಿವೆ. ಕಲಾತ್ಮಕಮೂರ್ತಿಯಿಂದ ಕೂಡಿದ ಅನಂತಶಯನ ದೇವಾಲಯವಿದೆ. ಪಾಪನಾಶಿನಿ ಎಂಬ ತೀರ್ಥದಲ್ಲಿ ಬೃಹದಾಕಾರದ ಶಿವಲಿಂಗವಿದೆ. ಶಿವರಾತ್ರಿಯಂದು ಅಲ್ಲಿ ದೊಡ್ಡ ದಾದ ಉತ್ಸವವು ಜರುಗುತ್ತದೆ. ಶುಕ್ರಾಚಾರ್ಯರು ಅನುಷ್ಠಾನ ಮಾಡಿದ ತಾಣದಲ್ಲಿ ಶುಕ್ರತೀರ್ಥವಿದೆ.

ನರಸಿಂಹಝರಾ ಎಂಬ ತೀರ್ಥವು ಬೀದರ್‌ಗೆ ಮುಕುಟ ಪ್ರಾಯವಾಗಿದೆ. ಸದಾಕಾಲ ಒಂದೇ ಮಟ್ಟದಲ್ಲಿ ಬುಗ್ಗೆಜಲದಿಂದ ತುಂಬಿರುವ ಒಂದೂವರೆ ಫರ್ಲಾಂಗಿನಷ್ಟು ಉದ್ದವಾಗಿರುವ ಗುಹೆ ಯೊಳಗೆ ನರಸಿಂಹದೇವರ ಸನ್ನಿಧಾನವಿದೆ. ಎದೆಮಟ್ಟದ ನೀರಿ ನಲ್ಲಿಯೇ ಹಾದುಹೋಗಿ, ಕರಿಯಶಿಲೆಯಲ್ಲಿ ಕಡೆದಿರುವ ನರಸಿಂಹ ದೇವರ ದರ್ಶನ ಮಾಡಬೇಕು. ಈ ಪರಿಯ ದರ್ಶನ ಬಹಳ ಅಪೂರ್ವವೇ ಸರಿ. ಸಿಖ್‌ಧರ್ಮದ ಸಂಸ್ಥಾಪಕರಾದ ಗುರು ನಾನಕರು (ಸು.೧೫೦೦) ದೇಶಸಂಚಾರಮಾಡುತ್ತಾ ಬೀದರ್‌ಗೂ ಆಗಮಿಸಿದರು. ಒಂದು ಗುಡ್ಡದ ಬುಡದಲ್ಲಿ ವಿಶ್ರಾಂತಿಗಾಗಿ ಕುಳಿತರು. ನೀರಿನ ಬವಣೆಯಿದೆಯೆಂಬುದು ತಿಳಿದಾಗ ಆ ಗುಡ್ಡಕ್ಕೆ ತಮ್ಮ ಪಾದವನ್ನು ಮುಟ್ಟಿಸಿದರು. ಅವರ ತಪೋಮಹಿಮೆಯಿಂದ ಒಡನೆಯೇ ಪುಣ್ಯಜಲವು ಉಕ್ಕಿಹರಿಯಿತು. ಅದು ಈಗ ನಾನಕ್ ಝರಾ ಎಂಬ ಹೆಸರಿನ ಅತ್ಯಂತ ದೊಡ್ಡದಾದ ಪುಣ್ಯಕ್ಷೇತ್ರವಾಗಿದೆ. ಆ ಝರಾವನ್ನು ವಿಶಾಲವೂ ಸುಂದರವೂ ಆದ ಸರೋವರ ವಾಗುವಂತೆ ಪರಿಷ್ಕರಿಸಿಕೊಂಡಿದ್ದಾರೆ. ಅಮೃತಸರದಲ್ಲಿರುವ ಗುರು ದ್ವಾರವನ್ನೇ ಹೋಲುವ ಭವ್ಯವಾದ ಗುರುದ್ವಾರವನ್ನು ಸಿಕ್ಖರೇ ಕೂಡಿ ನಿರ್ಮಿಸಿಕೊಂಡಿದ್ದಾರೆ. ಬೀದರ್‌ನಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಸಿಕ್ಖರು ವಾಸವಾಗಿದ್ದು, ಕೆಲವು ವಿದ್ಯಾಸಂಸ್ಥೆಗಳನ್ನೂ ನಡೆಸುತ್ತಿದ್ದಾರೆ. ಭರತಖಂಡದ ಎಲ್ಲೆಡೆಗಳಿಂದಲೂ ಸಿಕ್ಕರು ಯಾತ್ರಿಕರಾಗಿ ಬೀದರ್‌ಗೆ ಆಗಮಿಸುತ್ತಾರೆ. ಗುರುನಾನಕ್ ಜಯಂತಿಯೇ ಮೊದಲಾದ ಪರ್ವ ಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ಗುರುದ್ವಾರಕ್ಕೆ ಹೊಂದಿ ಕೊಂಡಂತೆ ಯಾತ್ರಿನಿವಾಸಗಳಿವೆ, ಧರ್ಮಶಾಲೆಗಳಿವೆ. 'ಲಂಗರ್' ಎಂದು ಕರೆಯುವ ಅನ್ನಸತ್ರದಲ್ಲಿ ದಿನದ ೨೪ ಘಂಟೆಯೂ ಯಾತ್ರಿಕ ರಿಗೆ ಉಚಿತವಾಗಿ ಅನ್ನಾಹಾರಗಳನ್ನು ನೀಡುತ್ತಲೇ ಇರುತ್ತಾರೆ. ನಿರ್ಮಲವಾದ ಗುರುಭಕ್ತಿಯಿಂದ ಅಲ್ಲಿನ ಹತ್ತಾರು ಕೆಲಸಗಳನ್ನು ಸೇವಾರೂಪದಲ್ಲಿ ಮಾಡುವ ಗೃಹಸ್ಥರ, ಸ್ವಯಂಸೇವಕರ ಬಹು ದೊಡ್ಡ ಸಂಘಾತವೇ ಅಲ್ಲಿದೆ. ಗುರುದ್ವಾರವನ್ನು ಪ್ರವೇಶಿಸುವಾಗ ಸ್ತ್ರೀಯರಿಗೆ ತಲೆಮುಚ್ಚುವ ಸೆರಗು, ಪುರುಷರಿಗೆ ಟೋಪಿಯೋ ಒಂದು ವಸ್ತ್ರವೋ ಇರಲೇಬೇಕು.

ಬೀದರ್‌ನಲ್ಲಿ ಆನಂದ ಸಂಪ್ರದಾಯ ಎಂದು ಕರೆಯುವ, ಅದ್ವೈತವೇ ತಿರುಳಾಗಿರುವ, ಭಕ್ತಿಪಂಥವೊಂದು ಪ್ರಚಾರದಲ್ಲಿದೆ. ಅದಕ್ಕೆ ಸೇರಿದ 'ದತ್ತಾನಂದಮಠ'ವೊಂದು ಅಲ್ಲಿದೆ. ಬಸವಕಲ್ಯಾಣ ವು ಆ ಪಂಥದ ಮೂಲಸ್ಥಾನವಾಗಿದೆ.

**ಸಾಧೋಘಾಟ್:** ಬೀದರ್‌ನಗರದಿಂದ ೧೦ ಕಿಲೋಮೀಟರ್ ದೂರದಲ್ಲಿ ಸಾಧೋಘಾಟ್ ಎಂಬ ದಿವ್ಯವಾದ ಕ್ಷೇತ್ರವಿದೆ. ಸಿದ್ಧೇಶ್ವರ ಮಹಾರಾಜರೆಂಬ ಪವಾಡಪುರುಷರ ತಪೋಭೂಮಿಯಾಗಿ ಜಾಗೃತ ಕೇಂದ್ರವಾಗಿದೆ. ೨೫೦ ವರ್ಷಗಳ ಹಿಂದೆ ಅಲ್ಲಿ ಅವರು ಮಣ್ಣಿನಿಂದ ಮಾಡಿ ಸ್ಥಾಪಿಸಿದ ವಿಟ್ಠಲಮೂರ್ತಿಯು ಜೀವಕಳೆಯಿಂದ ತುಂಬಿ ಅಸಂಖ್ಯಾತ ಭಕ್ತರನ್ನು ಆಕರ್ಷಿಸುತ್ತಿದೆ. ಅದೀಗ ಅಭಿನವ ಪಂಡರ ಪುರವೇ ಆಗಿ, ಅಲ್ಲಿನಂತೆಯೇ ಭಜನೆ, ಕೀರ್ತನೆ, ಸತ್ಸಂಗಗಳು ಜರುಗುತ್ತಿವೆ.

**ಖಾನಾಪುರ:** ಭಾಲ್ಕಿ ತಾಲ್ಲೂಕಿಗೆ ಸೇರಿದೆ. ಪ್ರೇಮನಗರವೆಂದು ಖ್ಯಾತವಾಗಿದ್ದ ಅದು ತರುವಾಯದಲ್ಲಿ ಖಾನಾಪುರವಾಗಿದೆ. ಖಂಡೋಬಾ ದೇವಾಲಯವೇ ಅಲ್ಲಿನ ಪ್ರಮುಖ ಯಾತ್ರಾಕೇಂದ್ರ ವಾಗಿದೆ. ಮೈಲಾರಲಿಂಗವನ್ನೇ ಆ ಪ್ರಾಂತ್ಯದಲ್ಲಿ ಖಂಡೋಬಾ ಎಂದು ಕರೆಯುತ್ತಾರೆ. ಮಹಾರಾಷ್ಟ್ರ – ಆಂಧ್ರಗಳಿಂದಲೂ ಭಕ್ತರು ಅಲ್ಲಿ ಆಗಮಿಸುತ್ತಾರೆ. ಬಹು ದೊಡ್ಡ ವಾರ್ಷಿಕ ಜಾತ್ರೆ ನಡೆಯುತ್ತದೆ.

**ಬಸವಕಲ್ಯಾಣ:** ೧೨ನೆಯ ಶತಮಾನದಲ್ಲಿ ಭಕ್ತಿಭಂಡಾರಿ ಬಸವಣ್ಣನವರು ಅಭಿವೃದ್ಧಿಪಡಿಸಿದ ವೀರಶೈವ ಧರ್ಮದ ಪ್ರಮುಖ

ಕೇಂದ್ರವಾದ ಕಲ್ಯಾಣವು ಇಂದು ಬಸವಕಲ್ಯಾಣವೆಂಬ ಹೆಸರಿನ ತಾಲ್ಲೂಕು ಕೇಂದ್ರವಾಗಿ ಅಂದಿನ ವೈಭವದ ಸ್ಮರಣೆಗಳನ್ನೆಲ್ಲಾ ತನ್ನಲ್ಲಿ ಉಳಿಸಿಕೊಂಡು ಮಹತ್ವದ ಪುಣ್ಯಕ್ಷೇತ್ರವಾಗಿದೆ. ಮಧುಕೇಶ್ವರ, ಭೀಮೇಶ್ವರ, ಮಹಾಕಾಲೇಶ್ವರ ಮುಂತಾದ ಶಿವಾಲಯಗಳಿವೆ. ಅಂದು ಬಸವಣ್ಣನವರು ಸ್ಥಾಪಿಸಿದ್ದ ಮಹಾಮನೆ, ಅನುಭವ ಮಂಟಪಗಳಿಂದ ಅದು ಭೂಮಿಗಿಳಿದು ಬಂದ ಕೈಲಾಸವೇ ಆಗಿತ್ತು. ತ್ರಿಪುರಾಂತಕ ಕೆರೆಯೆಂಬ ಪುಣ್ಯತೀರ್ಥವಿದೆ. ಬಸವೇಶ್ವರ ದೇವಾಲಯ, ಪರುಷಕಟ್ಟೆ, ಪ್ರಭುದೇವರ ಗದ್ದಿಗೆ, ಅಕ್ಕನಾಗಮ್ಮನ ಗವಿ, ಬಸವೇಶ್ವರರ ಮಹಾಮನೆ, ನುಲಿಯ ಚಂದಯ್ಯನ ಗವಿ, ಮಡಿವಾಳ ಮಾಚಯ್ಯನ ಹೊಂಡ, ಘನಲಿಂಗರುದ್ರಮುನಿ ಗವಿ, ಅನುಭವ ಮಂಟಪ, ಭಕ್ತಿಭವನ, ಮಹಾಂತಮಠ, ಉರಿಲಿಂಗಪೆದ್ದಿ ಮಠ ಎಂಬವು ಅಲ್ಲಿನ ಪವಿತ್ರತಾಣಗಳಾಗಿವೆ.

ಸದಾನಂದಸರಸ್ವತಿಪೀಠವೆಂಬ ಬಸವಕಲ್ಯಾಣದಲ್ಲಿರುವ ಮಠವು ಆನಂದ ಸಂಪ್ರದಾಯದ ಮೂಲಮಠವಾಗಿದೆ. ಸುಮಾರು ೩೦೦ ವರ್ಷಗಳ ಹಿಂದೆ ಕಾಶೀಕ್ಷೇತ್ರದಿಂದ ಸದಾನಂದರೆಂಬ ಸಂತರು ಬಸವಕಲ್ಯಾಣಕ್ಕೆ ಬಂದು, ಅಲ್ಲಿನ ಪಾವಿತ್ರ್ಯಕ್ಕೆ ಮನಸೋತು, ಅಲ್ಲಿಯೇ ನೆಲೆಸಿ, ಆನಂದ ಸಂಪ್ರದಾಯವನ್ನು ಸ್ಥಾಪಿಸಿ, ಅಲ್ಲಿಯೇ ಜೀವಸಮಾಧಿಯನ್ನು ಸ್ವೀಕರಿಸಿದರು. ನೆರೆಯ ರಾಜ್ಯಗಳಿಂದಲೂ ಭಕ್ತರು ಅಲ್ಲಿಗೆ ಆಗಮಿಸುತ್ತಾರೆ. ವಾರ್ಷಿಕ ಜಾತ್ರೆ ಅತ್ಯಂತ ವೈಭವೋಪೇತವಾಗಿರುತ್ತದೆ.

**ಸಂಗಮ:** ಔರಾದ ತಾಲ್ಲೂಕಿಗೆ ಸೇರಿದ್ದು, ಅಲ್ಲಿಂದ ೩೨ ಕಿಲೋಮೀಟರ್ ದೂರದಲ್ಲಿದೆ. ಕಾರಂಜಾ ಮತ್ತು ಮಾಂಜರಾನದಿಗಳ ಸಂಗಮಸ್ಥಾನವಾಗಿ ಅತಿಶಯ ಪುಣ್ಯತೀರ್ಥವಾಗಿದೆ. ಸಂಗಮೇಶ್ವರ ದೇವರ ದೇವಾಲಯವು ಸಂಗಮತೀರದಲ್ಲಿದೆ.

**ಹುಮನಾಬಾದ:** ತಾಲ್ಲೂಕು ಕೇಂದ್ರವಾದ ಹುಮನಾಬಾದದಲ್ಲಿ ಬಹುದೊಡ್ಡದಾದ ವೀರಭದ್ರ ದೇವಾಲಯವಿದ್ದು ಅದೊಂದು ಪುಣ್ಯಸ್ಥಳವಾಗಿದೆ. ಆ ದೇವಾಲಯದಲ್ಲಿ ಒಂದು ಎತ್ತರವಾದ ಶಿಲಾಸ್ತಂಭವು ಮೇಲಿನಿಂದ ಅಲುಗಾಡಿಸಿದರೆ ಪೂರ್ಣವಾಗಿ ಅಲ್ಲಾಡುತ್ತದೆ, ಆದರೆ ಬೀಳುವುದಿಲ್ಲ. ಅದು ವೀರಭದ್ರನ ಮಹಿಮೆಯೆಂದು ಭಕ್ತರು ಕೊಂಡಾಡುತ್ತಾರೆ. ಆನಂದಸಂಪ್ರದಾಯದ ಪ್ರವರ್ತಕರಲ್ಲೊಬ್ಬರಾದ ಮಾಣಿಕಪ್ರಭುಗಳ ಮಠವೊಂದು ಅಲ್ಲಿದೆ. ಆ ತಾಲ್ಲೂಕಿಗೇ ಸೇರುವ ಕರಕನಳ್ಳಿ ಎಂಬಲ್ಲಿ ಆ ಪಂಥದ ಬಕ್ಕಪ್ರಭುಗಳೆಂಬ (೧೮೫೦) ಮಹಾತ್ಮರು ಐಕ್ಯರಾಗಿ ಅವರ ಮಠವೊಂದಿದೆ. ''ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು'' ಆ ಪಂಥದ ಗುರಿಯಾಗಿದೆ. ✽

> ''ಋಷೀಕೇಶ ಮೊದಲಾದ ನಿರ್ಜನ ಪ್ರದೇಶಗಳಲ್ಲಿ ಸ್ವಲ್ಪ ಕಾಲ ಸಾಧನೆ, ಭಜನೆ ಮಾಡಿ ಮನಸ್ಸು ಸ್ಥಿರವಾದ ಬಳಿಕ ಅದನ್ನು ಎಲ್ಲೇ ಇಡು, ಅಥವಾ ಎಂಥ ಜನರ ನಡುವೆಯಾದರೂ ನೀನು ಬೆರೆ – ಅದು ಏಕರೂಪವಾಗಿಯೇ ಇರುತ್ತದೆ.''
>
> — ಶ್ರೀಮಾತೆ ಶಾರದಾದೇವಿ


Vishwas *Means*
Faith - Trust
*Contact Always*



NALLUR
VISHWAS JEWELLERS

* Gold * Silver * Gems * Diamonds
An Exclusive Show Room for 916 KDMB jewellery
# 761, Near Clock Tower, V. L. Road, Davangere - 577 001
Ph: 08912 - 254476, 232746, 94834 53767
e-mail: nallurvishwas@gmail.com